ಸಂಪುಟ: 13 Volume ಸಂಚಿಕೆ: 282 Issue ಪುಟಗಳು 08 Pages ಶನಿವಾರ 27 ಡಿಸೆಂಬರ್ 2025 ₹6 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಹೆಸರಲ್ಲೇನಿದೆ? ಗುಲಾಬಿಯೆಂದು ಕರೆಯುವ ಹೂವನ್ನು ಯಾವ ಹೆಸರಿನಿಂದ ಕರೆದರೂ ಅದರ ಪರಿಮಳದಲ್ಲಿ ಯಾವ ವ್ಯತ್ಯಾಸವೂ :ಇಲ್ಲ. –ಷೇಕ್ಸ್ ಪಿಯರ್

ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ 6

ಅಯ್ಯಪ್ಪಸ್ವಾಮಿ ಮಹಾಪೂಜೆ 7

ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನ 8

## ಓವರ್ ಡಿಕ್ಕಿ: ನಾಲ್ವರು ಸಾವು

**ಚಿಕ್ಕಬಳ್ಳಾಪುರ:** ಟಿಪ್ಪರ್, ಬೈಕ್ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಒಂದೇ ಗ್ರಾಮದ ನಾಲ್ವರು ಯುವಕರು ಮೃತಪಟ್ಟಿದ್ದಾರೆ. ಈ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಅಜ್ಜವಾರ ಗೇಟ್ ಬಳಿ ನಡೆದಿದೆ. ಅಪಘಾತದಲ್ಲಿ ಅಜ್ಜವಾರ ಗ್ರಾಮದ ಅಣ್ಣ ತಮ್ಮಂದಿರಾದ ನರಸಿಂಹಮೂರ್ತಿ ಹಾಗೂ ನಂದೀಶ್ ಸೇರಿದಂತೆ ಅರುಣ್, ಮನೋಜ್ ಎಂಬುವವರು ಮೃತಪಟ್ಟಿದ್ದಾರೆ. ಕ್ರಿಸ್ಮಸ್ ಹಬ್ಬದ ಹಿನ್ನೆಲೆಯಲ್ಲಿ ಈ ನಾಲ್ವರು ಚಿಕ್ಕಬಳ್ಳಾಪುರ ನಗರದ ಚರ್ಚ್ಗಳಿಗೆ ಭೇಟಿ ನೀಡಿ ಮರಳಿ ಸ್ವಗ್ರಾಮದತ್ತ ವಾಪಸ್ಸಾಗುತ್ತಿದ್ದಾಗ ದುರ್ಘಟನೆ ಸಂಭವಿಸಿದೆ.

## ಬೀದಿ ನಾಯಿ ದತ್ತುಗೆ ಅಸ್ತು

**ಬೆಂಗಳೂರು:** ಬೀದಿ ನಾಯಿಗಳನ್ನು ದತ್ತು ಪಡೆಯಲು ಪ್ರಾಣಿಪ್ರಿಯರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅವಕಾಶ ನೀಡಿದೆ. ನಗರ ವ್ಯಾಪ್ತಿಯಲ್ಲಿ ಇರುವ ಬೀದಿ ನಾಯಿಗಳನ್ನು ದತ್ತು ಪಡೆದು ಸಾಕಲು ಮುಂದಾಗುವ ಶ್ವಾನ ಪ್ರಿಯರಿಗೆ ಕೇಂದ್ರ ನಗರ ಪಾಲಿಕೆಯಿಂದ ಹೊಸ ಯೋಜನೆಯನ್ನು



ಜಾರಿಗೊಳಿಸಲಾಗಿದೆ. ಜಿಬಿಎಯ ಪಶುಸಂಗೋಪನೆ ಇಲಾಖೆಯಿಂದ ಯೋಜನೆ ಜಾರಿ ಮಾಡಲಾಗಿದ್ದು, ಮಾನವೀಯತೆ ದೃಷ್ಟಿಯಿಂದ ಬೀದಿ ನಾಯಿಗಳನ್ನು ಸಾಕುವುದಕ್ಕೆ ಅವಕಾಶ ನೀಡಲಾಗಿದೆ. ಯೋಜನೆಯಡಿ ಸಾರ್ವಜನಿಕರು, ಸಂಘ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು ಬೀದಿ ನಾಯಿಗಳನ್ನು ದತ್ತು ಪಡೆಯಲು ಅವಕಾಶ ನೀಡಲಾಗಿದೆ.

## ಅರಮನೆ ಬಳಿ ಸ್ಫೋಟಕ್ಕೆ ಕಾರಣ..?

**ಮೈಸೂರು:** ಅರಮನೆ ಆವರಣದ ಮಾರ್ತಾಂಡ ದ್ವಾರದ ಬಳಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ಎನ್ಐಎ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುವುದು ಹಲವು ಅನುಮಾನಕ್ಕೆ ಕಾರಣವಾಗಿದೆ. ಬಲೂನ್‌ಅನ್ನು ಮಾರಾಟ ಮಾಡಲು ತಂದಿದ್ದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಉತ್ತರ ಪ್ರದೇಶ ಮೂಲಕ ಸಲೀಂ ಎಂಬಾತ ಮೃತಪಟ್ಟಿದ್ದು, ಆತನನ್ನು ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ನೋಡಿರುವುದಾಗಿ ಸ್ಥಳೀಯ ವರ್ತಕರು ತಿಳಿಸಿರುವ ಹಿನ್ನೆಲೆಯಲ್ಲಿ ಪೊಲೀಸರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ರಾಷ್ಟ್ರೀಯ ತನಿಖಾಧಿಕಾರಿಗಳೂ ಕೂಡ ಸ್ಥಳಕ್ಕೆ ಭೇಟಿ ನೀಡಿ ವಿವಿಧ ಆಯಾಮಗಳಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ.

## ಕಳೆ ಕಟ್ಟಿದ ಕ್ರಿಸ್‌ಮಸ್

**ಕಲಬುರಗಿ:** ಇಲ್ಲಿನ ಬಸವನಗರದ ಜೀಸಸ್ ಪವರ್ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿದ್ದಾರೆ.



ಬಳಿಕ ಕ್ರಿಸ್‌ಮಸ್ ಹಬ್ಬದ ಕುರಿತು, ಯೇಸುಕ್ರಿಸ್ತನ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಪಾಸ್ಟರ್ ವಿಜಕುಮಾರ ಅವರು ಕ್ರಿಸ್ತನ ಜನನ ಕುರಿತು ಅನೇಕ ವಿಚಾರಗಳನ್ನು ವ್ಯಕ್ತಪಡಿಸಿ ಸಂದೇಶ ನೀಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಸಾರ್ವಜನಿಕರಿಗೆ ಕ್ರಿಸ್‌ಮಸ್ ಶುಭ ಸಂದೇಶ ಸಾರಿದ್ದಾರೆ.

## ನೆಲಕಚ್ಚಿದ ರಾಜ್ಯ ಕಾಂಗ್ರೆಸ್ ಆಡಳಿತ

**ಬೆಂಗಳೂರು:** ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರಾ ಅಥವಾ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುತ್ತಾರಾ ಎಂಬ ಕುತೂಹಲ ಮುಂದುವರೆದಿದೆ. ಇದರ ನಡುವೆ ರಾಜ್ಯದ ಆಡಳಿತ ಸಂಪೂರ್ಣ ನೆಲಕಚ್ಚಿದೆ ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆಕ್ಷೇಪಿಸಿದ್ದಾರೆ.



ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ರೈತರ ಆತ್ಮಹತ್ಯೆ ನಿರಂತರವಾಗಿ ನಡೆಯುತ್ತಿದೆ. ರಾಜ್ಯದ ರಸ್ತೆಗಳು ಸಂಪೂರ್ಣವಾಗಿ ಗುಂಡಿಬಿದ್ದು ಹೋಗಿವೆ. ಪರಿಹಾರ ಇನ್ನೂ ರೈತರ ಕೈಗೆ ಸೇರಿಲ್ಲ ಎಂದು ವಿವರಿಸಿದ್ದಾರೆ.

ಯಾವುದೇ ಖಾಲಿ ಹುದ್ದೆಗೆ ನೇಮಕಾತಿ ಆಗುತ್ತಿಲ್ಲ. ಸರಕಾರದ ಬಳಿ ಹಣ ಇಲ್ಲ. ಅನೇಕ ಇಲಾಖೆಗಳ ನೌಕರರಿಗೆ, ಅಧಿಕಾರಿಗಳಿಗೆ ವೇತನ ಬಾಕಿ ಇದೆ. ಹಾಲು ಉತ್ಪಾದಕರಿಗೆ ಸಾವಿರಾರು ಕೋಟಿ ಬಾಕಿ ಹಣವನ್ನು ಕೊಟ್ಟಿಲ್ಲ ಎಂದು ಟೀಕಿಸಿದ್ದಾರೆ.

ಕೆಎಸ್ಆರ್ಟಿಸಿ ನಿಗಮಗಳಿಗೆ ಸಾವಿರಾರು ಕೋಟಿ ಬಾಕಿ ಇದ್ದು, ಅದು ಹೆಚ್ಚುತ್ತ ಸಾಗಿದೆ. ಗುತ್ತಿಗೆದಾರರು ಬಾಕಿ ಹಣಕ್ಕಾಗಿ ಒತ್ತಾಯಿಸಿ ಚಪ್ಪಲಿ ಸವೆಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ ಆಡಳಿತ ಸಂಪೂರ್ಣ ನೆಲ ಕಚ್ಚಿದೆ. ಮುಖ್ಯಮಂತ್ರಿ ಕುರ್ಚಿ ಗುದ್ದಾಟ ಪ್ರತಿದಿನ ಹೆಚ್ಚಾಗುತ್ತಿದೆ ಎಂದಿದ್ದಾರೆ.

## ವಿರಾಟ್ ಕೊಹ್ಲಿ ಮತ್ತೊಂದು ದಾಖಲೆ

**ನವದೆಹಲಿ:** ಭಾರತದ ದೇಶೀಯ ಕ್ರಿಕೆಟ್ ಟೂರ್ನಿ ವಿಜಯ್ ಹಜಾರೆ ಟ್ರೋಫಿಯಲ್ಲಿ ಟೀಂ ಇಂಡಿಯಾ ಆಟಗಾರರ ಭರ್ಜರಿ ಪ್ರದರ್ಶನ ಮುಂದುವರೆದಿದೆ. ಭಾರತದ ರನ್ ಮೆಷಿನ್ ವಿರಾಟ್ ಕೊಹ್ಲಿ ಮತ್ತೊಂದು ದಾಖಲೆ ನಿರ್ಮಿಸಿದ್ದಾರೆ. ವಿಜಯ್ ಹಜಾರೆ ಟ್ರೋಫಿಯಲ್ಲಿ ವಿರಾಟ್ ಕೊಹ್ಲಿ ಅದ್ಭುತ ಪ್ರದರ್ಶನ ನೀಡಿದ್ದು, ಗುಜರಾತ್ ವಿರುದ್ಧದ ಪಂದ್ಯದಲ್ಲಿ ದೆಹಲಿ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತೆ ಅದ್ಭುತ ಬ್ಯಾಟಿಂಗ್ ಪ್ರದರ್ಶನ ಮಾಡಿದ್ದಾರೆ. 61 ಎಸೆತಗಳಲ್ಲಿ 1 ಸಿಕ್ಸರ್ ಮತ್ತು 13 ಬೌಂಡರಿಗಳ ನೆರವಿನಿಂದ ಕೊಹ್ಲಿ 77 ರನ್ ಗಳಿಸಿ ವಿಶಾಲ್ ಜೈಸ್ವಾಲ್ ಬೌಲಿಂಗ್ ನಲ್ಲಿ ಔಟಾದರು. ಆ ಮೂಲಕ ಕೇವಲ 23 ರನ್ ಗಳ ಅಂತರದಲ್ಲಿ ಮತ್ತೊಂದು ಶತಕ ಸಿಡಿಸುವ ಅವಕಾಶ



ಮಿಸ್ ಮಾಡಿದ್ದು, ದೆಹಲಿ ನಾಯಕ ರಿಷಭ್ ಪಂತ್ ಕೂಡ 70 ರನ್‌ಗಳಿಸಿ ಗಮನ ಸೆಳೆದಿದ್ದಾರೆ.

# ಕೈಗೆ ವರದಿಯ ಬಿಸಿ ಸರದಿ

### ಕಾರ್ಯಕಾರಿ ಸಮಿತಿಯ ಕುತೂಹಲ | ದಿನಕ್ಕೊಂದು ತಿರುವು | ರಾಹುಲ್‌ಗೆ ಕನಿಗೋಳ್ ಮಾಹಿತಿ..?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆ ಬದಲಾವಣೆಯ ಜಟಿಲತೆ ಜಾರಿಯಲ್ಲಿದೆ. ಏತನ್ಮಧ್ಯೆ ರಾಜ್ಯ ಸರ್ಕಾರದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿದರೆ ಆಗುವ ಪರಿಣಾಮ ಕುರಿತು ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ತಂತ್ರಜ್ಞ ಸುನಿಲ್‌ಕಾನುಗೋಳ್ ಸೇರಿ ವಿವಿಧ ಮೂಲಗಳಿಂದ ವರದಿಗಳನ್ನು ತರಿಸಿಕೊಂಡಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ.

ಉನ್ನತ ಮೂಲಗಳ ಪ್ರಕಾರ, ರಾಜ್ಯದಲ್ಲಿ ಸಿಎಂ ಬದಲಾವಣೆಯ ನಿರ್ಧಾರವನ್ನು ರಾಹುಲ್ ಗಾಂಧಿ ಸದ್ಯಕ್ಕೆ ತಡಹಿಡಿದಿದ್ದಾರೆ ಎನ್ನಲಾಗಿದೆ.

**ಅಸಲಿ ವಿಷಯ..?:** ನಾಯಕತ್ವ ಬದಲಾವಣೆಗೆ ಇದು ಸೂಕ್ತ ಸಮಯವಲ್ಲ ಎಂದು ಸೂಚಿಸುವ ವರದಿ ರಾಹುಲ್ ಗಾಂಧಿ ಕೈ ಸೇರಿದೆ. ಇತ್ತೀಚೆಗೆ ದೆಹಲಿಗೆ ಹೋಗಿದ್ದ ಡಿಸಿಎಂ ಡಿಕೆ ಶಿವಕುಮಾರ್, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿಲ್ಲವಾದರೂ, ಸಿದ್ದರಾಮಯ್ಯ ಅವರ ಬೆಂಬಲಿಗರಾದ ಎಂಎಲ್ಸಿ ಬಿಕೆ ಹರಿಪ್ರಸಾದ್ ಮತ್ತು ಸಚಿವ ಕೆಜೆ ಜಾರ್ಜ್ ಇತ್ತೀಚೆಗೆ ರಾಹುಲ್ ಗಾಂಧಿ ಭೇಟಿ ಮಾಡಿ ಮುಖ್ಯಮಂತ್ರಿ ಬದಲಾವಣೆಯ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

### ಅಂತರ ಕಾಯ್ದುಕೊಂಡ ಯತೀಂದ್ರ

ರಾಜ್ಯ ರಾಜಕಾರಣದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿರುವ ಸಿಎಂ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ಯಾವುದೇ ಪ್ರತಿಕ್ರಿಯೆ ನೀಡದೇ ಅಂತರ ಕಾಯ್ದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಯತೀಂದ್ರ, ಸಿಎಂ ಬದಲಾವಣೆ ಬಗ್ಗೆ ನಾನು ಹೇಳಿದ್ದೇನೆ. ಮತ್ತೊಮ್ಮೆ ಏನನ್ನೂ ಹೇಳಬೇಕಿಲ್ಲ ಎಂದಿದ್ದಾರೆ.



### ಮಾಧ್ಯಮದವರ ವಿರುದ್ಧ ಸಿಎಂ ಗರಂ

ಸಿಎಂ ಹುದ್ದೆಗೆ ಭಾರಿ ಪೈಪೋಟಿ ನಡೆಯುತ್ತಿದೆ ಎಂಬ ಪ್ರಶ್ನೆ ಕೇಳುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಮಾಧ್ಯಮದವರ ವಿರುದ್ಧವೇ ಗರಂ ಆಗಿದ್ದಾರೆ. ದಾವಣಗೆರೆಯಲ್ಲಿ ಸುದ್ದಿಗಾರರ ಮಾತನಾಡಿ ಕರ್ನಾಟಕದಲ್ಲಿ ಬರೀ ಸಿಎಂ ಕುರ್ಚಿದ್ದೇ ಚರ್ಚೆ. ಇದಕ್ಕೆ ಮುಕ್ತಿ ಇಲ್ಲವೇ ಸರ್, ಎಂಬ ಪ್ರಶ್ನೆಗೆ, ನಿಮಗೆ ದಿನ ಬೆಳಗಾದರೆ ಸಿಎಂ ಕುರ್ಚಿ ಬಿಟ್ಟರೆ, ಬೇರೆ ಸುದ್ದಿ ಇಲ್ಲವೇ ಎಂದು ಗರಂ ಆಗಿದ್ದಾರೆ.

### ಆಹ್ವಾನ ಬಂದರೆ ಖಂಡಿತಾ ಭಾಗಿ

ಇನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಆಹ್ವಾನ ಬಂದಿಲ್ಲ. ಆಹ್ವಾನ ಬಂದರೆ ಖಂಡಿತಾ ಭಾಗವಹಿಸುವೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದ್ದಾರೆ. ಸಭೆಗೆ ಕಾಂಗ್ರೆಸ್ ಆಡಳಿತದ 3 ರಾಜ್ಯಗಳ ಸಿಎಂಗಳಿಗೆ ಆಹ್ವಾನ ನೀಡಲಾಗಿದೆ ಎಂದಿದ್ದಾರೆ.

### ಭೇಟಿ ಬಳಿಕ ಡಿಸಿಎಂ ವರಸೆ ಬದಲು

ಡಿಕೆ ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಖರ್ಗೆ ಅವರ ಬೆಂಗಳೂರು ನಿವಾಸಕ್ಕೆ ತೆರಳಿದ್ದ ಡಿಕೆ ಶಿವಕುಮಾರ್. ಚರ್ಚಿಸಿದ್ದರು. ಬಳಿಕ ಉಪಮುಖ್ಯಮಂತ್ರಿ ಡಿಕೆಶಿ ಮಾತಿನ ಧಾಟಿಯಲ್ಲೂ ವ್ಯತ್ಯಾಸ ಕಂಡಿದೆ. ಅಧ್ಯಕ್ಷನಾಗಿ ಪಕ್ಷದ ಕಚೇರಿಯಲ್ಲಿ ಕಸ ಗುಡಿಸಿದ್ದೇನೆ ಸೇರಿದಂತೆ ಅನೇಕ ಬಗೆ ಮಾತನಾಡಿದ್ದರು.

### ಸಿಎಂಗೆ ಬುಲಾವ್, ಡಿಸಿಎಂಗೆ..?

ಕಾಂಗ್ರೆಸ್ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆ ಇಂದು (ಶನಿವಾರ) ದೆಹಲಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಭವಿಷ್ಯದಲ್ಲಿನ ಹೋರಾಟಗಳ ಕುರಿತಾಗಿ ಕೆಲವೊಂದು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ. ಈ ಸಭೆಗೆ ಸಿಎಂ ಅವರಿಗೆ ಆಹ್ವಾನ ಸಿಕ್ಕಿದೆ. ಅವರು ದೆಹಲಿಗೆ ತೆರಳಲಿದ್ದಾರೆ. ಆದರೆ ಉಪಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಿಲ್ಲ. ಕರೆದರೆ ಹೋಗುವೆ ಎಂದಿದ್ದಾರೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್.

## ಶ್ಯಾಮನೂರು ಶಿವಶಂಕರಪ್ಪ ಆದರ್ಶ ಜೀವಿ

**ದಾವಣಗೆರೆ:** ದಿವಂಗತ ಶಾಮನೂರು ಶಿವಶಂಕರಪ್ಪ ಅವರು ಕರ್ನಾಟಕಕ್ಕೆ ಆದರ್ಶಮಯ ಜೀವನ ಬಿಟ್ಟು ಹೋಗಿದ್ದಾರೆ ಅವರ ಆದರ್ಶಗಳನ್ನು ಎಲ್ಲರೂ ಪಾಲನೆ ಮಾಡೋಣ ಎಂದು ಸಂಸದ ಬಸವರಾಜ ನುಡಿನಮನ ಸಲ್ಲಿಸಿದ್ದಾರೆ.



ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರಾಗಿದ್ದ ಲಿಂಗೈಕ್ಯ ಡಾ. ಶಾಮನೂರು ಶಿವಶಂಕರಪ್ಪ ಅವರ ಶಿವಗಣಾರಾಧನೆ ಮತ್ತು ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರು ಬಸವಣ್ಣನವರ ಕಾಯಕ ನಿಷ್ಠೆ ಮತ್ತು ದಾಸೋಹ ನಡೆಸಿಕೊಟ್ಟವರು. ಅವರಿಗೆ ಸಮಯ ಪ್ರಜ್ಞೆ, ಸ್ಥಿತ ಪ್ರಜ್ಞೆ ಇದ್ದಿದ್ದರಿಂದ ವ್ಯಾಪಾರದಲ್ಲೂ ಯಶಸ್ವಿಯಾದರು ಎಂದು ನುಡಿದಿದ್ದಾರೆ. ಬಾಪೂಜಿ ಸಂಸ್ಥೆಯನ್ನು ಕಟ್ಟಿ ಬೆಳೆಸಿ ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವ ಖ್ಯಾತಿ ಶಾಮನೂರು ಅವರಿಗಿದೆ. ಅದರಲ್ಲಿ ನೂರಾರು ಜನರಿಗೆ ಉದ್ಯೋಗ, ಆರೋಗ್ಯ ಭಾಗ್ಯ ಕೊಟ್ಟಿದ್ದಾರೆ ಎಂದು ಸ್ಮರಿಸಿದ್ದಾರೆ.

## ನರೇಗಾ ಬಗ್ಗೆ ಜನಾಗ್ರಹ ಒತ್ತಡ ಅಗತ್ಯ

**ಬೆಂಗಳೂರು:** ನರೇಗಾದಂತಹ ಜನಪರ ಯೋಜನೆಯನ್ನು ಮರುಸ್ಥಾಪಿಸಲು ಜನಾಗ್ರಹದ ಒತ್ತಡ ಅತ್ಯಗತ್ಯವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆಯವರು ಶುಕ್ರವಾರ ಹೇಳಿದ್ದಾರೆ.



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹೆಸರನ್ನು ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಆಜೀವಿಕಾ ಮಿಷನ್ (ಗ್ರಾಮೀಣ) ಎಂದು ಮರುನಾಮಕರಣ ಮಾಡುವ ಕೇಂದ್ರ ಸರ್ಕಾರದ ಯೋಜನೆಗೆ ಪ್ರಿಯಾಂಕ್ ಖರ್ಗೆಯವರು ವಿರೋಧಿಸಿದ್ದಾರೆ.

ಭೂ ರಹಿತ ಕಾರ್ಮಿಕರಿಗೆ ಉದ್ಯೋಗ ಮತ್ತು ಸಂಪಾದನೆಯ ಭರವಸೆಯನ್ನು ನೀಡುವುದರೊಂದಿಗೆ ಸಣ್ಣ, ಅತಿ ಸಣ್ಣ ರೈತರು ಹೊಸ ಕೃಷಿ ಚಟುವಟಿಕೆಗಳಿಗೂ ನೆರವಾಗಿದೆ. ಉಪ ಕಸುಬುಗಳನ್ನು ಕೈಗೊಳ್ಳಲು ನೆರವಾಗುವ ಮೂಲಕ ಹೆಚ್ಚುವರಿ ಆದಾಯಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ತಿಳಿಸಿದ್ದಾರೆ.

## ಅವರೊಬ್ಬ ಜಾತ್ಯಾತೀತ ನಾಯಕ



• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ

ಜಾತ್ಯಾತೀತ ಹಾಗೂ ಜನಪ್ರಿಯ ನಾಯಕರೆನಿಸಿದ್ದ ಶಾಮನೂರು ಶಿವಶಂಕರಪ್ಪನವರ ನಿಧನದಿಂದ ನಾಡಿಗೆ ಮತ್ತು ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಅವರು ಮಾಜಿ ಸಚಿವ ದಿ.ಶಾಮನೂರು ಶಿವಶಂಕರಪ್ಪ ಅವರ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಇಳಿವಯಸ್ಸಿನಲ್ಲಿಯೂ ಅತ್ಯಂತ ಕ್ರೀಯಾಶೀಲ ಶಾಮನೂರು ಶಿವಶಂಕರಪ್ಪ ಅವರು ದೇಶ ಕಂಡಂತಹ ಹಿರಿಯ ಶಾಸಕ, ಮಾಜಿ ಮಂತ್ರಿ ಹಾಗೂ ದಾವಣಗೆರೆಯ ನಗರಸಭೆ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಖಜಾಂಚಿಯಾಗೀ ಸುಧೀರ್ಘ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಅವರ ಜನ್ಮದಿನಾಚರಣೆಯಲ್ಲಿ ಹಾಗೂ ದಾಲ್ ಮಿಲ್ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದು, ಶ್ರೀಯುತರು ಶತಾಯುಷಿಗಳಾಗುತ್ತಾರೆ ಎಂಬ ನಂಬಿಕೆಯಿತ್ತು. ಅವರ ಅಗಲಿಕೆಯಿಂದ ನಾಡಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವುಂಟಾಗಿದೆ. ತಮ್ಮ ಇಳಿವಯಸ್ಸಿನಲ್ಲಿಯೂ ಅತ್ಯಂತ ಕ್ರೀಯಾಶೀಲರಾಗಿದ್ದರು ಎಂದು ವಿವರಿಸಿದ್ದಾರೆ.

## ಈಶ್ವರ ಖಂಡ್ರೆ ಸಿಎಂ ಮಾಡಿ

• ಮಲ್ಲಮ್ಮ ನುಡಿ ವಾರ್ತೆ ಹುಲಸೂರ

ರಾಜ್ಯದಲ್ಲಿ ಪವರ್ ಶೇರಿಂಗ್ ವಿಚಾರ ತೀವ್ರ ಚರ್ಚೆಯಾಗುತ್ತಿರುವ ನಡುವೆಯೇ, ಹುಲಸೂರು ಶಿವಾನಂದ ಸ್ವಾಮೀಜಿ ಮಹತ್ವದ ಹೇಳಿಕೆ ನೀಡಿದ್ದಾರೆ. ಡಿಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ





ಇಬ್ಬರೂ ಬದಿಗೆ ನಿಂತು ಈಶ್ವರ ಖಂಡ್ರೆ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಭಾಲ್ಕಿಯಲ್ಲಿ ಮಾತನಾಡಿದ ಸ್ವಾಮೀಜಿ, "ಹಿಂದೆ ಯಡಿಯೂರಪ್ಪ ಅವರ ಬೆನ್ನಿಗೆ ನಿಂತಂತೆ, ಈ ಬಾರಿ ಖಂಡ್ರೆ ಅವರ ಬೆನ್ನಿಗೆ ನಿಲ್ಲುತ್ತೇವೆ. ಅಗತ್ಯವಿದ್ದರೆ ಮಠಾಧೀಶರ ನಿಯೋಗವಾಗಿ ಹೈಕಮಾಂಡ್ ಭೇಟಿ ಮಾಡಿ ಮನವಿ ಮಾಡುತ್ತೇವೆ" ಎಂದು ಸ್ಪಷ್ಟಪಡಿಸಿದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಶ್ವರ ಖಂಡ್ರೆ ಧೀಮಂತ ನಾಯಕರು ಎಂದು ಬಣ್ಣಿಸಿದ ಅವರು, "ಹಲವು ಪ್ರಗತಿಪರ ಕೆಲಸಗಳ ಮೂಲಕ ದೇಶದಲ್ಲೇ ಚಿರಪರಿಚಿತರಾದವರು. ಖಂಡ್ರೆ ಸರಳ, ಸಜ್ಜನ ರಾಜಕಾರಣಿ; ಪ್ರಗತಿಪರ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದಾರೆ. ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ" ಎಂದು ಪ್ರಶಂಸಿಸಿದರು.

"ವೀರೇಂದ್ರಪಾಟೀಲ್ ಅವರನಂತರ ಈಶ್ವರ ಖಂಡ್ರೆಅವರೇ ಸಿಎಂ ಆಗಬೇಕು ಎಂಬುದು ಉತ್ತರ ಕರ್ನಾಟಕದ ಜನತೆಯ ಆಶಯ. ಜಾತಿ–ಬೇಧ ಮರೆತು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಭಾಗದ ಜನರಷ್ಟೇ ಅಲ್ಲ, ಮಠಾಧೀಶರ ಆಶಯವೂ ಇದೇ" ಎಂದು ಹೇಳಿದರು.

"ಕಲ್ಯಾಣ ಕರ್ನಾಟಕದ ಸಮಸ್ತ ಜನರು ಖಂಡ್ರೆ ಸಿಎಂ ಆಗುವುದನ್ನು ಬಯಸುತ್ತಿದ್ದಾರೆ. ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಸ್ಥಾನವೇ ಸಿಎಂ ಸ್ಥಾನಕ್ಕೆ ಸಮ. ಬೀದರ್ ಜಿಲ್ಲೆಯಿಂದ ಇದುವರೆಗೆ ಸಿಎಂ ಆಗಿಲ್ಲ.

–ಶಿವಾನಂದ ಸ್ವಾಮೀಜಿ

## ಅತ್ತ ಪ್ರಗತಿ ಇತ್ತ ಅವನತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುವತ್ತ ಸ್ಥಿರವಾಗಿ ಸಾಗುತ್ತಿದ್ದರೆ, ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಕರ್ನಾಟಕ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಅಟಲ್ ಪ್ರಶಸ್ತಿ ಪ್ರದಾನ ಮತ್ತು ಉತ್ತಮ ಆಡಳಿತ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿ, ಕರ್ನಾಟಕವು ಒಂದು ಕಾಲದಲ್ಲಿ ಆಡಳಿತ ಮತ್ತು ಅಭಿವೃದ್ಧಿಗೆ ಮಾದರಿ ರಾಜ್ಯವಾಗಿತ್ತು. ಅದು ಅತ್ಯುತ್ತಮ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡಿತ್ತು ಮತ್ತು ಇಡೀ ರಾಷ್ಟ್ರಕ್ಕೆ ನಾಯಕನಾಗಿ ಹೊರಹೊಮ್ಮಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ, ಈ ಎಲ್ಲ ಕಳೆದುಹೋಗಿವೆ ಮತ್ತು ರಾಜ್ಯವು ಈಗ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಪುನರುಚ್ಚರಿಸಿದ್ದಾರೆ.

ಸದ್ಯದ ಆಡಳಿತವು ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಹಾನಿಗೊಳಿಸಿದೆ. ಕರ್ನಾಟಕವು ಒಂದು ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿತ್ತು. ಉತ್ತಮ ರಾಜ್ಯದಲ್ಲಿ ಕ್ಷುಲ್ಲಕ ರಾಜಕೀಯ ನಡೆಯುತ್ತಿದೆ. ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಕಂದಾಯ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಆಡಳಿತ ಹದಗೆಟ್ಟಿದೆ ಎಂದು ಟೀಕಿಸಿದ್ದಾರೆ.

## ರಾಜ್ಯದಲ್ಲಿ ದಿನಕ್ಕೊಂದು ಹೇಳಿಕೆ, ಹೊಸ ತಿರುವು ಮಾಮೂಲಿಯಾಗಿದೆ. ಅಭಿವೃದ್ಧಿ ಇಲ್ಲ: ಬಿ.ವೈ ವಿಜಯೇಂದ್ರ

# ಚಿದ್ರಿಯಲ್ಲಿ ಬೊಮ್ಮಗೊಂಡೇಶ್ವರ ದೇವಸ್ಥಾನದ ಭೂಮಿ ಪೂಜೆ: ಪಂಡಿತರಾವ ಚಿದ್ರಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್:



ಈ ತಿಂಗಳ 29ರಂದು ಬೆಳಿಗೆ 11 ಗಂಟೆಗೆ ನಗರದ ಚಿದ್ರಿಯಲ್ಲಿರುವ ಬೋಮಗೊಂಡೇಶ್ವರ ಕಾಲೋನಿಯಲ್ಲಿ ಮಹಾತ್ಮ ಬೊಮ್ಮಗೊಂಡೇಶ್ವರ ಜನ್ಮಭೂಮಿ ಚಿದ್ರಿ ವತಿಯಿಂದ ದೇವಸ್ಥಾನದ ನೂತನ ಕಟ್ಟಡದ ಭೂಮಿ ಪೂಜೆ ನೆರವೇರಲಿದೆ ಎಂದು ಟ್ರಸ್ಟ್ ಅಧ್ಯಕ್ಷರು ಹಾಗೂ ಕಾರ್ಯಕ್ರಮದ ರುವಾರಿ ಪಂಡಿತರಾವ ಚಿದ್ರಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಬವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 14ನೇ ಶತಮಾನದಲ್ಲಿ,ಮಹಾತ್ಮ ಬೊಮ್ಮಗೊಂಡೇಶ್ವರ ಬಾಳಿ ಬದುಕಿರುವ ಇತಿಹಾಸ ಲಭ್ಯವಾಗಿದೆ. ಆಗ ನೀರಿನ ಆಭಾವವಿತ್ತು. ಇಲ್ಲಿಯ ರಾಜನ ಸೈನಿಕರಿಗೆ ಬಾಯಾರಿಕೆ ಆದಾಗ ಸೈನಿಕರು ಬೊಮ್ಮಗೊಂಡೇಶ್ವರನನ್ನು ವಿಚಾರಿಸಿ ನೀರು ಎಲ್ಲಿ ದೊರೆಯುತ್ತದೆ ಎಂದು ಕೇಳಿದಾಗ ತನ್ನ ಕೈಯ್ಯಲ್ಲಿರುವ ಕೋಲಿನಿಂದ ಅಲ್ಲಿದ್ದ ಕಲ್ಲು ಜಾರಿಸಿದಾಗ ನೀರಿನ ಝುರಿ ಹರಿದು ಸೈನಿಕರೆಲ್ಲ ನೀರು ಕುಡಿದರೆಂಬ ಇತಿಹಾಸ ನಾಗಪ್ಪ ಚಿದ್ರಿಯವರಿಂದ ತಿಳಿದುಬಂದಿದೆ. ನಾಗಪ್ಪ ಚಿದ್ರಿಯವರು ನಗರದ ನಾವದಗೇರಿಯಲ್ಲಿ ಮಹಾತ್ಮ ಬೊಮ್ಮಗೊಂಡೇಶ್ವರ ಹೆಸರಿನಲ್ಲಿ 2 ಎಕರೆ ಜಮಿನು ಪಡೆದು ಅಲ್ಲಿ ಅಭಿವೃದ್ಧಿಪಡಿಸುವುದಲ್ಲದೇ ಬೀದರ್ ಕೋಟೆಯೊಳಗಿರುವ ಮಹಾತ್ಮ ಬೊಮ್ಮಗೊಂಡೇಶ್ವರ ಕೆರೆ ಇಲ್ಲಿ ನಿಂತು ನೊಡಬೇಕೆಂಬ ರೀತಿಯಲ್ಲಿ ಚಿಂತಿಸಿರುವರು. ಒಟ್ಟಾರೆ ನಾಗಪ್ಪ ಚಿದ್ರಿಯವರಿಂದ ನಮಗೆ ಹಾಗೂ ಇಡೀ ಜಿಲ್ಲೆಯ ಜನಮಾನಸಕ್ಕೆ ಮಹಾತ್ಮ ಬೊಮ್ಮಗೊಂಡೇಶ್ವರನ ಚರಿತ್ರೆ ಗೊತ್ತಾಗಿದೆ. ಅವರನ್ನು ಸದಾ ಸ್ಮರಿಸಲೆಂದೇ ಚಿದ್ರಿಯಲ್ಲಿ ಅವರ ಹೆಸರಲ್ಲಿ ಟ್ರಸ್ಟ್ ಸ್ಥಾಪಿಸಿ ಮಂದಿರ ನಿರ್ಮಿಸಲು ಭೂಮಿ ಪೂಜೆ ಆಯೋಜಿಸಲಾಗಿದೆ ಎಂದು ಪಂಡಿತರಾವ ಚಿದ್ರಿ ವಿವರಿಸಿದರು.

ಕಾರ್ಯಕ್ರಮದ ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ಸಮಾರಂಭದ ವಿವರಣೆ ನೀಡಿ, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಅವಧೂತಪೂರ ಯಲ್ಲಾಲಿಂಗ ಮಠದ ಪೂಜ್ಯ ಮಚ್ಚೇಂದ್ರ ಮುತ್ಯಾ, ಚೊಂಡಿ ಮಠದ ಜಗನ್ನಾಥ ಮಹಾರಾಜ, ಉಚ್ಚಾಧ ಗೋಪಾಲ ಮಹಾರಾಜ, ಹುಮನಾಬಾದಿನ ಸಿದ್ದಯ್ಯ ಆಧುನಿಕ ಒಡೆಯರ್, ಮೈಲಾರದ ಪೂಜ್ಯ ಮಲ್ಲಪ್ಪ ಹಿರೇವಗ್ಗೆ ವಹಿಸಲಿದ್ದು, ಭೂಮಿ ಪೂಜೆಯನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರು ಹಾಗೂ ಮಾಜಿ ಸಚಿವ ಹೆಚ್ ಎಂ ರೇವಣ್ಣ ನೆರವೇರಿಸುವರು. ಪೌರಾಡಳಿತ ಹಾಗೂ ಹಜ್ ಸಚಿವ ರಹೀಮ್ ಖಾನ್ ಅಧ್ಯಕ್ಷತೆ ವಹಿಸಲಿದ್ದು ರತ್ನಗಂಬಳಿ ಪೂಜೆಯನ್ನು ಸಂಸದ ಸಾಗರ್ ಖಂಡ್ರೆ ನೆರವೇರಿಸುವರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹುಮನಾಬಾದ್ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಸದಸ್ಯರಾದ ಡಾ ಚಂದ್ರಶೇಖರ್ ಪಾಟೀಲ್, ಭೀಮರಾವ್ ಪಾಟೀಲ್, ಎಂ.ಜಿ ಮೊಳೆ, ಮಾಜಿ ಸಚಿವ ಬಂಡೆಪ್ಪ ಖಾಶಂಪುರ, ಮಾಜಿ ವಿಧಾನ ಪರಿಷತ್ ಸಭಾಪತಿ ರಘುನಾಥರಾವ ಮಲ್ಕಾಪುರೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ, ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜು ಜಾಬಶೆಟ್ಟಿ,

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಗೀತಾ ಪಂಡಿತರಾವ ಚಿದ್ರಿ, ಬೆಂಗಳೂರಿನ ಆರ್.ಟಿ.ಒ ಕಚೇರಿಯ ರಾಜಶೇಖರ ಬಿರಾದಾರ ಚಿದ್ರಿ ಮುಖ್ಯ ಅಥಿತಿಗಳಾಗಿ ಭಾಗವಹಿಸುವರು ಅತಿಥಿಗಳಾಗಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ, ಕೆ ಪುಂಡಲಿಕರಾವ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ಸೇಠ್, ಬಿಜೆಪಿ ಯುವ ಮುಖಂಡ ಈಶ್ವರ್‌ಸಿಂಗ್ ಠಾಕೂರ್, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ವಿಜಯಕುಮಾರ ಖಾಶೆಂಪುರ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬಾಬುರಾವ್ ಮಲ್ಕಾಪುರೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಮಾಳಗೆ, ಬುತ್ತಿ ಬಸವಣ್ಣ ದೇವಸ್ಥಾನ ಕಮಿಟಿ ಅಧ್ಯಕ್ಷ ರಮೇಶ ಮಾಶೆಟ್ಟಿ ಚಿದ್ರಿ, ನಗರಸಭೆ ಸದಸ್ಯರಾದ ಇಂದುದುಮತಿ ಚಿದ್ರಿ, ರಾಜಾರಾಮ ಚಿಟ್ಟಾ, ಗೊಂಡ ಸಮಾಜದ ಮಾಜಿ ಅಧ್ಯಕ್ಷ ಎಂ.ಎಸ್ ಕಟಗಿ, ಪತ್ರಕರ್ತ ಮಾಳಪ್ಪ ಅಡಸಾರೆ, ಗೋಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ, ಉದ್ಯಮಿ ಡಾ.ರತಿಕಾಂತ ಮಜಗೆ ಹಾಗೂ ಇತರರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸುವರು.

ಆದ ಕಾರಣ ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸೋಮಶೇಖರ ಬಿರಾದಾರ ಚಿದ್ರಿ ಕೋರಿದರು.

ಚೊಂಡಿ ಮಠದ ಪೂಜ್ಯ ಜಗನ್ನಾಥ ಮಹಾರಾಜ, ಕರ್ನಾಟಕ ಗೋಂಡ ಸಮಾಜದ ಮಾಜಿ ಅಧ್ಯಕ್ಷ ಎಮ್.ಎಸ್.ಕಟಗಿ,

ಪತ್ರಕರ್ತ ಮಾಳಪ್ಪ ಅಡಸಾರೆ, ಗೋಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ, ಬುತ್ತಿ ಬಸವಣ್ಣ ದೇವಸ್ಥಾನ ಸಮಿತಿ ಅಧ್ಯಕ್ಷ ರಮೇಶ ಮಾಶೆಟ್ಟಿ, ಸಮಾಜದ ಮುಖಂಡರಾದ ತುಕಾರಾಮ ರಾಗಾಪುರ, ದೀಪಕ ಚಿದ್ರಿ, ರಾಜಕುಮಾರ ಚಿದ್ರಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಯೇಸುವಿನ ಸಂದೇಶ ಪಾಲನೆಯಿಂದ ಸುಂದರ ಸಮಾಜ ನಿರ್ಮಾಣ: ಸಾಗರ್ ಖಂಡ್ರೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಸುಂದರ ಸಮಾಜ, ರಾಷ್ಟ್ರ ನಿರ್ಮಾಣಕ್ಕೆ ಯೇಸು ಕ್ರಿಸ್ತರ ಅಮೂಲ್ಯ ಮಾನವೀಯ ಸಂದೇಶಗಳನ್ನು ಎಲ್ಲರೂ ಪಾಲಿಸುವುದು ತುಂಬಾ ಅಗತ್ಯ ಎಂದು ಸಂಸದ ಸಾಗರ್ ಖಂಡ್ರೆ ಹೇಳಿದರು.

ಫೇಥ್ ಎ. ಜಿ. ಚರ್ಚ್ ನಲ್ಲಿ ಕ್ರಿಸ್ ಮಸ್ ಹಬ್ಬದ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಅವರು ಮಾತನಾಡಿದರು. ಯೇಸುವಿನ ಪ್ರಮುಖ ಸಂದೇಶಗಳಾದ ಪ್ರೀತಿ, ಶಾಂತಿ, ಕ್ಷಮೆ, ಸಹೋದರತ್ವ ಮತ್ತು ಸೌಹಾರ್ದತೆಯನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಮಾನವ ಕುಲದ ಉದ್ಧಾರಕ್ಕೆ ಶ್ರಮಿಸುವುದು ಬಹುಮುಖ್ಯ ಎಂದು ತಿಳಿಸಿದರು. ಫಾಸ್ಟರ್ ಅಶೋಕ್ ಯೇಸುವಿನ ಸಂದೇಶ ನೀಡಿದರು. ಫಾಸ್ಟರ್ ದಯಾನಂದ ಗುಲಬರ್ಗಾ ಪ್ರಾರ್ಥನೆ ನಡೆಸಿಕೊಟ್ಟರು. ಫಾಸ್ಟರ್ ಗಳಾದ ರಾಜಕುಮಾರ್ ಬೋರಾಳೆ, ಕಿಶೋರ್, ಜೀವನ ಬೇದ್ರೆ ಪ್ರಮುಖರಾದ ದೇವಿದಾಸ್ ರೇಷ್ಮೆ, ಸಚಿನ್, ಸತೀಶ್ ಮಾಳಗೆ, ಎಂ.ಪಿ. ರಾಜಕುಮಾರ, ಲಾಲಪ್ಪ ಸಿಂಧೆ, ಹನಕ್ ಮೊಜೆಸ್, ವಿನೋದ, ದೀಪಕ, ಪ್ರೇಮ, ರೋಶನ, ವೈದ್ಯರಾದ ವಸಂತ ಪವಾರ್, ಗುಂಡೇರಾವ್ ಶೆಡೋಳೆ, ಸಜ್ಜಲ್ ಬಳತೆ, ನಿತೀನ್ ಪಾಟೀಲ ಇದ್ದರು.

## ಹಾರಕೂಡದಲ್ಲಿ ಕುಸ್ತಿ ಪ್ರದರ್ಶನ.



ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :

ತಾಲೂಕಿನ ಹಾರಕೂಡ ಗ್ರಾಮದಲ್ಲಿ ಸದ್ಗುರು ಚನ್ನಬಸವ ಶಿವಯೋಗಿಗಳ 74ನೇ ಜಾತ್ರಾ ಮಹೋತ್ಸವ ನಿಮಿತ್ಯ ಥಿಯೇಟರ್ ಕುಸ್ತಿಯ ಹುಮನಾಬಾದ ಮಾಜಿ ಸಚಿವರಾದ ರಾಜಶೇಖರ ಪಾಟೀಲ ಜಂಗಿ ಪೈಲ್ವಾನರ ಥಿಯೇಟರ್ ಕುಸ್ತಿ ಉದ್ಘಾಟಿಸಿದರು. ಜೈ ಹನುಮಾನ್ ಅಖಾಡ ಪುಣೆ ಮಾವುಲಿ ಕೊಕಟೆ ಹಾಗೂ ಹರಿಯಾಣ ತಾಲೀಮ್ ನ ಭಂಟಿಕುಮಾರ ಹರಿಯಾಣ ಮಧ್ಯೆ ಜರುಗಿದ ಕೊನೆ ಕುಸ್ತಿ ಜರುಗಿತು. ಕೊನೆ ಕುಸ್ತಿಯಲ್ಲಿ ವಿಜೇತರಾದ ಪುಣೆ ಜೈ ಹನುಮಾನ್ ಅಖಾಡ ಮಾವುಲಿ ಕೊಕಟೆ ಅವರಿಗೆ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು 2 ಲಕ್ಷ ರೂಪಾಯಿ ಪರಾಜಿತರಿಗೆ 1 ಲಕ್ಷ ನಗದು ನೀಡಿ ಸತ್ಕರಿಸಿ, ಆಶೀರ್ವದಿಸಿದರು. ಮಹಾರಾಷ್ಟ್ರ, ದೆಹಲಿ, ಹರ್ಯಾಣ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕರ್ನಾಟಕದ ವಿವಿಧಡೆಯಿಂದ ಸಾವಿರಾರು ಪೈಲ್ವಾನರು ಭಾಗವಹಿಸಿದ್ದರು. ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚೆನ್ನವೀರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಹಿರನಾಗಾಂವ ಪೂಜ್ಯ ಶ್ರೀ ಮ.ನಿ.ಪ್ರ. ಜಯಶಾಂತಲಿಂಗ ಮಹಾಸ್ವಾಮಿಗಳು. ಕಲಬುರ್ಗಿಯ ಶ್ರೀ ಮ.ನಿ.ಪ್ರ. ಚರಲಿಂಗ ಮಹಾಸ್ವಾಮಿಗಳು ಹಾಗೂ ಹುಬ್ಬಳ್ಳಿ, ಶ್ರೀ ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು. ಶಾಸಕರಾದ ಶರಣು ಸಲಗರ, ಮಾಜಿ ಸಚಿವರಾದ ರೇವುನಾಯಕ ಬೆಳಮಗಿ. ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ. ಕಲಬುರ್ಗಿಯ ಮನೋರೋಗ ತಜ್ಞರಾದ ಡಾ. ಅಮೂಲ ಡಿ. ಪತಂಗೆ. ಬೀದರ ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ. ಸಿದ್ರಾಮಪ್ಪ ಗುದಗೆ. ಮೇಘರಾಜ ನಾಗರಾಳೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ವಿಠಲ ಹೂಗಾರ, ಸಂತೋಷ ಅಳ್ಳೆ ನಿರೂಪಿಸಿದರು.

## ಸಂಖ್ಯಾಜ್ಞಾನದ ಬಲವರ್ಧನೆಗೆ ಕಲಿಕಾ ಹಬ್ಬ ಸಹಕಾರಿ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:



ಎಫ್ ಎಲ್ ಎನ್ ಆಧಾರಿತ ಮಕ್ಕಳ ಕಲಿಕಾ ಹಬ್ಬವು ಮಕ್ಕಳ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಪರಿಕಲ್ಪನೆಗಳ ಬಲವರ್ಧನೆಗೆ ಸಂತೋಷದಾಯಕ ಹಾಗೂ ಅನುಭವಯುಕ್ತ ಕಲಿಕೆಯ ವಾತಾವರಣವನ್ನು ಪ್ರೇರೇಪಿಸುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದವೀರಯ್ಯ ರುದ್ನೂರ ಹೇಳಿದರು.

ಇಲ್ಲಿನ ಪಿ.ಎಂ.ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತ್ರಿಪೂರಾಂತದಲ್ಲಿ ಪೂರ್ವ ಮತ್ತು ಪಶ್ಚಿಮ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳು ನಲಿಯುತ ಕಲಿಯುವುದು ಮತ್ತು ಕಲಿತದ್ದುನ್ನು ಸಮುದಾಯದ ಮುಂದೆ ಪ್ರದರ್ಶಿಸುವುದು ಹಾಗೂ ಮಕ್ಕಳಿಗೆ ಶೈಕ್ಷಣಿಕವಾಗಿ ಬಲವರ್ಧನೆಗೊಳಿಸಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

ದೈಹಿಕ ಶಿಕ್ಷಣ ಪರಿವೀಕ್ಷಕ ನಾಗನಾಥ ದುಬಲಗುಂಡೆ ಮಾತನಾಡಿ ಮಕ್ಕಳು ಸಾಧಿಸಿರುವ ಕಲಿಕಾ ಫಲಗಳನ್ನು ತಿಳಿಯಲು ಈ ಕಾರ್ಯಕ್ರಮ ಉತ್ತಮ ವೇದಿಕೆವಾಗಿದೆ ಎಂದರು.

ನೋಡಲ್ ಅಧಿಕಾರಿ ಶಾಲಿವಾನ ಬಿರಾದರ ಬಿ.ಆರ್.ಪಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಣ ಸಂಯೋಜಕರಾದ ರವೀಂದ್ರ ಖಂಡಾಳೆ, ಮನೋಹರ್ ಕಂಟೆಕೂರೆ, ಬಿ.ಆರ್.ಪಿ ಗಳಾದ ಪುಂಡಲೀಕ ಬಸನಾಯಕ, ಬಾಲಕೃಷ್ಣ ಪಾಟೀಲ, ಸಿ ಆರ್ ಪಿ ನಾಸೇರ ಪಟೇಲ್ ಮುಖ್ಯ ಗುರುಗಳಾದ ಶರಣಪ್ಪಾ ವಾಡೇಕರ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಮಹೇತಾಬ ಪಟೇಲ್, ಸರಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ದೇವೇಂದ್ರ ಪಟ್ನೆ, ನಾಗನಾಥ ರೆಡ್ಡಿ, ಮಸ್ತಾನ್, ದಿಲೀಪ ಬಿರಾದಾರ, ರಾಹುಲ ತುತಾರೆ, ಶಕುಂತಲಾ ಲಾಖೆ, ಅಲ್ತಾಫ್, ಶುಕೂರ, ಮಹೇಶಕುಮಾರ, ರಾಜಶೇಖರ, ಈಶ್ವರ, ರೇವಣಸಿದ್ದಪ್ಪ, ಪರಮೇಶ್ವರ, ಪ್ರಭುಲೀಲಾ, ರುಖಿಯಾ ಬೇಗಂ, ಅತಾವುಲ್ ಮುಬಿನ, ಕಲೀಂ ಚೌದರಿ, ನಬಿಸಾಬ, ಗುಂಡುಪ್ರಸಾದ್, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸಿ. ಆರ್. ಪಿ. ಗಳಾದ ಗಿರಿಧರ ಧಾನುರೆ ಸ್ವಾಗತಿಸಿದರು, ಜಗನ್ನಾಥ ಸಂತಾಜಿ ನಿರೂಪಿಸಿದರು. ವಿವಿಧ ಶಾಲೆಯ ಶಿಕ್ಷಕರು, ಮಕ್ಕಳು ಹಾಜರಿದ್ದರು

ಮಕ್ಕಳಿಗೆ ವಿವಿಧ ಸ್ಪರ್ಧೆ ನಡೆಸಿ ಪ್ರಥಮ ದ್ವಿತೀಯ ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

## 39ನೇ ಶರಣ ಮೇಳ ಕುರಿತು ಪೂರ್ವಭಾವಿ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ಭಾನುವಾರ ಬೆಳಿಗ್ಗೆ 10.30 ಗಂ–ಟೆಗೆ ನಗರದ ಗುಂಪಾ ರಸ್ತೆಯಲ್ಲಿರುವ ಎಂ.ಎಸ್.ಪಾಟೀಲ ಫಂಕ್ಷನ್ ಹಾಲ್ ಬಳಿ ಇರುವ ಬಸವೇಶ್ವರ ಫಂಕ್ಷನ್ ಹಾಲ್‌ನಲ್ಲಿ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಗಂಗಾಮಾತಾಜಿ ಅವರ ಅಧ್ಯಕ್ಷತೆಯಲ್ಲಿ 39ನೇ ಶರಣ ಮೇಳವು ಜನೇವರಿ 12, 13 ಹಾಗೂ 14ರಂದು ಮೂರು ದಿನಗಳ ಕಾಲ ಕುಡಲ ಸಂಗಮದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಸಹ ಭಕ್ತಿ ಭಾವದಿಂದ ಜರುಗಲಿದ್ದು, ಈ ಶರಣ ಮೇಳದ ಪೂರ್ವ ತಯ್ಯಾರಿ ಕುರಿತು ಪೂರ್ವಭಾವಿ ಸಭೆ ಜರುಗಲಿದೆ.

ಆದ ಕಾರಣ ಜಿಲ್ಲೆಯ ಎಲ್ಲ ಬಸವ ಭಕ್ತರು, ಬಸವಾನುಯಾಯಿಗಳು, ಬಸವನಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆ ನೀಡಬೇಕೆಂದು 39ನೇ ಸರಣ ಮೇಳದ ಗೌರವಾಧ್ಯಕ್ಷರಾದ ಬಸವರಾಜ ಬುಳ್ಳಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ವೀರಲೋಕ ಪುಸ್ತಕ ಸಂತೆಯ ಪೂರ್ವಬಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ:

ಭಾಲ್ಕಿಯ ಹಿರೇಮಠ ಅರ್ಪಿಸುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಬೀದರ ಸಹಯೋಗದೊಂದಿಗೆ ರಾಜ್ಯ ಮಟ್ಟದ ವೀರಲೋಕ ಪುಸ್ತಕ ಸಂತೆ – 2026 ಜನವರಿ 24,25 ಮತ್ತು 26 ರಂದು ಸಾಯಿ ಶಾಲೆ ಮೈದಾನ, ನೇಹರು ಕ್ರೀಡಾಂಗಣದ ಹತ್ತಿರ ಬೀದರನಲ್ಲಿ ನಡೆಯಲಿದೆ.

ಕನ್ನಡದ ಮಠ ಎಂದೆ ಖ್ಯಾತಿ ಪಡೆದ ಹಿರೇಮಠವು ಈ ಭಾಗದಲ್ಲಿ ಕನ್ನಡಕ್ಕಾಗಿ ಸಲ್ಲಿಸಿದ ಸೇವೆ ಅಪಾರವಾದದ್ದು ಹಿರೇಮಠವು ರಾಜ್ಯ ಮಟ್ಟದ ಈ ಪುಸ್ತಕ ಸಂತೆಯ ನೇತೃತ್ವ ವಹಿಸಿಕೊಂಡಿದ್ದು ಇದರ ಯಶಸ್ವಿಗಾಗಿ ಅನುಭವ ಮಂಟಪದ ಅಧ್ಯಕ್ಷರು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ದಿವ್ಯ ಸಾನಿಧ್ಯದಲ್ಲಿ, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯ ಸಮ್ಮುಖದಲ್ಲಿ ಹಾಗೂ ಬೆಂಗಳೂರಿನ ಹಿರಿಯ ಲೇಖಕರು, ಸಂಶೋಧಕರಾದ ಡಾ.ಸಂತೋಷ ಹಾನಗಲ್ಲ ಅವರ ಘನ ಉಪಸ್ಥಿತಿಯಲ್ಲಿ ಪೂರ್ವಭಾವಿ ಸಭೆಯನ್ನು ಭಾನುವಾರ ಸಂಜೆ 4:00 ಗಂಟೆಗೆ ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ ವಿದ್ಯಾನಗರ ಬೀದರನಲ್ಲಿ ನಡೆಯಲಿದೆ.ಈ ಮಹತ್ವದ ಸಭೆಗೆ ಜಿಲ್ಲೆಯ ಪ್ರಕಾಶಕರು, ಸಾಹಿತಿಗಳು, ಓದುಗರು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿ ಪುಸ್ತಕ ಸಂತೆಯ ಯಶಸ್ಸಿಗೆ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕಸಾಪ ಜಿಲ್ಲಾದ್ಯಕ್ಷ ಸುರೇಶ ಚನ್ನಶೆಟ್ಟಿ ಹಾಗೂ ಪುಸ್ತಕ ಸಂತೆಯ ಆಯೋಜ–ಕರಾದ ಗುರುನಾಥ ರಾಜಗೀರಾ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ರಾಯಚೂರು, ಬಾಗಲಕೋಟೆ ತಂಡಕ್ಕೆ ಗೆಲುವು

• ಮಲ್ಲಮ್ಮ ನುಡಿ ವಾರ್ತೆ ಬೀದರ್:



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 14 ವರ್ಷದ ಒಳಗಿನ ಬಾಲಕರ ರಾಯಚೂರು ವಲಯದ ಅಂತರ ಜಿಲ್ಲಾ ಕ್ರಿಕೆಟ್ ಪಂದ್ಯಾವಳಿ ಪ್ರಯುಕ್ತ ನಗರದಲ್ಲಿ ಶುಕ್ರವಾರ ನಡೆದ ಪಂದ್ಯಗಳಲ್ಲಿ ರಾಯಚೂರು ಹಾಗೂ ಬಾಗಲಕೋಟೆ ತಂಡಗಳು ಗೆಲುವು ಸಾಧಿಸಿದವು.

ರಾಯಚೂರು ತಂಡವು ಕಲಬುರಗಿ ತಂಡವನ್ನು ಮಣಿಸಿದರೆ, ಬಾಗಲಕೋಟೆ ತಂಡವು ಬೀದರ್ ತಂಡವನ್ನು ಪರಾಭವಗೊಳಿಸಿತು.

ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕಲಬುರಗಿ ತಂಡವು 27.2 ಓವರಗಳಲ್ಲಿ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡು ಕೇವಲ 103 ರನ್ ಗಳಿಸಿತು.ತಂಡದ ವಿಜ್ಜಿ ಎಚ್. ಮಾತ್ರ 31 ಎಸೆತಗಳಲ್ಲಿ ಅತಿ ಹೆಚ್ಚು 24 ರನ್ ಬಾರಿಸಿದರು. ಉಳಿದ ಆಟಗಾರರು ಅಲ್ಪ ರನ್‌ಗೆ ವಿಕೆಟ್ ಕಳೆದುಕೊಂಡಿದ್ದರಿಂದ ಬೃಹತ್ ಮೊತ್ತ ಪೇರಿಸುವ ತಂಡದ ಕನಸು ಕೈಗೂಡಲಿಲ್ಲ. ರಾಯಚೂರು ತಂಡದ ವರುಣಕುಮಾರ 6 ಓವರಗಳಲ್ಲಿ 3 ವಿಕೆಟ್ ಬಾಚಿದರು.

ನಂತರ ಸುಲಭ ಗುರಿಯನ್ನು ಬೆನ್ನಟ್ಟಿದ ರಾಯಚೂರು ತಂಡವು 17.1 ಓವರಗಳಲ್ಲೇ 3 ವಿಕೆಟ್ ನಷ್ಟಕ್ಕೆ 104 ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು.

ತಂಡದ ರಾಜಾ ಅಮರೇಶ್ವರ 30 ಎಸೆತಗಳಲ್ಲಿ 27 ರನ್ ಗಳಿಸಿ ತಂಡವನ್ನು ಗೆಲುವಿನ ದಡಕ್ಕೆ ತಲುಪಿಸಲು ನೆರವಾದರು. ವಸಂತ ಕುಲಕರ್ಣಿ, ಕಿರಣ ಕುಲಕರ್ಣಿ ಅಂಪೈರ್‌ಗಳಾಗಿ ಹಾಗೂ ವೀರೇಶ್ ಕೋರಳ್ಳಿ ಸ್ಕೋರರ್ ಆಗಿ ಕಾರ್ಯ ನಿರ್ವಹಿಸಿದರು. ನೆಹರೂ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಬಾಗಲಕೋಟೆ ತಂಡವು ಬೀದರ್ ತಂಡವನ್ನು ಸೋಲಿಸಿತು. ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಬಾಗಲಕೋಟೆ ತಂಡವು. 40.5 ಓವಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 191 ರನ್ ಕಲೆ ಹಾಕಿತು. ಆಕ್ರಮಣಕಾರಿ ಆಟ ಆಡಿದ ತಂಡದ ರುದ್ರ 67 ಎಸೆತಗಳಲ್ಲಿ 67 ರನ್ ಬಾರಿಸಿದರು. ಪ್ರೀತಂ ನಿಂಬರಗಿ 76 ಎಸೆತಗಳಲ್ಲಿ 50 ರನ್ ಗಳಿಸಿ ಅವರಿಗೆ ಸಾಥ್ ನೀಡಿದರು. ಎದುರಾಳಿ ತಂಡದ ಕರೂರ್ ಅಲಿ 6 ಓವಗಳಲ್ಲಿ 33 ರಗೆ 3 ವಿಕೆಟ್, ಎಂ.ಡಿ. ಫರ್ಹಾನ್ 7 ಓವಗಳಲ್ಲಿ 35 ರಗೆ 2 ಹಾಗೂ ರಾಠೋಡ್ ಸಾಯಿರಾಮ 5.5 ಓವಗಳಲ್ಲಿ 35 ರಗೆ 2 ವಿಕೆಟ್ ಪಡೆದರು.

ಬಳಿಕ ಬ್ಯಾಟ್ ಮಾಡಿದ ಬೀದರ್ ತಂಡ 31.2 ಓವಗಳಲ್ಲಿ ತನ್ನೆಲ್ಲ ವಿಕೆಗಳನ್ನು ಕಳೆದುಕೊಂಡು 147 ರಗೆ ಸೀಮಿತಗೊಂಡಿತು.

ತಂಡದ ಆದಿತ್ಯ 85 ಎಸೆತಗಳಲ್ಲಿ 53 ಮತ್ತು ಪೂರ್ಣಚಂದ 30 ಎಸೆತಗಳಲ್ಲಿ 36 ರನ್ ಗಳಿಸಿ ಹೋರಾಟ ನಡೆಸಿದರಾದರೂ ತಂಡವನ್ನು ಗೆಲ್ಲಿಸಲು ಆಗಲಿಲ್ಲ.

ಎದುರಾಳಿ ತಂಡದ ಸಮೃದ್ಧ ಏಳು ಓವಗಳಲ್ಲಿ 45 ರಗೆ 3 ವಿಕೆಟ್ ಹಾಗೂ ರುದ್ರ ಎರಡು ಓವಗಳಲ್ಲಿ 16 ರಗೆ 2 ವಿಕೆಟ್ ಪಡೆದರು. ಮುತ್ತು ಮುಷ್ಟೈನವರ್ ಹಾಗೂ ಶ್ರೀಕಾಂತ ಕುಲಕರ್ಣಿ ಅಂಪೈಗಳಾಗಿ ಮತ್ತು ಸ್ವಾತಿ ಕುಲಕರ್ಣಿ ಸ್ಕೋರರ್ ಆಗಿ ಕಾರ್ಯ ನಿರ್ವಹಿಸಿದರು.

ಪಂದ್ಯದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖಂಡರಾದ ಬಸವರಾಜ ಪಾಟೀಲ ಹಾರೂರಗೇರಿ, ದೀಪಕ್ ಚಂದಾ ಮುಖ್ಯ ಅತಿಥಿಯಾಗಿದ್ದರು. ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಅನಿಲಕುಮಾರ ದೇಶಮುಖ ಮತ್ತಿತರರು ಇದ್ದರು.

**ಶನಿವಾರದ ಪಂದ್ಯಗಳು**

ಜಿಲ್ಲಾ ಪೊಲೀಸ್ ಕವಾಯತು ಮೈದಾನ: ವಿಜಯಪುರ ಹಾಗೂ ಬೀದರ್. ನೆಹರೂ ಕ್ರೀಡಾಂಗಣ: ಕಲಬುರಗಿ ಹಾಗೂ ಬಾಗಲಕೋಟೆ.

## ದ್ವೇಷ ಭಾಷಣ ತಡೆ ಕಾಯ್ದೆ ಸಂವಿಧಾನ ವಿರೋಧಿ: ಶಾಸಕ ಪ್ರಭು ಚವ್ಹಾಣ

• ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ):



ಕರ್ನಾಟಕ ಸರ್ಕಾರವು ಅನುಷ್ಠಾನಕ್ಕೆ ತರುತ್ತಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025 ಭಾರತದ ಸಂವಿಧಾನಕ್ಕೆ ವಿರುದ್ಧವಿದ್ದು, ಇದನ್ನು ಜಾರಿಗೊಳಿಸಬಾರದೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಆಗ್ರಹಿಸಿದರು.

ಶಾಸಕರ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಬುಧವಾರ ಗ್ರಾಮ ಸಂಚಾರದ ನಂತರ ಮನವಿ ಪತ್ರವನ್ನು ಔರಾದ(ಬಿ) ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ನಂತರ ಶಾಸಕರು ಮಾತನಾಡಿ, ದ್ವೇಷ ಭಾಷಣ ತಡೆ ಕಾಯ್ದೆ ಮುಖಾಂತರ ರಾಜ್ಯ ಸರ್ಕಾರ ನಾಗರೀಕರ ಮೂಲ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಡಿ ನೀಡಿದ ಅಭಿವ್ಯಕ್ತಿ ಸ್ವಾತಂವನ್ನು ಕಾಂಗ್ರೆಸ್ ಸರಕಾರ ಕಿತ್ತುಕೊಳ್ಳುತ್ತಿದೆ. ಸರ್ಕಾರದ ಈ ನಿರ್ಧಾರವನ್ನು ಭಾರತೀಯ ಜನತಾ ಪಕ್ಷ ಖಂಡಿಸುತ್ತದೆ. ಈ ದಿಸೆಯಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಲಾಗುತ್ತಿದೆ ಎಂದರು.

ಈ ಕಾಯ್ದೆ ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ಸಾಧನವಾಗಿದೆ. ಇದರಡಿ ದ್ವೇಷ ಭಾಷಣಕ್ಕೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ನೀತಿಗಳ ವಿರುದ್ಧ ಟೀಕೆ, ಸಾಮಾಜಿಕ ಚರ್ಚೆ, ವ್ಯಂಗ್ಯ ಮಾಡುವುದು ಅಥವಾ ಸತ್ಯವನ್ನು ಹೇಳುವುದನ್ನೂ ಕೂಡ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ. ಜನರು ಭಯದಿಂದ ಮಾತನಾಡದೆ ಇರುವುದು ಸರ್ಕಾರದ ಉದ್ದೇಶವೇ ಎಂಬ ಪ್ರಶ್ನೆ ಮೂಡುತ್ತಿದೆ ಎಂದು ಆಕ್ಷೇಪಿಸಿದರು.

ಇದು ಪ್ರಜಾಪ್ರಭುತ್ವದ ಮೂಲತತ್ವಕ್ಕೆ ಹಾನಿ ಮಾತ್ರವಲ್ಲ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಯತ್ನ. ಈ ಕಾನೂನು ಪೊಲೀಸರಿಗೆ ಮತ್ತು ಸರ್ಕಾರಕ್ಕೆ ನಿರಂಕುಶ ಅಧಿಕಾರ ನೀಡುತ್ತದೆ. ಕಾಯ್ದೆ ಹೇಳುವಂತೆ ಇಲ್ಲಿನ ಅಪರಾಧಗಳಿಗೆ ಜಾಮೀನು ಇಲ್ಲ. ಜನಸಾಮಾನ್ಯರನ್ನು ಅಪರಾಧಿಗಳಾಗಿ ಮಾಡುವ ಈ ಕೀಳು ಮಟ್ಟದ ಕಾಯಿದೆ ನಮಗೆ ಬೇಕೇ? ಎಂಬ ಪ್ರಶ್ನೆ ಮೂಡಿದೆ.

ಇದರಡಿ ಪ್ರತಿಬಂಧಕ ಕ್ರಮಗಳನ್ನು ಸಹ ಉಲ್ಲೇಖಿಸಲಾಗಿದೆ. ಪೊಲೀಸರು ಅಥವಾ ಅಧಿಕಾರಿಗಳು ಸಂಭಾವ್ಯ ಅಪರಾಧ ಎಂದು ಭಾವಿಸಿ ಮುಂಚಿತವಾಗಿ ಕ್ರಮ ಕೈಗೊಳ್ಳಬಹುದು. ಇದ–ರಿಂದ ಪ್ರತಿಭಟನೆಗಳು ಸಭೆಗಳು ಅಥವಾ ಸಾಮಾಜಿಕ ಚಳವಳಿಗಳನ್ನು ತಡೆಯುವ ಉದ್ದೇಶ ಇದ್ದಂತಿದೆ. ಈ ವಿಧೇಯಕದಿಂದ ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ಸಾಮಾಜಿಕ ಮಾಧ್ಯಮ ಬಳಸುವವರು ಹೆಚ್ಚು ತೊಂದರೆಗೆ ಸಿಲುಕುತ್ತಾರೆ. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಮತ್ತು ಜನರ ಧ್ವನಿಯನ್ನು ನಾಶಪಡಿಸುವ ಇಂತಹ ಕಾಯಿದೆ ಯಾವ ಕಾರಣ–ಕ್ಕೂ ಜಾರಿಯಾಗಬಾರದು ಎಂದು ಸರ್ಕಾರವನ್ನು ಆಗ್ರಹಿಸಲಾಗುತ್ತಿದೆ.

ಅನ್ಯಾಯ ಅಥವಾ ಸರ್ಕಾರದ ತಪ್ಪುಗಳ ಬಗ್ಗೆ ಮಾತನಾಡಿದರೆ ಭಾವನಾತ್ಮಕ ಹಾನಿ ಎಂದು ಆರೋಪಿಸಿ ಬಂಧನ ಮಾಡಲು ಇದು ಪೊಲೀಸರಿಗೆ ಅಧಿಕಾರ ನೀಡುತ್ತದೆ. ಪತ್ರಕರ್ತರ ತನಿಖಾ ವರದಿಗಳು ಕೇಸಿನ ತೂಗುಗತ್ತಿ ಎದುರಿಸಬೇಕಾಗುತ್ತದೆ. ಸಾಮಾಜಿಕ ಮಾಧ್ಯಮದಲ್ಲಿ ಹಾಸ್ಯ ಅಥವಾ ಟೀಕೆಯನ್ನು ದ್ವೇಷ ಎಂದು ಕ–ರೆದು ಬ್ಲಾಕ್ ಮಾಡಬಹುದು; ಕಾನೂನು ಕ್ರಮ ಕೈಗೊಳ್ಳಬಹುದು. ಸಾಮಾಜಿಕ ಸಾಮರಸ್ಯದ ಹೆಸರಿನಲ್ಲಿ ಅಭಿವ್ಯಕ್ತಿಯನ್ನು ನಿರ್ಬಂಧಿಸುವ ಮೂಲಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ. ಈ ದೇಶದ ನಾಗರಿಕರ ಸಂವಿಧಾನದ ಹಕ್ಕುಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಈ ಕಾನೂನು ನಾಗರೀಕರ ಸ್ವಾತಂವನ್ನು ಕಿತ್ತುಕೊಳ್ಳುತ್ತದೆ; ಹೀಗಾಗಿ ಇದನ್ನು ಜಾರಿಯಾಗಲು ಅವಕಾಶ ನೀಡಕೂಡದು.

ಈ ವಿಧೇಯಕದ ಮೂಲಕ ಕಾಂಗ್ರೆಸ್ ಸರ್ಕಾರವು ಪ್ರತಿಪಕ್ಷಗಳು, ಮಾಧ್ಯಮದವರ ಮೇಲೆ ನಿಯಂತ್ರಣ ಹೇರುವುದು, ಹೆದರಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ನಮ್ಮನ್ನು, (ಬಿಜೆಪಿ), ನಮ್ಮ ಸಂಘ ಸಂಸ್ಥೆ, ಕನ್ನಡ ಸಂಘಟನೆಗಳನ್ನು ದಮನ ಮಾಡಲು ಸರಕಾರ ಹೊರಟಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ರಾಮಶೆಟ್ಟಿ ಪನ್ನಾಳೆ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಶಿವರಾಜ ಅಲ್ಮಾಜೆ, ಮಂಡಲ ಕಾರ್ಯದರ್ಶಿ ಖಂಡೋಬಾ ಕಂಗಟೆ ಮುಖಂಡರಾದ ವಸಂತ ಬಿರಾದಾರ, ಶಿವಾಜಿರಾವ ಪಾಟೀಲ ಮುಂಗನಾಳ, ಧೊಂಡಿಬಾ ನರೋಟೆ, ರಾಮರೆಡ್ಡಿ ಪಾಟೀಲ, ಶಿವಾಂಜಯ ಬಿರಾದಾರ, ರವೀಂದ್ರ ರೆಡ್ಡಿ ಉಜನಿ, ಈರಾರೆಡ್ಡಿ ನಾಗನಪಲ್ಲಿ, ರಾವಸಾಬ ಪಾಟೀಲ, ಶರಣು ಪಾಟೀಲ, ಯಾದುರಾವ ಸಗರ, ಪ್ರಕಾಶ ಮೇತ್ರೆ, ಮಾರುತಿರೆಡ್ಡಿ ಪಟ್ನೆ, ಗೋವಿಂದ ರೆಡ್ಡಿ, ಸಂಜು ಉಪ್ಪಾರ, ಸಂಜುರೆಡ್ಡಿ, ಶಿವಾರೆಡ್ಡಿ, ವಿಠಲರೆಡ್ಡಿ, ಪ್ರಕಾಶ ಬೇರಕೂರೆ, ದೀಪಕ ಸಜ್ಜನಶೆಟ್ಟಿ, ಉದಯ ಸೋಲಾಪೂರೆ, ಪ್ರಕಾಶ ಜೀರ್ಗೆ, ಪ್ರದೀಪ ಪವಾರ, ಧನಾಜಿ ರಾಠೋಡ ಸೇರಿದಂತೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಅಜೀಜುಲ್ಲಾ ಸರ್ಮಸ್ತ್ ಅವರಿಗೆ ಮೌಲಾನಾ ಅಬುಲ್ ಕಲಾಂ ಆಜಾದ್ ಅಲಂಬರ್ದರ್ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲಬುರಗಿಯ ಹಿರಿಯ ಪತ್ರಕರ್ತ ಅಜೀಜುಲ್ಲಾ ಸರ್ಮಸ್ತ ಅವರನ್ನು ಹೈದರಾಬಾದಿನ ರಾಜ್ಯಮಟ್ಟದ *"ಮೌಲಾನಾ ಅಬುಲ್ ಕಲಾಂ ಆಜಾದ್ ಅಲಂಬರ್ದರ್ ಪ್ರಶಸ್ತಿ"* ಗೆ ಆಯ್ಕೆ ಮಾಡಲಾಗಿದೆ.

ಕರ್ನಾಟಕದ ಏಕೈಕ ಸಾಹಿತ್ಯಿಕ ಮತ್ತು ಪತ್ರಿಕೋದ್ಯಮ ವ್ಯಕ್ತಿಯಾಗಿ ಅಜೀಜುಲ್ಲಾ ಸರ್ಮಸ್ತ ಅವರು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಉಳಿದ ಎಲ್ಲಾ ಪ್ರಶಸ್ತಿ ಪುರಸ್ಕೃತರು ತೆಲಂಗಾಣ ರಾಜ್ಯಕ್ಕೆ ಸೇರಿದವರು.

ಡಿಸೆಂಬರ್ 27 ರಂದು ಶನಿವಾರ ಸಂಜೆ 7 ಗಂಟೆಗೆ ಹೈದರಾಬಾದಿನ ಉರ್ದು ಘರ್ ಮುಘಲ್ಪುರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಹೈದರಾಬಾದ್ನ ಬಜ್ಮ ಇಲ್ಮ್ ಹಾಗೂ ಅದಬ್ ನ ವತಿಯಿಂದ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಸಂಸ್ಥೆಯ ಅಧ್ಯಕ್ಷ ಡಾ. ನಾದರ್ ಅಲ್–ಮಸ್ದೋಸಿ ಅವರು ಕಾರ್ಯಕ್ರಮವನ್ನು ಆಯೋಜಿಸಲಿದ್ದಾರೆ. ಹೈದ್ರಾಬಾದಿನ ಉಸ್ಮಾನಿಯಾ ಯುವರ್ಸಿಟಿ ಉರ್ದು ವಿಭಾಗದ ಮಾಜಿ ಅಧ್ಯಕ್ಷ ಪ್ರೊಫೆಸರ್ ಮಜೀದ್ ಬೇದಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

# ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಾಗಿ ಹೊರ ಹೊಮ್ಮಬೇಕು: ವೆಂಕಟೇಶ ಪ್ರಸಾದ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕ್ರೀಡಾಸಕ್ತಿ ಹೆಚ್ಚುತ್ತಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ, ಚಂದ್ರಕಾಂತ ಪಾಟೀಲ್ ಶಾಲೆಯ ಮಕ್ಕಳಿಗೆ ಅತ್ಯಾಧುನಿಕ ಕ್ರೀಡಾಂಗಣವೂ ಬಲ ನೀಡಲಿದ್ದು, ನಿರಂತರ ಅಭ್ಯಾಸದ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಾಗಿ ಹೊರ ಹೊಮ್ಮಬೇಕು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ ಪ್ರಸಾದ ಹೇಳಿದರು

ನಗರದ ಚಂದ್ರಕಾಂತ ಪಾಟೀಲ್ ಇಂಗ್ಲಿಷ್ ಮಾಧ್ಯಮ ಶಾಲೆ(ಸಿಬಿಎಸ್ಇ) ಯಲ್ಲಿ ಡಾ.ಬಿ.ಜಿ.ಪಾಟೀಲ್ ಕ್ರೀಡಾಂಗಣ ಲೋಕಾರ್ಪಣೆ, 37ನೇ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಅತ್ಯುತ್ತಮ ಸೌಲಭ್ಯ, ಗುಣಮಟ್ಟದ ಕ್ರೀಡಾಂಗಣ ನಿರ್ಮಿಸಿದ್ದು, ಶಾಲೆ ವಿದ್ಯಾರ್ಥಿಗಳು ನಿತ್ಯ ಪಾಠದ ನಂತರ ಕನಿಷ್ಠ ಎರಡು ಗಂಟೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೊಬೈಲ್, ಗೇಮ್, ಟಿವಿಯಿಂದ ದೂರ ಉಳಿದು, ಕ್ರಿಕೆಟ್, ಟಬಾಲ್, ಓಟ, ಬಾಸ್ಕೆಟ್ ಬಾಲ್ ಸೇರಿ ಇತರೆ ಕ್ರೀಡೆ ಅಭ್ಯಾಸದಲ್ಲಿ ಸಕ್ರೀಯವಾಗಿದ್ದರೆ ದೈಹಿಕ, ಮಾನಸಿಕ ಆರೋಗ್ಯ ಸುಸ್ಥಿರವಾಗಿರುತ್ತದೆ. ಅಧ್ಯಯನಕ್ಕೂ ಪೂರಕವಾಗಿರುತ್ತದೆ. ದಿನವಿಡೀ ಚಟುವಟಿಕೆಯಿಂದ ಇರುವಂತೆ ಶಕ್ತಿ ನೀಡುತ್ತದೆ ಎಂದು ಹೇಳಿದರು.

ಎಸ್‌ಬಿ ಪಾಟೀಲ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಚಂದ್ರಕಾಂತ ಬಿ.ಪಾಟೀಲ್ ಮಾತನಾಡಿ, ಭವಿಷ್ಯದಲ್ಲಿ ಕಲ್ಯಾಣ ಕರ್ನಾಟಕದಿಂದ ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಹೊರ ಹೊಮ್ಮಬೇಕು ಎಂದು ಹೇಳಿದರು.

ರಾಷ್ಟ್ರೀಯ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಶ್ರೇಯಾಂಕಾ ಪಾಟೀಲ್ ಮಾತನಾಡಿದರು. ಎಸ್‌ಬಿ ಪಾಟೀಲ್ ಗ್ರೂಪ್‌ನ ಅಧ್ಯಕ್ಷ ಡಾ.ಬಿಜಿ ಪಾಟೀಲ್ ಮಾತನಾಡಿದರು. ಎಸ್‌ಬಿ ಪಾಟೀಲ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಕೈಲಾಶ್ ಬಿ.ಪಾಟೀಲ್ ಮತ್ತು ಶಾಲಾ ಪ್ರಾಂಶುಪಾಲ ಕೆ.ರವಿಕುಮಾರ ಇತರರಿದ್ದರು.

» **ಅಂತಾರಾಷ್ಟ್ರೀಯ ಮಟ್ಟದ ಅಂಕಣ**

ಕಲ್ಯಾಣ ಕರ್ನಾಟಕ ಭಾಗದಲ್ಲೇ ಪ್ರಥಮ ಬಾರಿಗೆ ಖಾಸಗಿ ಸಿಬಿಎಸ್ಇ ಶಾಲೆಯೊಂದರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಯುರೋಪಿಯನ್ ಮೇಕ್ ಕ್ರೀಡಾಂಗಣ ಚಂದ್ರಕಾಂತ ಪಾಟೀಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿರ್ಮಿಸಲಾಗಿದೆ. ಎಲ್ಲ ಅಂತಾರಾಷ್ಟ್ರೀಯ ಮಾನದಂಡಗಳನ್ನು ಅನುಸರಿಸಿ, ಗುಣಮಟ್ಟದ ಸಾಮಗರಿ ಬಳಸಿ ಯುರೋಪಿಯನ್ ಮೇಕ್ ಸಿಂಥೆಟಿಕ್ ಟರ್ಫ್ ಮತ್ತು ಸ್ಯಾಂಡ್ ವಿಚ್‌ನಿಂದ ಮೈದಾನ ನಿರ್ಮಿಸಲಾಗಿದೆ. ಈ ಅಂಕಗಣದಲ್ಲಿ ಕ್ರಿಕೆಟ್, ಟಬಾಲ್, ಖೋ ಖೋ, ಕಬ್ಬಡ್ಡಿ, ಉದ್ದ ಜಿಗಿತ, ಎತ್ತರ ಜಿಗಿತ, ಹಾಕಿ ಆಡಬಹುದು.

ಓಟಕ್ಕೆ ಪ್ರತ್ಯೇಕ ಸಿಂಥೆಟಿಕ್ ಟ್ರಾಕ್ ಸಹ ಹೊಂದಿದೆ. ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಅಭ್ಯಾಸಕ್ಕೆ ಇರುವ ಎಲ್ಲ ವ್ಯವಸ್ಥೆ, ಮಾನದಂಡದ ಸಾಮರ್ಥ್ಯ ಇಲ್ಲಿ ಅಳವಡಿಸಲಾಗಿದೆ.

» **ಆಕರ್ಷಕ ಪಥಸಂಚಲನ**

ಕ್ರೀಡಾಕೂಟದ ನಿಮಿತ್ತ ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ಭಾರತದ ಪುರಾತನ ಋಷಿಗಳು, ವಿಜ್ಞಾನಿಗಳಾದ ಪಾಣಿನಿ, ಸಾಂದಿಪನಿ, ಕಾನಡ, ವ್ಯಾಸರ ಹೆಸರಿನ ತಂಡ ಗಳು, ಎನ್‌ಸಿಸಿ, ಸ್ಕೌಟ್ಸ್ ಗೈಡ್ಸ್ ತಂಡಗಳು ಪರೇಡ್ ಕಮಾಂಡರ್ ನೇತೃತ್ವದಲ್ಲಿ ಕ್ರಮಬದ್ಧವಾಗಿ ಹೆಜ್ಜೆ ಹಾಕಿದ ಪಥಸಂಚಲನ ಗಮನ ಸೆಳೆಯಿತು. ಕ್ರೀಡಾಜ್ಯೋತಿ ಬೆಳಗಿಸಿ, ಪಾರಿವಾಳಗಳನ್ನು ಹಾರಿಬಿಟ್ಟು ಕಾರ್ಯಕ್ರಮ ಉದ್ಘಾಟಿಸಲಾಯಿತು. ಪುಟ್ಟ ಮಕ್ಕಳಿಂದ ಸಾಂಸತಿಕ

**ಕಠಿಣ ಸಂದರ್ಭ ಎದುರಿಸಲು ಕ್ರೀಡೆ ಸಹಕಾರಿ. ಹೆತ್ತವರು ಮಕ್ಕಳಿಗೆ ಬರೀ ಪಾಠವಷ್ಟೇ ಅಲ್ಲ, ಆಟಕ್ಕೂ ಆದ್ಯತೆ ನೀಡಬೇಕು. ಮಕ್ಕಳು ಹೆತ್ತವರಿಗೆ ಗೌರವ ನೀಡಬೇಕು. ತ್ಯಾಗ, ಶ್ರಮವಿದ್ದರೆ ಕ್ರೀಡೆಯಲ್ಲಿ ಸಾಧನೆ ಸಾಧ್ಯ. ಇಂಜಿನೀಯರ್, ವೈದ್ಯಕಿಯ ಮಾತ್ರ ದೊಡ್ಡದು ಎಂಬ ಕಾಲಟ್ಟ ಬದಲಾಗಿದ್ದು, ಕ್ರೀಡಾ ಸೇರಿ ಸಾವಿರಾರು ಅವಕಾಶಗಳಿವೆ. ನಮ್ಮ ಮಹಿಳಾ ತಂಡ ವಿಶ್ವಕಪ್ ಗೆದ್ದಿದೆ. ಕಲಬುರಗಿಯ ಶ್ರೇಯಾಂಕ್ ರಾಷ್ಟ್ರಮಟ್ಟದ ಕ್ರಿಕೆಟ್ ಪಟುವಾಗಿ ಹೊಮ್ಮಿದ್ದಾರೆ. ಕಲಬುರಗಿ ಮಕ್ಕಳು ದೊಡ್ಡ ಪಟುವಾಗಿ ಹೊರ ಹೊಮ್ಮಬಹುದು.**

**ವೆಂಕಟೇಶ ಪ್ರಸಾದ, ಅಧ್ಯಕ್ಷ**
**ರಾಜ್ಯ ಕ್ರಿಕೆಟ್ ಅಸೋಸಿಯೇಷನ್**

# ಆರ್ಥಿಕ ನೆರವಿಗೆ ರಾಜ್ಯ ಸರಕಾರದ ಖಾತರಿ: ನಾಗಮಾರಪಳ್ಳಿ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ತೀವ್ರ ಸ್ವರೂಪದ ಆರ್ಥಿಕ ಸಂಕಟದಲ್ಲಿ ಸಿಲುಕಿರುವ ನಾರಂಜಾ ಸಹಕಾರಿ ಸಕ್ಕರೆ ಕಾರಖಾನೆಗೆ ಎನ್‌ಸಿಡಿಸಿಯಿಂದ 550 ಕೋಟಿ ರೂ. ಆರ್ಥಿಕ ನೆರವು ಕೊಡಿಸಲು ರಾಜ್ಯ ಸರಕಾರ ನೆರವಾಗಬೇಕು ಎಂದು ಕಾರಖಾನೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ ಮನವಿ ಮಾಡಿದ್ದಾರೆ.

ಈ ಕುರಿತು ಬೆಂಗಳೂರಿನಲ್ಲಿ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಕಾರಖಾನೆ ಎದುರಿಸುತ್ತಿರುವ ಆರ್ಥಿಕ ಸಮಸ್ಯೆ ಮತ್ತು ಈ ಸಮಸ್ಯೆಗೆ ಕಾರಣವಾದ ಅಂಶಗಳ ಬಗ್ಗೆ ಸೂರ್ಯಕಾಂತ್ ನಾಗಮಾರಪಳ್ಳಿ ಅವರು ಕಬ್ಬು ಅಭಿವೃದ್ಧಿ ಆಯುಕ್ತರಾದ ಗೋವಿಂದರೆಡ್ಡಿ ಅವರಿಗೆ ಸಂಪೂರ್ಣ ಮಾಹಿತಿ ನೀಡಿ ಮನವರಿಕೆ ಮಾಡಿಕೊಟ್ಟಿದ್ದಾರೆ.

ಕಾರಖಾನೆಯ ನಿರ್ಮಾಣಕ್ಕಾಗಿ ಮಾಡಿದ ಸಾಲ, ಎಫ್‌ಆರ್‌ಪಿಗಿಂತ ಅಧಿಕ ಬೆಲೆ ಪಾವತಿಸಿದ್ದರಿಂದ ಉಂಟಾದ ನಷ್ಟ, ಉಚಿತ ಸಕ್ಕರೆ ವಿತರಣೆಯಿಂದ ಆಗಿರುವ ನಷ್ಟ ಮತ್ತು ಬ್ಯಾಂಕ್ ಸಾಲದ ಬಡ್ಡಿ ಪಾವತಿಯಿಂದಾದ ಆರ್ಥಿಕ ಹೊರೆ ಕುರಿತು ಸೂರ್ಯಕಾಂತ್ ಅವರು ಮಾಹಿತಿ ನೀಡಿದ್ದಾರೆ.

ರೈತ ಸದಸ್ಯರು, ಖಾಯಂ ನೌಕರರು, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗ ಮಾಡುವವರೂ ಸೇರಿದಂತೆ ಸುಮಾರು 2 ಲಕ್ಷ ಜನ ಈ ಕಾರಖಾನೆಯನ್ನು ಅವಲಂಬಿಸಿದ್ದಾರೆ. ತೀವ್ರಸ್ವರೂಪದ ಆರ್ಥಿಕ ಸಮಸ್ಯೆಯಿಂದಾಗಿ ಕಾರಖಾನೆಯನ್ನು ಮುನ್ನಡೆಸಿಕೊಂಡು ಹೋಗುವುದು ಕಷ್ಟಸಾಧ್ಯವಾಗಿದ್ದು, ಕಾರಖಾನೆ ಬಂದ್ ಆದಲ್ಲಿ, 2 ಲಕ್ಷ ಜನರ ಬದುಕು ಪ್ರಭಾವಿತವಾಗುತ್ತದೆ. ಕಬ್ಬು ಬೆಳೆಗಾರರು ತೀವ್ರ ಸಂಕಟಕ್ಕೆ ಸಿಲುಕಿ ಇನ್ನಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಸೂರ್ಯಕಾಂತ್ ತಿಳಿಸಿದ್ದಾರೆ.

ರಾಜ್ಯ ಸರಕಾರವು ಸಹಕಾರಿ ಕ್ಷೇತ್ರದ 5 ಕಾರಖಾನೆಗಳಿಗೆ ಎನ್‌ಸಿಡಿಸಿಯಿಂದ ಆರ್ಥಿಕ ನೆರವು ಕೊಡಿಸಲು ಪ್ರಸ್ತಾವನೆ ಸಲ್ಲಿಸಿದೆ. ಈ ಐದು ಕಾರಖಾನೆಗಳೊಂದಿಗೆ ನಾರಂಜಾ ಸಹಕಾರಿ ಸಕ್ಕರೆ ಕಾರಖಾನೆಯ ಪ್ರಸ್ತಾವನೆಯನ್ನೂ ಎನ್‌ಸಿಡಿಸಿಗೆ ಸಲ್ಲಿಸಬೇಕು. ಇತರ ಸಹಕಾರಿ ಕಾರಖಾನೆಗಳ ಮಾದರಿಯಲ್ಲಿ ನಾರಂಜಾ ಕಾರಖಾನೆಯೂ ಎನ್‌ಸಿಡಿಸಿ ಸಾಲ ಪಡೆಯಲು ಖಾತರಿ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ನಾರಂಜಾ ಕಾರಖಾನೆಯ ನಿರ್ಮಾಣ ವೆಚ್ಚ 93 ಕೋಟಿ ರೂ.ಗಳಾಗಿತ್ತು. ಆದರೆ, ರೈತ–ರಿಂದ ಸಂಗ್ರಹಿಸಿದ ಶೇರು ಮೊತ್ತ ಬರೀ 8.64 ಕೋಟಿ ಆಗಿತ್ತು. ಸರಕಾರದ ಶೇರು ಹಣ 14.50 ಕೋಟಿಯಾಗಿತ್ತು. ಬೀದರ್ ಡಿಸಿಸಿ ಬ್ಯಾಂಕ್ ಸೇರಿದಂತೆ ಸಹಕಾರಿ ಬ್ಯಾಂಕುಗಳಿಂದ 69.90 ಕೋಟಿ ರೂ. ಸಾಲ ಪಡೆಯಲಾಗಿತ್ತು. ಇದರಲ್ಲಿ ಡಿಸಿಸಿ ಬ್ಯಾಂಕಿನ ಸಾಲ 57.90 ಕೋಟಿ, ಹಾಗೂ ಅಪೆಕ್ಸ್ ಬ್ಯಾಂಕ್ ಸಾಲ 12 ಕೋಟಿ ಆಗಿದೆ ಎಂದು ಸೂರ್ಯಕಾಂತ್ ಅವರು ಮಾಹಿತಿ ನೀಡಿದ್ದಾರೆ.

ಒಟ್ಟು ನಿರ್ಮಾಣ ವೆಚ್ಚದಲ್ಲಿ ರೈತರ ಶೇರುಹಣದ ಪಾಲು ಬರೀ ಶೇ. 9.29 ರಷ್ಟು ಆಗಿದ್ದ–ರಿಂದ ಬ್ಯಾಂಕುಗಳಿಂದ ಸಾಲ ಪಡೆಯುವುದು ಅನಿವಾರ್ಯವಾಗಿತ್ತು. ಡಿಸಿಸಿ ಬ್ಯಾಂಕಿನಿಂದ ಶೇ.15 ರ ದರದಲ್ಲಿ ಸಾಲ ಪಡೆಯಲಾಗಿತ್ತು. ಈ ಸಾಲದ ಮೇಲಿನ ಬಡ್ಡಿಯು ಬೃಹತ್ತಾಗಿ ಬೆಳೆದಿದೆ. 2002–03 ರಿಂದ 2024–25 ವರೆಗಿನ ಅವಧಿಯಲ್ಲಿ ಸಾಲದ ಮೇಲಿನ ಬಡ್ಡಿಯ ಮೊತ್ತವು 668 ಕೋಟಿ ರೂ. ಆಗಿದೆ. ಈ ಬೃಹತ್ ಮೊತ್ತವನ್ನು ಪಾವತಿಸುವ ಸ್ಥಿತಿಯಲ್ಲಿ ಕಾರಖಾನೆ ಇಲ್ಲ. ಬಡ್ಡಿಯ ಹೊರೆಯು ಕಾರಖಾನೆಯ ಆರ್ಥಿಕ ಸ್ಥಿತಿಯನ್ನು ಸಂಪೂರ್ಣವಾಗಿ ಹದಗೆಡುವಂತೆ ಮಾಡಿದೆ. ಡಿಸಿಸಿ ಬ್ಯಾಂಕಿನಿಂದ ಪಡೆದ ಅಸಲು ಸಾಲದ ಮೊತ್ತ 57.90 ಕೋಟಿ ರೂ. ಮಾತ್ರ ಆಗಿದೆ ಎಂದು ತಿಳಿಸಿದ್ದಾರೆ.

# ಒತ್ತಡದ ಕೆಲಸದ ದಿಂದ ಮುಕ್ತರಾಗಲು ನಿಷ್ಠೆಯಿಂದ ಕೆಲಸ ಮಾಡಿ: ಇಒ ಸುಲ್ಪಿ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:

ಯಾವುದೇ ಕೆಲಸ ಇರಲಿ, ಅದನ್ನು ಪ್ರಾಮಾಣಿಕ ಮತ್ತು ನಿಷ್ಠೆಯಿಂದ ಮಾಡಬೇಕು. ಅಂ–ದಾಗ ಮಾತ್ರ ನಾವು ಒತ್ತಡ ಮುಕ್ತವಾಗಿ ಕೆಲಸ ಮಾಡಲು ಸಾಧ್ಯ. ಇಲ್ಲದಿದ್ದರೆ ವಿನಾಕಾರಣ ಸಮಸ್ಯೆ ಎದುರಿಸಬೇಕಾಗುತ್ತದೆ ಅದಕ್ಕೆ ಅವಕಾಶ ಕೊಡಬಾರದು ಎಂದು ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ರಮೇಶ ಸುಲ್ಪಿ ಹೇಳಿದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ಕ್ಲರ್ಕ್ ಕಂ. ಡಾಟಾ ಎಂಟ್ರಿ ಆಪರೇಟರ್ ನೌಕರರ ಕ್ಷೇಮಾಭಿವೃದ್ಧಿ ಸಂಘ ಬಸವಕಲ್ಯಾಣ ವತಿಯಿಂದ ಉತ್ತಮ ಆಡಳಿತ ದಿನ ಹಾಗೂ ಕಂಪ್ಯೂಟರ್ ಪಿತಾಮಹಾ ಚಾರ್ಲಸ್ ಬ್ಯಾಬೇಜ್ ರವರ ಹುಟ್ಟಹಬ್ಬದ ಪ್ರಯುಕ್ತ ಶುಕ್ರವಾರ ತಾ.ಪಂ.ಸಭಾಂಗಣದಲ್ಲಿ ಹಮ್ಮಿಕೊಂಡ ಕಂಪ್ಯೂಟರ್ ಆಪರೇಟರ್‌ಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಮೋದಲು ಮ್ಯಾನುವಲ್ ನಲ್ಲಿ ಬರೆಯುವ ವ್ಯವಸ್ಥೆ ಇತ್ತು, ಆದರೆ ಇಗ ಕಂಪ್ಯೂಟರ ವ್ಯವಸ್ಥೆ ಬಂದ ಮೇಲೆ ಸಾಕಷ್ಟು ಬದಲಾವಣೆ ಆಗುವ ಜೊತೆಗೆ ಉಜ್ವಲ ಭವಿಷ್ಯ ರೂಪಿಸಿ ಕೋಳ್ಳಲು ಬ್ಯಾಬೇಜ್ ಅವರ ಕೊಡುಗೆ ಅಪಾರವಾಗಿದೆ ಎಂದರು. ಕಂಪ್ಯೂಟರ್ ಆಪರೇಟರ್ ಗಳೆಂದು ನೇಮಕ ಮಾಡಿಕೊಂಡು ನಂತರ ಬಡ್ತಿ ಸೇರಿದಂತೆ ಸಾಕಷ್ಟು ಅವಕಾಶಗಳನ್ನು ಸರ್ಕಾರ ನೀಡಿದೆ. ಅವುಗಳ ಸದುಪಯೋಗ ಪಡೆದುಕೊಳ್ಳುವುದರ ಜೊತೆಗೆ ಜನರಿಗೆ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಕೊಡುವ ಮೂಲಕ ಬರವಸೆ ಗಳಿಸಬೇಕು ಎಂದರು.

ತಾಲ್ಲೂಕು ಪಂಚಾಯತ್ ಸಕಾಯಕ ನಿರ್ದೇಶಕರಾದ(ಉ.ಖಾ) ಮಹ್ಮದ್ ಸಲೀಂ ಸರ್ ಅವರು ಮಾತನಾಡಿ, ಸರ್ಕಾರದ ಆದೇಶದಂತೆ ಬ್ಯಾಬೇಜ್ ಅವರ ಜನ್ಮ ದಿನವನ್ನು ಕಂಪ್ಯೂಟರ್ ಆಪರೇಟರ್ ದಿನ ಎಂದು ಆಚರಿಸಲಾಗುತ್ತದೆ. ಕಂಪ್ಯೂಟರ್ ಬಂದ ಮೇಲೆ ಸಾಕಷ್ಟು ವಿರೋಧಗಳಾದವು, ನಂತರ ಹಂತ–ಹಂತ ವಾಗಿ ಅದರ ಮಹತ್ವ ಜೊತೆಗೆ ಉದ್ಯೋಗ ಸೃಷ್ಠಿ ಆದವು ಅದರ ಲಾಭವು ಸಾಕಷ್ಟು ಜನರಿಗೆ ಆಗಿದೆ. ಹೀಗಾಗಿ ಎಲ್ಲಾ ಡಿಇಒ ಅವರು ಚನ್ನಾಗಿ ಸೇವೆ ಮೂಲಕ ಗ್ರಾಮಸ್ಥರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದರು.

ಜನ್ಮದಿನದ ಅಂಗವಾಗಿ ತಾಂತ್ರಿಕ ಸಂಯೋಜಕ ಶಿವರಾಜ ಪಾಟೀಲ್, ಡಿಇಒ ಸಂಘದ ತಾಲ್ಲೂಕು ಅಧ್ಯಕ್ಷ ಸಂಜುರೆಡ್ಡಿ ಹಾಗೂ ಡಿಇಒ ಗಣಪತಿ ಮಾತನಾಡಿ ತಮ್ಮ ಅನಿಸಿಕೆ ಹಂಚಿಕೊಂಡರು.

ಈ ಸಂರ್ಭದಲ್ಲಿ ತಾ.ಪಂ.ವ್ಯವಸ್ಥಾಪಕ ರಾಜರೆಡ್ಡಿ ಪಾಟೀಲ್, ಸಂಘದ ಜಿಲ್ಲಾ ಉಪಾಧ್ಯಕ್ಷ ಧೋಂಡಿರಾಮ, ಟಿಎಂಐಎಸ್ ವರದಾಶಂಕರ, ಐಇಸಿ ಸಂಯೋಜಕ ವೀರಾರೆಡ್ಡಿ, ಎಎ ತ್ರಿವೇಣಿ, ನರೇಗಾ ಸಿಬ್ಬಂದಿ, ಡಿಇಒ, ಬಿಎಫ್ಟಿ ಹಾಗು ಕಾಯಕ ಮಿತ್ರ ಇದ್ದರು. ಡಿಇಒ ದಯಾನಂದ ಪಾಟೀಲ್ ನಿರೂಪಿಸಿದರು. ಗಣಪತಿ ವಂದಿಸಿದರು.

# ಯೇಸುಕ್ರಿಸ್ತ ಭುವನದ ಬೆಳಕು; ಪಾಸ್ಟರ್ ರಾಬರ್ಟ್‌ಕೈವ್



• ಮಲ್ಲಮ್ಮ ನುಡಿ ವಾರ್ತೆ ಸೈದಾಪುರ:

ಮನುಷ್ಯನ ಪಾಪಗಳನ್ನು ನಿವಾರಿ ವದಕ್ಕಾಗಿ ಯೇಸು ಪರಲೋಕದಲ್ಲಿರುವ ಸಿಂಹಾಸನವನ್ನು ತೊರೆದು ಮನುಷ್ಯರ ಸೇವೆ ಮಾಡುವುದಕ್ಕೆ ಭೂಮಿಗೆ ಬಂದು ಮಾನವನ ಕತ್ತಲೆಯ ಬದುಕಿನ ಬೆಳಕಾಗಿದ್ದಾನೆ ಎಂದು ಸಭಾ ಪಾಲಕ ರಾಬರ್ಟ್ ಹೇಳಿದರು.

ಅವರು ಸೈದಾಪುರದ ಎಲ್ –ಶಡ್ಡೈ ಬ್ಲೆಸಿಂಗ್ ಚರ್ಚ್ ನಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಯೇಸುವಿನ ಜೀವನದ ಸಂದೇಶಗಳನ್ನು, ಕ್ರಿಸ್ತನು ಭೂಮಿಗೆ ಬಂದ ಉದ್ದೇಶವನ್ನು ತಿಳಿಸಿದರು.

ಯೇಸು ಯಾವುದೇ ಜಾತಿ, ಜನಾಂಗ, ಧರ್ಮ ಸ್ಥಾಪನೆಗಾಗಿ ಬರಲಿಲ್ಲ ಮಾನವೀಯ ಮೌಲ್ಯಗಳ ಬಿತ್ತುವುದಕ್ಕಾಗಿ, ಶಾಂತಿ ಸ್ಥಾಪನೆಗಾಗಿ ಪಾಪದ ವಿಮೋಚಕನಾಗಿ ಧರೆಗೆ ಅವತರಿಸಿದ ದೇವರ ಮಗ ಎಂದು ಭೋದಿಸಿದರು.

ಯೇಸು ಕನ್ನಿಕೆಯ ಗರ್ಭದಲ್ಲಿ ಜನಿಸಿ ಗೋದಲಿನಲ್ಲಿ ಆಶ್ರಯ ಪಡೆದು, ಶಿಲುಬೆಯ ಮೇಲೆ ಮರಣ ಹೊಂದಿ, ಮತ್ತೆ ಪುನರುತ್ಥಾನಗೊಂಡು ಲೋಕದಲ್ಲಿ ಜೀವ ಸ್ವಪರೂಪನಾಗಿ ನಮ್ಮೊಂದಿಗೆ ಇದ್ದಾನೆ ಎಂದು ತಿಳಿಸಿದರು.

ಕ್ರಿಸ್ತನನ್ನು ಕೀರ್ತನೆಗಳ ಮೂಲಕ ಮಹಿಮೆ ಪಡಿಸಲಾಯಿತು. ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು. ಹಾಡು, ನೃತ್ಯ, ಬಹುಮಾನ ವಿತರಿಸುವುದರ ಮೂಲಕ ಕ್ರಿಸ್ಮಸ್ ಆಚರಿಸಿದರು.

# ಬಸವ ಭಾನು ಪ್ರಶಸ್ತಿ ಪ್ರದಾನ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:

ತಾಲೂಕಿನ ಸುಕ್ಷೇತ್ರ ಹಾರಕೂಡ ಗ್ರಾಮದಲ್ಲಿ ಪೂಜ್ಯಶ್ರೀ ಸದ್ಗುರು ಚನ್ನಬಸವ ಶಿವಯೋಗಿಗಳವರ 74ನೇ ಜಾತ್ರಾಮಹೋತ್ಸವ ನಿಮಿತ್ತವಾಗಿ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ದಿವ್ಯ ನೇತೃತ್ವದಲ್ಲಿ ಶಿವಾನುಭವ ಚಿಂತನ ಕಾರ್ಯಕ್ರಮ ಜರಗಿತು.

ಈ ಸಂದರ್ಭದಲ್ಲಿ ಪೂಜ್ಯಶ್ರೀ ಮ.ನಿ.ಪ್ರ. ಗುರುಮಹಾಂತ ಸ್ವಾಮಿಗಳು ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ ಇಳಕಲ್ ಹಾಗೂ ಪೂಜ್ಯ ಶ್ರೀ ಮ.ನಿ.ಪ್ರ. ಡಾ. ಶಿವಾನಂದ ಮಹಾಸ್ವಾಮಿಗಳು ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠ ಹುಲಸೂರ

ಇವರಿಗೆ ಹಾರಕೂಡ ಸಂಸ್ಥಾನ ಹಿರೇಮಠದ ವತಿಯಿಂದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು "ಬಸವ ಭಾನು" ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಸಾಯಗಾಂವದ ಪೂಜ್ಯ ಶ್ರೀ ಶಿವಾನಂದ ದೇವರು. ಶಾಸಕರಾದ ಶರಣು ಸಲಗರ. ಹುಮನಾಬಾದ ಶಾಸಕರಾದ

ಡಾ ಸಿದ್ದಲಿಂಗಪ ಪಾಟೀಲ. ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್. ಕಾಡ ಅಧ್ಯಕ್ಷರಾದ ಬಾಬು ಹೊನ್ನಾನಾಯಕ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ.

ಧನರಾಜ ತಾಡಂಪ್ಪಳ್ಳಿ. ಮಲ್ಲಿನಾಥ ಹಿರೇಮಠ ಹಾರಕೂಡ. ನವಲಿಂಗ ಪಾಟೀಲ. ಅಪ್ಪಣ್ಣ ಜನವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಈಶ್ವರ ಬಿ.ಖಂಡ್ರೆ ಬೀದರ ಪ್ರವಾಸ

• ಮಲ್ಲಮ್ಮ ನುಡಿ ಬೀದರ:

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಡಿಸೆಂಬರ್.28 ಮತ್ತು 29 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಡಿಸೆಂಬರ್.28 ರಂದು ಬೆಳಿಗ್ಗೆ 8 ರಿಂದ ಸಂಜೆ 7 ಗಂಟೆಯವರೆಗೆ ಬೀದರನ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ನಂತರ ಸಂಜೆ 7 ಗಂಟೆಗೆ ಬೀದರನಿಂದ ರಸ್ತೆ ಮೂಲಕ ಭಾಲ್ಕಿಗೆ ಪ್ರಯಾಣಿಸಿ ಅಲ್ಲಿಯೇ ವಾಸ್ತವ್ಯ ಮಾಡಲಿದ್ದಾರೆ.

ಡಿಸೆಂಬರ್.29 ರಂದು ಬೆಳಿಗ್ಗೆ 9 ರಿಂದ ಸಂಜೆ 8 ಗಂಟೆಯವರೆಗೆ ಭಾಲ್ಕಿಯ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಲ್ಲಿಯೇ ವಾಸ್ತವ್ಯ ಮಾಡಲಿದ್ದಾರೆಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೈಸ್ಕೂಲ್ ಗೆಳೆತನ ಮರುಕಳಿಸಿದ ಕ್ಷಣಗಳು ಇಂದಿನ ಔತಣ ಕೂಟ ಬಾಲ್ಯದ ನೆನಪುಗಳನ್ನು ಜೀವಂತಗೊಳಿಸಿತು

(ಮಲ್ಲಮ್ಮ ನುಡಿ ವಾರ್ತೆ)

ಕಾಲವು ಎಷ್ಟೇ ದೂರ ಕರೆದೊಯ್ದರೂ, ಹೃದಯದ ಅಂಗಳದಲ್ಲಿ ಉಳಿಯುವ ಕೆಲವು ಸಂಬಂಧಗಳಿಗೆ ವಯಸ್ಸು, ದೂರ, ಹೊಣೆಗಾರಿಕೆಗಳು ಎಂದಿಗೂ ಅಡ್ಡಿಯಾಗುವುದಿಲ್ಲ ಎಂಬುದನ್ನು ಇಂದಿನ ಹೈಸ್ಕೂಲ್ ಗೆಳೆಯರ ಔತಣ ಕೂಟ ಸಾಬೀತುಪಡಿಸಿತು. ವರ್ಷಗಳ ಅಂತರ, ಉದ್ಯೋಗ ಕುಟುಂಬದ ಜವಾಬ್ದಾರಿಗಳ ನಡುವೆ ಕಳೆದುಹೋದಂತೆ ಕಂಡಿದ್ದ ಗೆಳೆತನ, ಒಂದೇ ದಿನದಲ್ಲಿ ಮತ್ತೆ ಬಾಲ್ಯದ ದಿನಗಳಿಗೆ ಹಿಂದಿರುಗಿಸಿದ ಅನುಭವ ಈ ಕೂಟ ಎಲ್ಲರಿಗೂ ನೀಡಿತು.

ಹೈಸ್ಕೂಲ್ ದಿನಗಳು ಎಂದರೆ ಕೇವಲ ಪಾಠಶಾಲೆಯ ನಾಲ್ಕು ಗೋಡೆಗಳಲ್ಲ. ಅದು ಮುಗ್ಧತೆ, ನಿಸ್ವಾರ್ಥ ಸ್ನೇಹ, ಶಿಕ್ಷಕರ ಭಯ, ಪರೀಕ್ಷೆಗಳ ತಣಿವು, ಮಧ್ಯಾಹ್ನದ ಊಟದ ಡಬ್ಬಿ ಹಂಚಿಕೊಂಡ ಕ್ಷಣಗಳು, ಶಾಲೆಯ ಮೈದಾನದಲ್ಲಿ ಆಡಿದ ಆಟಗಳು, ಗುಪ್ತ ನಗು ತಮಾಷೆಗಳು ಒಂದಾಗಿ ಬದುಕಿನ ಅಮೂಲ್ಯ ಸಂಪತ್ತು. ಇಂದಿನ ಔತಣ ಕೂಟದಲ್ಲಿ ಗೆಳೆಯರು ಮುಖಾಮುಖಿಯಾದಾಗ, ಮೊದಲಿಗೆ ಕಣ್ಣುಗಳು ಗುರುತಿಸದಿದ್ದರೂ, ನಗು ಮಾತುಗಳು ಆರಂಭವಾದ ಕ್ಷಣದಲ್ಲೇ ಹಳೆಯ ಗೆಳೆತನ ಕ್ಷಣಾರ್ಧದಲ್ಲಿ ಜೀವಂತಗೊಂಡಿತು.

ನೀನು ಇನ್ನೂ ಹಾಗೇ ಇದ್ದೀಯಾ? ಅಂದು ನೀನು ಮಾಡಿದ ತಪ್ಪು ತಪ್ಪಿನ ಕ್ಲಾಸ್ ವರ್ಕ್ ಕಿತಾಪತಿ ಇನ್ನೂ ನೆನಪಿದೆ, ಎಂಬ ಮಾತುಗಳ ನಡುವೆ ನಗು ಉಕ್ಕಿಬಂದಿತು. ಕೆಲವರು ಶಿಕ್ಷಕರಿಂದ ಪಡೆದ ಬೈಸುಗಳನ್ನು ನೆನಪಿಸಿಕೊಂಡರೆ, ಇನ್ನೂ ಕೆಲವರು ಶಾಲೆಯಿಂದ ತಪ್ಪಿಸಿಕೊಂಡ ದಿನಗಳ ಕಥೆಗಳನ್ನು ಹಂಚಿಕೊಂಡರು. ಕೆಲವರ ಮಾತಿನಲ್ಲಿ ಮೊದಲ ಗೆಳೆತನದ ಮೌನ ಪ್ರೀತಿಯ ನೆನಪುಗಳು ಹೊರಬಂದವು. ಈ ಎಲ್ಲ ಮಾತುಗಳು ಹಳೆಯ ದಿನಗಳ ಸನ್ನಿವೇಶಗಳನ್ನು ಮತ್ತೆ ಕಣ್ಣಮುಂದೆ ತಂದು ನಿಲ್ಲಿಸಿದವು.

ಕೂಟದಲ್ಲಿ ಭಾಗವಹಿಸಿದ್ದ ಅಶ್ವಿನ್ ಆಣದೂರೆ, ರಮೇಶ್ ಸಜ್ಜಶೆಟ್ಟಿ, ಮಹೇಶ ಕೋಲಿ, ದೀಪಾ ಪಾಟೀಲ್, ಯೋಗೀತಾ, ಸಂಗೀತಾ, ಮಾಲಾಶ್ರೀ, ಸಪ್ನಾ, ಮಂಜುಳಾ, ಅನುಸೂಯ, ಚಂದ್ರಕಾಂತ ಹಳ್ಳಿಖೇಡಕರ್, ಲಾಲಪ್ಪಾ, ಅಫಖಾನ ಸಾಬ್, ಹುಲ್ಲೆಪ್ಪಾ ಡೋಣೆ, ಮಾರುತಿ ಡೋಣೆ, ರಾಚಮ್ಮ, ವಿಠಲ್ ರಾಜನಾಳ, ದಶರಥ, ಬಸವರಾಜ್ ಡೋಣೆ, ಸಚಿನ ರಿಕ್ಕೆ, ರಾಜಕುಮಾರ ವಗ್ಗೆ, ಅಂಬಾದಾಸ್, ಲಕ್ಷ್ಮಣ್, ನಾಗನಾಥ್ ಮಚಕುರಿ, ಮಹಾಂತೇಶ್ ಗಂಜೆ ಸೇರಿದಂತೆ ಇತರೆ ಗೆಳೆಯರು ತಮ್ಮ ತಮ್ಮ ಬಾಲ್ಯದ ಅನಿಸಿಕೆಗಳನ್ನು ಹಂಚಿಕೊಂಡರು.

ಕೆಲವರು ಶಾಲೆಯ ಕೊನೆಯ ಬೆಂಚಿನ ಕುಳಿತ ನೆನಪುಗಳನ್ನು ಹೇಳಿಕೊಂಡರೆ,



ಇನ್ನೂ ಕೆಲವರು ಮೈದಾನದಲ್ಲಿ ಆಡಿದ ಆಟಗಳು, ಶಿಕ್ಷಕರ ಕಣ್ಣು ತಪ್ಪಿಸಿ ಮಾಡಿದ ಶರಾರತ್ತುಗಳನ್ನು ನೆನಪಿಸಿಕೊಂಡರು. ಕೆಲವರ ಮಾತಿನಲ್ಲಿ ಅಂದು ಇದ್ದ ನಿರಾಳ ಜೀವನದ ಸೊಗಡು, ಇನ್ನೂ ಕೆಲವರ ಕಣ್ಣಲ್ಲಿ ಆ ದಿನಗಳ ನೆನಪಿನಿಂದ ಭಾವುಕತೆ ಕಾಣಿಸಿಕೊಂಡಿತು. ಮೊಬೈಲ್‌ಗಳು ಮತ್ತು ಸಾಮಾಜಿಕಜಾಲತಾಣಗಳಲ್ಲಿ ಬಂಧಿತವಾಗಿರುವ ಇಂದಿನ ಬದುಕಿನಲ್ಲಿ,

ಮುಖಾಮುಖಿಯಾಗಿ ಕುಳಿತು ಮನಬಿಚ್ಚಿ ಮಾತನಾಡಿದ ಈ ಕ್ಷಣಗಳು ಎಲ್ಲರ ಮನಸ್ಸಿಗೆ ಅಪಾರ ಸಂತೋಷ ನೀಡಿದವು. ಈ ಔತಣ ಕೂಟ ಕೇವಲ ಊಟದ ಕಾರ್ಯಕ್ರಮವಾಗಿರಲಿಲ್ಲ, ಅದು ಆತ್ಮೀಯತೆಯ ಮರುಸಂಪರ್ಕ, ಹಳೆಯ ಬಾಂಧವ್ಯದ ನೆನಪಾಯಿತ್ತು. ಅಂದು ಒಂದೇ ಯುನಿಫಾರ್ಮ್ ಧರಿಸಿ, ಒಂದೇ ಬೆಂಚಿನಲ್ಲಿ ಕುಳಿತವರು ಇಂದು ವಿಭಿನ್ನ ವೃತ್ತಿ, ವಿಭಿನ್ನ ಸ್ಥಾನಗಳಲ್ಲಿ ಇದ್ದರೂ, ಹೃದಯದ ಬಾಂಧವ್ಯದಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಕೆಲವರ ಕಣ್ಣಲ್ಲಿ ಭಾವುಕತೆ, ಕೆಲವರ ಮಾತಿನಲ್ಲಿ ನಿರಂತರ ನಗು, ಕೆಲವರ ಮನಸ್ಸಿನಲ್ಲಿ ಕಳೆದುಹೋದ ಬಾಲ್ಯದ ಹುಡುಕಾಟ ಈ ಎಲ್ಲ ಭಾವನೆಗಳು ಕೂಟವನ್ನು ಇನ್ನಷ್ಟು ವಿಶೇಷವಾಗಿಸಿತು. ಬಾಲ್ಯದ ಗೆಳೆತನಕ್ಕೆ ಸ್ವಾರ್ಥವಿಲ್ಲ, ಲೆಕ್ಕಾಚಾರವಿಲ್ಲ. ಅದೇ ಕಾರಣಕ್ಕೆ ವರ್ಷಗಳ ನಂತರವೂ ಅದು ಅದೆಷ್ಟು ತಾಜಾ ಅನ್ನಿಸುತ್ತದೆ. ಇಂದಿನ ಔತಣ ಕೂಟವು ಒಂದು ಮಹತ್ವದ ಸತ್ಯವನ್ನು ಮತ್ತೆ ನೆನಪಿಸಿತು ಜೀವನ ಎಷ್ಟು ಮುಂದುವರಿದರೂ, ಬಾಲ್ಯದ ನೆನಪುಗಳು ಮತ್ತು ಹೈಸ್ಕೂಲ್ ಗೆಳೆತನ ನಮ್ಮ ಬದುಕಿನ ಅಡಿಗಲ್ಲುಗಳೇ.

ಕಾಲ ಮತ್ತೆ ಹಿಂದಿರುಗುವುದಿಲ್ಲ. ಆದರೆ ಹಳೆಯ ಗೆಳೆಯರೊಂದಿಗೆ ಕಳೆದ ಕೆಲವು ಗಂಟೆಗಳು ಮತ್ತೆ ಬಾಲ್ಯದ ದಿನಗಳನ್ನು ಬದುಕಿದ ಅನುಭವ ನೀಡಿದವು. ಇಂತಹ ಕೂಟಗಳು ಮುಂದೆಯೂ ನಡೆಯಲಿ, ಹೈಸ್ಕೂಲ್ ಗೆಳೆತನದ ಸೇತು ಎಂದಿಗೂ ಮುರಿಯದಿರಲಿ ಎಂಬ ಆಶಯದೊಂದಿಗೆ, ಈ ದಿನ ಎಲ್ಲರ ಮನಸ್ಸಿನಲ್ಲಿ ಸ್ಮರಣೀಯವಾಗಿ ಉಳಿಯಿತು. ಚಂದ್ರಕಾಂತ ಹಳ್ಳಿಖೇಡಕರ್

## ಜಕಣಾಚಾರಿ ಸಂಸ್ಕರಣಾ ದಿನಾಚರಣೆ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :** 2026ರ ಜನವರಿ 1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆಯನ್ನು ಜಿಲ್ಲೆಯ ಜಿಲ್ಲಾಡಳಿತ, ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಚರಣೆ ಹಿನ್ನೆಲೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆಯನ್ನು ಜಿಲ್ಲಾ, ತಾಲೂಕು ಮಟ್ಟದ ಎಲ್ಲಾ ಕಛೇರಿಗಳಲ್ಲಿ ತಾಲ್ಲೂಕು, ಗ್ರಾಮ ಪಂಚಾಯತಗಳಲ್ಲಿ ಎಲ್ಲಾ ಅನುದಾನಿತ, ಅರೆ ಅನುದಾನಿತ ಹಾಗೂ ಸರ್ಕಾರಿ ಶಾಲಾ, ಕಾಲೇಜುಗಳಲ್ಲಿ ಮತ್ತು ತಮ್ಮ ಅಧೀನ ಕಾರ್ಯಾಲಯದಲ್ಲಿ ಈ ಜಯಂತಿಯನ್ನು ಅರ್ಥಪೂರ್ಣವಾಗಿ ಗೌರವಯುತವಾಗಿ ಅಂದು ಆಚರಿಸುವಂತೆ ಕಟ್ಟುನಿಟ್ಟುನ ಕ್ರಮಕೈಗೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವ ಮಾನವ ದಿನಾಚರಣೆಗೆ ಸೂಚನೆ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

2025ರ ಡಿಸೆಂಬರ್ 29ರ ಸೋಮವಾರ ರಂದು ರಾಷ್ಟ್ರಕವಿ ಕುವೆಂಪು ರವರ ಜನ್ಮ ದಿನಾಚರಣೆ ಅಂಗವಾಗಿ ವಿಶ್ವ ಮಾನವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆ ಅಂಗವಾಗಿ ವಿಶ್ವವಿಮಾನವ ದಿನಾಚರಣೆಯನ್ನು ಜಿಲ್ಲೆಯ ಜಿಲ್ಲಾಡಳಿತ, ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಚರಣೆ ಹಿನ್ನೆಲೆ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆ ಅಂಗವಾಗಿ ವಿಶ್ವಮಾನವ ದಿನಾಚರಣೆಯನ್ನು ಜಿಲ್ಲಾ, ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳಲ್ಲಿ ತಾಲ್ಲೂಕು, ಗ್ರಾಮ ಪಂಚಾಯತಗಳಲ್ಲಿ, ಎಲ್ಲಾ ಅನುದಾನಿತ, ಅರೆ ಅನುದಾನಿತ ಹಾಗೂ ಸರ್ಕಾರಿ ಶಾಲಾ, ಕಾಲೇಜುಗಳಲ್ಲಿ ಮತ್ತು ತಮ್ಮ ಅಧೀನ ಕಾರ್ಯಾಲಯದಲ್ಲಿ ಈ ಜಯಂತಿಯನ್ನು ಅರ್ಥಪೂರ್ಣವಾಗಿ ಗೌರವಯುತವಾಗಿ ಅಂದು ಆಚರಿಸುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ ಉಂಟಾಗಲಿದೆ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಗುರುಮಠಕಲ್ 110ಕೆವಿ ಸಬ್‌ಸ್ಟೇಷನ್‌ನಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಹಿನ್ನೆಲೆ 2025ರ ಡಿಸೆಂಬರ್ 28ರ ಭಾನುವಾರ ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಗುರುಮಠಕಲ್ ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಕಾರ್ಯ ಮತ್ತು ಪಾಲನೆ ಉಪ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಎ.ಟಿ. ರಾಠೋಡ ಅವರು ತಿಳಿಸಿದ್ದಾರೆ.

110ಕೆವಿ ವಿದ್ಯುತ್ ಉಪ ಕೇಂದ್ರಗಳ ಗುರುಮಠಕಲ್, 33ಕೆವಿ ವಿದ್ಯುತ್ ಉಪ ಕೇಂದ್ರ ಗಾಜರಕೋಟ, 33ಕೆವಿ ವಿದ್ಯುತ್ ಉಪಕೇಂದ್ರ ತೊಲಮಾಮಿಡಿಗೆ ವಿದ್ಯುತ್ ಸರಬರಾಜು ನಿಲುಗಡೆ ಮಾಡಲಾಗುವುದು. ಈ 110/33ಕೆವಿ ವಿದ್ಯುತ್ ಉಪಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡುವ ಎಲ್ಲಾ 11ಕೆವಿ ಮಾರ್ಗಗಳಿಂದ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಗುರುಮಠಕಲ್ ಪಟ್ಟಣ, ಚಂಡ್ರಿಕಿ, ಪುಟಪಾಕ, ಗಾಜರಕೋಟ, ಚಪೆಟ್ಲ, ಬೋರಬಂಡ, ನಜರಪೂರ, ಮೋಟ್ನಳ್ಳಿ, ಕಾಕಲವಾರ, ಯಂಪಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ, ತಾಂಡಗಳಿಗೆ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಗ್ರಾಹಕರು ಜೆಸ್ಕಾಂಗೆ ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀಮತಿ ಲಕ್ಷ್ಮೀಬಾಯಿಗೆ 2 ಲಕ್ಷ ರೂ.ಗಳ ಚೆಕ್ ವಿತರಣೆ



- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಯಾದಗಿರಿ ಜಿಲ್ಲೆಯ ಕರ್ನಾಟಕ ಗ್ರಾಮೀಣ ಬ್ಯಾಂಕ್ ಗಂಜ್ ಶಾಖೆ ವತಿಯಿಂದ ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮೆ ಯೋಜನೆ ವಿಮೆ ಇತ್ಯರ್ಥದ ಹಣ ಫಲಾನುಭವಿ ಕುಟುಂಬಕ್ಕೆ ಮೃತ ಕುಟುಂಬದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳ ಚೆಕ್ ಮೃತ (ಭೀಮಾಶಂಕರ) ಕುಟುಂಬದ ಸದಸ್ಯರಾದ ಶ್ರೀಮತಿ ಲಕ್ಷ್ಮೀಬಾಯಿಗೆ ವಿತರಿಸಲಾಯಿತು ಎಂದು ಯಾದಗಿರಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕರಾದ ಶ್ರೀ ಜಿ.ಎಸ್. ಕೂಡ್ಲಿಗಿ ಅವರು ತಿಳಿಸಿದ್ದಾರೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಹಿರಿಯ ವ್ಯವಸ್ಥಾಪಕರಾದ ಸುಭಾಷ ಚಂದ್ರ ಕೇಂದ್ರ ಸರ್ಕಾರ ಮಹತ್ವಾಕಾಂಕ್ಷಿ ಯೋಜನೆಯಾದ ಜೀವನ ಜ್ಯೋತಿ

ವಿಮೆ 436 ರೂ.ಗಳ ಮತ್ತು ಪ್ರಧಾನ ಮಂತ್ರಿ ಸುರಕ್ಷ ಭೀಮಾ ಯೋಜನೆಗಳ 20.ರೂ. ಕುರಿತು ಮಾಹಿತಿ ನೀಡಿದರು ಶಾಖಾ ವ್ಯವಸ್ಥಾಪಕರಾದ

ಜಡಲ್ ರಾಜು ಸಾಮಾನ್ಯವೈಯಕ್ತಿಕ ಜೀವ ವಿಮೆಗಳ ಕುರಿತು ಮಾಹಿತಿ ನೀಡಿದರು. ಈ ವೇಳೆಯಲ್ಲಿ ಶ್ರೀಧರ ಎಫ್.ಎಲ್.ಸಿ ಅವರು ಡಿಇಎಎಫ್ ಬ್ಯಾಂಕ್ ಗ್ರಾಹಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಬ್ಯಾಂಕ್ ಸಿಬ್ಬಂದಿಗಳು ಸಿದ್ದಣ, ಶ್ರೀಮತಿ ಸಾವಿತ್ರಿಕುಮಾರಿ, ಪೂಜಾ, ಸೋಫಿ ಇನ್ನಿತರರು ಉಪಸ್ಥಿತರಿದ್ದರು.

## ಸುಪ್ರೀಂಕೋರ್ಟ್ ಆದೇಶದಂತೆ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ ಆರಂಭ.

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಡಿಸೆಂಬರ್ 24, (ಕ.ವಾ) ಸುಪ್ರೀಂಕೋರ್ಟಿನ ಹೊಸ ಆದೇಶದಂತೆ ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ನಗರಸಭೆ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಬುಧವಾರ ನಗರಸಭೆ ಪೌರಾಯುಕ್ತ ಉಮೇಶ ಚವ್ಹಾಣ ಚಾಲನೆ ನೀಡಿದರು.

ಹತ್ತಿಕುಣಿ ರಸ್ತೆಯ ಏರಿಯಾದಲ್ಲಿರುವ ಬೀದಿ ನಾಯಿಗಳಿಗೆ ಹಿಡಿದು ಪಶು ಇಲಾಖೆಯಲ್ಲಿ ಸುಮಾರು 10 ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆಯನ್ನು ಮಾಡಲಾಯಿತು.

ಈ ವೇಳೆ ಮಾತನಾಡಿದ ಪೌರಾಯುಕ್ತ ಚವ್ಹಾಣ, ಸಂತಾನ ಹರಣ ಮಾಡಲಾದ ಬೀದಿ ನಾಯಿಗಳನ್ನು ಇಡಲು ಬಬಲಾದನಲ್ಲಿನ ಘನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಆಶ್ರಯ ತಾಣ ಮಾಡಲಾಗಿದೆ. ಶಸ್ತ್ರ ಚಿಕಿತ್ಸೆ ನಂತರ ಮೂರು ದಿನ ಅವುಗಳನ್ನು ಆರೈಕೆ ಮಾಡಿ ಪುನಃ ಅವುಗಳ ನಿಗದಿತ ಸ್ಥಳಕ್ಕೆ ಬಿಡಲಾಗುವುದು ಎಂದರು.

ನಗರಸಭೆ ಪೌರಕಾರ್ಮಿಕರ ಸಹಕಾರದೊಂದಿಗೆ ನಗರಸಭೆ ವ್ಯಾಪ್ತಿಯ ವಿವಿಧ ನಾಯಿಗಳನ್ನು ಪ್ರತಿದಿನ ಹಿಡಿದು ಶಸ್ತ್ರಚಿಕಿತ್ಸೆ ಸ್ಥಳಕ್ಕೆ ತರಲಾಗುತ್ತಿದೆ ಎಂದರು.

"ಶಸ್ತ್ರಚಿಕಿತ್ಸೆ" ಸಮಯದಲ್ಲಿ ನಾಯಿಗಳಿಗೆ ಸೋಂಕು ಹರಡದಂತೆ ನಿವಾರಕ ಬಳಸಲಾಗುತ್ತಿದ್ದು, ಅಲ್ಲದೆ ರೇಬಿಸ್ ನಿರೋಧಕ ಚುಚ್ಚು ಮದ್ದು ನೀಡಲಾಗುತ್ತಿದೆ. ಇದರಿಂದ ಬೀದಿ ನಾಯಿಗಳು ಒಂದು ವೇಳೆ ಮನುಷ್ಯರ ಮೇಲೆ ದಾಳಿ ಮಾಡಿದಾಗ ರೇಬಿಸ್ ರೋಗಾಣುಗಳು ಹರಡುವುದಿಲ್ಲ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು ಸೂಚಿಸಿದರು.

ಶಸ್ತ್ರಚಿಕಿತ್ಸೆ ನಡೆಸಿದ ನಾಯಿಗಳನ್ನು ಸುಲಭವಾಗಿ ಗುರುತಿಸಲು ಅವುಗಳ ಒಂದು ಭಾಗದ ಕಿವಿಯನ್ನು ಸುಮಾರು ಅರ್ಧ ಇಂಚು ಪಂಚ್ ಮಾಡಿ ಕತ್ತರಿಸಲಾಗುತ್ತಿದೆ. ಪ್ರತಿದಿನ ಅಂದಾಜು 20ರಿಂದ 25 ನಾಯಿಗಳಿಗೆ ಶಸ್ತ್ರಚಿಕಿತ್ಸೆ ನಡೆಯಲಿದೆ. ನಗರದಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ಕಂಪೌಂಡ ನಿರ್ಮಾಣ ಮಾಡಿಕೊಳ್ಳಲು ಹಾಗೂ ಬೀದಿ ನಾಯಿಗಳ ಎಚ್ಚರಿಕೆ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ವಿದ್ಯಾರ್ಥಿಗಳು ಶಿಕ್ಷಣದ ಜೊತೆ ಕ್ರೀಡಾಸಕ್ತಿ ಬೆಳೆಸಿಕೊಳ್ಳಿ: ಸಂತೋಷ ರೆಡ್ಡಿ.ಆರ್



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:**

ವಿದ್ಯಾರ್ಥಿಗಳು ಕೇವಲ ಶಿಕ್ಷಣದಲ್ಲಿ ಮಾತ್ರವಲ್ಲದೆ, ಕ್ರೀಡೆಗಳಲ್ಲಿಯೂ ಆಸಕ್ತಿ ಹೊಂದಬೇಕು ಎಂದು ಕಲಬುರಗಿಯ ಕಲ್ಯಾಣ ಕರ್ನಾಟಕ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷ ಸಂತೋಷ ರೆಡ್ಡಿ.ಆರ್ ಅವರು ಹೇಳಿದರು.

ಕೇಂದ್ರಸರ್ಕಾರ, ಯುವಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಮೇರಾ ಯುವ ಭಾರತ ಬಳ್ಳಾರಿ ಕಚೇರಿ ವತಿಯಿಂದ ಲಿಯಾ ಯೂತ್ ಅಸೋಸಿಯೇಷನ್ ಹಾಗೂ ಐಡಿಪಿಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ನಗರದ ಐಡಿಪಿಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಐಡಿಪಿಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷ ಜಯಚಂದ್ರ ರೆಡ್ಡಿ.ಇ ಅವರು ಮಾತನಾಡಿ, ವಿದ್ಯಾರ್ಥಿಗಳು ಕ್ರೀಡಾ ಮನೋಭಾವದಿಂದ ಕ್ರೀಡೆಗಳಲ್ಲಿ ಭಾಗವಹಿಸಬೇಕು. ದೈಹಿಕ ಆರೋಗ್ಯ ಸದೃಢವಾಗಿಟ್ಟುಕೊಳ್ಳಬೇಕು ಎಂದರು.

ಕ್ರೀಡಾಕೂಟದಲ್ಲಿ ವಾಲಿಬಾಲ್, ಖೋಖೋ, 100 ಮೀ. ಓಟ ಸ್ಪರ್ಧೆ, ಗುಂಡು ಎಸೆತ, ಹಗ್ಗ-ಜಗ್ಗಾಟ, ಬ್ಯಾಟ್‌ಮಿಟನ್ ಸೇರಿದಂತೆ ಮುಂತಾದ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ವಿವಿಧ ಸ್ಪರ್ಧೆಗಳ ವಿಜೇತರು: 100 ಮೀ. ಓಟ ಸ್ಪರ್ಧೆಯಲ್ಲಿ ಪ್ರಥಮವಾಗಿ ಪೂಜ, ಪಜಲ್, ದ್ವಿತೀಯವಾಗಿ ಸ್ಪಂದನ, ಟಿ.ಗಣೇಶ, ತೃತೀಯವಾಗಿ ಗಾಯಿತ್ರಿ, ರವಿ.

ಕಬ್ಬಡಿ ಸ್ಪರ್ಧೆಯಲ್ಲಿ ಪ್ರಥಮವಾಗಿ ಶ್ರಯನ್, ಪೂಜ, ದ್ವಿತೀಯವಾಗಿ ಜಗನ್, ಉಮ್ಮಿ ಅರನಿ.

ವಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮವಾಗಿ ಶ್ರೀಕಾಂತ,

ಉಮ್ಮಿಅರನಿ, ದ್ವಿತೀಯವಾಗಿ ಕುಮಾರ, ರುಷಿಕ್. ಥ್ರೋ ಬಾಲ್ ಸ್ಪರ್ಧೆಯಲ್ಲಿ ಪ್ರಥಮ ಗಾಯಿತ್ರಿ, ದ್ವಿತೀಯ ರಿಷಿಕ್.

ಗುಂಡು ಎಸೆತ ಸ್ಪರ್ಧೆಯಲ್ಲಿ ಪ್ರಥಮ ವಿನಾಯಕ, ದ್ವಿತೀಯ ಶಶಿ. ಶಾಟ್ ಪುಟ್ ಸ್ಪರ್ಧೆಯಲ್ಲಿ ಪ್ರಥಮ ಕುಮಾರ, ದ್ವಿತೀಯ ಪುಷ್ಪಲತಾ. ಬಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಪ್ರಥಮ ಕಿರಣ, ದ್ವಿತೀಯ ಪಜಲ್.

ಕ್ರೀಡಾಕೂಟದ ವಿವಿಧ ಸ್ಪರ್ಧೆಯ ವಿಜೇತರಿಗೆ ಗಣ್ಯರು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಸ್ವತಂತ್ರ ಕಾಲೇಜಿನ ಕಾಲೇಜಿನ ಸಿಇಒ ಕೆ.ವೇಣುಗೋಪಾಲ, ಎಜಿಎಂ ವೆಂಕಟಕೃಷ್ಣ, ಪ್ರಾಂಶುಪಾಲ ತಿಪ್ಪಾರೆಡ್ಡಿ.ಪಿ., ಎನ್.ಐ.ಎಫ್.ಎ.ಎ ಸಂಸ್ಥಾಪಕ ಅಧ್ಯಕ್ಷ ಆರ್.ಕೆ.ಅಬ್ರಹಾಂ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಮಸ್ಕಿ ಚೇತನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ರೆಡ್ ಡೇ ಆಚರಣೆ!



- **ಮಲ್ಮನ ನುಡಿ ವಾತೆ,ಮಸ್ಕಿ**

ಪಟ್ಟಣದ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಚೇತನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಲ್ಲಿ ಮನರಂಜನೆ ಒದಗಿಸುವ ಕಾರ್ಯಕ್ರಮವೊಂದು ಗಮನ ಸೆಳೆದಿದೆ.

ಪಠ್ಯೇತರಚಟುವಟಿಕೆಗಳ ಅಂಗವಾಗಿ ರೆಡ್ ಡೇ ಹೆಸರಿನ ವಿಶಿಷ್ಟ ಕಾರ್ಯಕ್ರಮ ಆಚರಿಸಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಕೆಂಪು ಬಣ್ಣದ ಬಟ್ಟೆ ತೊಟ್ಟುಮಿಂಚಿದರು. ಜೊತೆಗೆ ಕೆಂಪು ಬಣ್ಣದಿಂದ ಕೂಡಿರುವ ತರಕಾರಿ, ಹಣ್ಣು, ಚಾಕಲೇಟ್, ಗೊಂಬೆಗಳು ಹಾಗೂ ಇತರೆ ವಸ್ತುಗಳನ್ನು ತಂದು ಪ್ರದರ್ಶನ ಮಾಡಿದರು.

ಟೊಮ್ಯಾಟೊ, ಸೇಬು ಹಣ್ಣು, ದಾಳಿಂಬೆ, ಸ್ಟ್ರಾಬೇರಿ, ಜಾಮ್ ಹಾಗೂ ವಿಧ ವಿಧವಾದ ಚಾಕ್‌ಲೇಟ್‌ಗಳನ್ನು ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು.

ಅಲ್ಲದೇ ಮಕ್ಕಳಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಜಾಗೃತಿ ಮೂಡಿಸಲು ಈ ರೆಡ್ ಡೇಯನ್ನು ವಿದ್ಯಾರ್ಥಿಗಳು ಆಚರಿಸಿದ್ದಾರೆ.

ಈ ವೇಳೆ, ಸಂಸ್ಥೆಯ ಅಧ್ಯಕ್ಷ ಪಾರ್ಶ್ವನಾಥ್ ಕೋಲಾರ್, ಮುಖ್ಯ ಗುರುಗಳಾದ ಬಸನಗೌಡ, ಜೆ ಆರ್ ಎಂ ಪ್ರೌಢಶಾಲೆ ಮುಖ್ಯ ಗುರುಗಳಾದ ಸಿದ್ದಾರೆಡ್ಡಿ ಗಿಣಿವಾರ, ಶಾಲೆ ನಿರ್ದೇಶಕ ಮಾಂತೇಶ್ ಮಸ್ಕಿ, ಶಿಕ್ಷಕರಾದ ಪಾರ್ವತಿ ಜೋಗಿನ್, ವಿದ್ಯಾಶ್ರೀ ಬಳಗೇರ್, ಸೇರಿದಂತೆ ಶಿಕ್ಷಕರು ಮಕ್ಕಳು ಇದ್ದರೂ.

## ಬೆಂಕಿಗೆ ಹಲವು ಪ್ರವಾಸಿಗರು ಬಲಿ : ಗೋಕರ್ಣದಲ್ಲಿ ಜೀರ್ಣಿಸಿಕೊಳ್ಳಲಾದ ದುಃಖ

## ಮತ್ತೆ ಮುನ್ನೆಗೆ ಬಂದ ಅಗ್ನಿಶಾಮಕ ದಳ, ಜನಪ್ರತಿನಿಧಿಗಳು ಕಣ್ತೆರೆಯಲ್ಲಿ

- **ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :**

ಬೆಂಗಳೂರಿನಿಂದ ಗೋಕರ್ಣಕ್ಕೆ ಬರಬೇಕಿದ್ದ ಹಲವು ಪ್ರವಾಸಿಗರು ಅಪಘಾತದಲ್ಲಿ ಸಾವನ್ನಪ್ಪಿರುವ ಶೋಕ ಗೋಕರ್ಣದವರನ್ನು ಕಾಡತೆ-ಡಗಿದೆ. ಇದು ಕೇವಲ ಅಪಘಾತದಲ್ಲಿ ಮೃತಪಟ್ಟದ್ದಲ್ಲ ಬದಲಿಗೆ ಬಸ್ಸಿಗೆ ಬೆಂಕಿ ತಗುಲಿದ್ದರಿಂದಾಗಿ ಹಲವರು ಅಲ್ಲಿಯೇ ಬಸ್ಮವಾದರೆ ಇನ್ನು ಕೆಲವರು ಜವರಾಯನಿಂದ ತಪ್ಪಿಸಿಕೊಂಡು ಗಭೀರ ಗಾಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.ಈ ಖಾಸಗಿ ಬಸ್‌ಗೆ ಬೆಂಕಿ ತಗುಲದಿದ್ದರೆ ಬಹುತೇಕ ಇಷ್ಟೊಂದು ಅನಾಹುತ ಆಗುತ್ತಿರಲಿಲ್ಲವೇನೋ. ಆದರೆ ಬೆಂಕಿ ಬಸ್ ಮತ್ತು ಅದರೊಳಗಿದ್ದವರನ್ನು ಭಸ್ಮ ಮಾಡಿಬಿಟ್ಟಿತು. ಗೋಕರ್ಣದಲ್ಲಿ ಈಗ ಕಾಡುತ್ತಿರುವ ಪ್ರಶ್ನೆ ಏನೆಂದರೆ ಇತ್ತೀಚಿಗಷ್ಟೇ ಗೋಕರ್ಣದ ಕಟ್ಟಿಗೆ ಮಿಲ್ ಬೆಂಕಿಗೆ ತಗುಲಿ ಸಂಪೂರ್ಣ ಸುಟ್ಟುಹೋಯಿತು. ಹಾಗೇ ಮನೆಯಲ್ಲಿದ್ದ ಒಂದು ಸಿಲೆಂಡರ್ ಸ್ಫೋಟದಿಂದ ಇಡೀ ಮನೆ ಹೊತ್ತಿ ಉರಿಯಿತು. ಇದರ ಜತೆಗೆ ಗೋಕರ್ಣದಲ್ಲಿ ಅದರಲ್ಲೂ ಇಂತಹ ಅವಧಿಯಲ್ಲಿ ಲಕ್ಷಾಂತರ ಪ್ರವಾಸಿಗರು ಗೋಕರ್ಣದಲ್ಲಿ ಉಳಿದುಕೊಳ್ಳುತ್ತಾರೆ. ಆದರೆ ಸಣ್ಣ ಬೆಂಕಿ ಅವಘಡವಾದರೂ ಅದನ್ನು ಆರಿಸಲು ದೂರದ ಕುಮಟಾ ಮತ್ತು ಅಂಕೋಲಾದಿಂದಲೇ ಅಗ್ನಿಶಾಮಕ ಬರಬೇಕಾಗಿದೆ. ಅದು ಬಂದು ಮುಟ್ಟುವಷ್ಟರಲ್ಲಿ ದೊಡ್ಡ ಅನಾಹುತವೇ ನಡೆದುಹೋಗಲಿದೆ.ಗೋಕರ್ಣ ವ್ಯಾಪ್ತಿಯಲ್ಲಿ ನೂರಾರು ಐಶಾರಾಮಿ ಹೊಟೇಲ್, ರೆಸಾರ್ಟ್, ಹೋಮ್‌ಸ್ಟೇ ಸೇರಿದಂತೆ ವಿವಿಧ ವಾಣಿಜ್ಯ ಕಟ್ಟಡಗಳಿವೆ. ಪ್ರವಾಸೋದ್ಯಮವನ್ನು ನಂಬಿಕೊಂಡು ಸಣ್ಣಪುಟ್ಟ ಸಾವಿರಾರು ಅಂಗಡಿಗಳಿವೆ. ಡಿಸೆಂಬರ್ ಮತ್ತು ಜನವರಿಯಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಒಂದೇ ಸಮನೆ ಪ್ರವಾಸಿಗರು ಆಗಮಿಸುತ್ತಾರೆ. ಇಷ್ಟೊಂದು ಸಮೃದ್ಧ ಪ್ರದೇಶದ ಜತೆಗೆ ಗಣ್ಯಾತಿಗಣ್ಯರು ಬಂದು ಉಳಿಯುತ್ತಾರೆ. ಆದರೆ ಎಲ್ಲೋ ಬೆಂಕಿ ಕಾಣಿಸಿಕೊಂಡರೆ ತಕ್ಷಣ ಕಾರ್ಯನಿರ್ವಹಿಸಲು ಅಗ್ನಿಶಾಮಕ ದಳವಿಲ್ಲ. ಕೆಡಿಸಿಸಿ ಬ್ಯಾಂಕ ನಿರ್ದೇಶಕರಾದ ವೇ. ರಾಜಗೋಪಾಲ ಅಡಿ

ಹೀಗಾಗಿ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು, ಭಕ್ತರು ಆಗಮಿಸುತ್ತಾರೆ. ಆದರೆ ಈ ಅವಧಿಯಲ್ಲಿ ಲಕ್ಷಾಂತರ ಜನ ಬರುತ್ತಾರೆ. ಹೀಗಾಗಿ ಇಲ್ಲಿ ಸಾಕಷ್ಟು ಹೊಟೇಲ್, ಹೋಮ್‌ಸ್ಟೇಗಳಿದ್ದು ಇಲ್ಲಿಯೇ ಉಳಿದುಕೊಳ್ಳುತ್ತಾರೆ. ಹೀಗಾಗಿ ಯಾವುದೇ ಸಂದರ್ಭದಲ್ಲಿ ಸಣ್ಣಪುಟ್ಟ ಬೆಂಕಿ ಅವಘಡ ನಡೆದರೂ ಎಲ್ಲರೂ ಕೈಕಟ್ಟಿ ನೋಡಬೇಕಾಗುತ್ತದೆ. ಹೀಗಾಗಿ ಅಗ್ನಿಶಾಮಕ ದಳ ಗೋಕರ್ಣಕ್ಕೆ ಬೇಕಾಗಿದ್ದು ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳಿಗೆ ಮನವಿಯನ್ನು ಕೂಡ ನೀಡಲಾಗಿದೆ.

**ವೇ. ರಾಜಗೋಪಾಲ ಅಡಿ ಗುರೂಜಿ**
**ಅಧ್ಯಕ್ಷರು, ಆನುವಂಶೀಯ ಉಪಾಧಿವಂತ ಮಂಡಳಿ**
**ಗೋಕರ್ಣ**

**ಗೋಕರ್ಣ ಧಾರ್ಮಿಕ ಮತ್ತು ಪ್ರವಾಸಿ ತಾಣವಾಗಿದೆ.**





ಗುರೂಜಿ ಅವರು ಗೋಕರ್ಣಕ್ಕೆ ಪ್ರತ್ಯೇಕ ಅಗ್ನಿಶಾಮಕ ದಳದ ಅವಶ್ಯಕತೆಯಿದೆ. ಹಾಗೇ ಗೋಕರ್ಣ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕು ಎಂದು ಇತ್ತೀಚಿಗೆ ಗೋಕರ್ಣಕ್ಕೆ ಆಗಮಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಲ್ಲಿಯೂ ಮನವಿ ಮಾಡಿಕೊಂಡಿದ್ದಾರೆ. ಈಗ ಬಸ್ಸಿಗೆ ಬೆಂಕಿ ತಗುಲಿ ಬಹುದೊಡ್ಡ ದುರಂತ ನಡೆದಿದ್ದರಿಂದಾಗಿ ಗೋಕರ್ಣದ ಬಹುಮಹಡಿ ಕಟ್ಟಡದಲ್ಲಿ ಕೆಲವರು ವಸತಿ ಮಾಡಲು ಹಿಂದೇಟು ಹಾಕುತ್ತಿರುವ ವಿಷಯ ಕೇಳಿಬರುತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಡಿಸೆಂಬರ್, ಜನವರಿ ತಿಂಗಳಲ್ಲಿ ಗೋಕರ್ಣ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಬೇಕು. ಈ ಅವಧಿಯಲ್ಲಿ ಮಾತ್ರ ಅತಿಹೆಚ್ಚಿನ ಸಂಖ್ಯೆಯಲ್ಲಿ ಗೋಕರ್ಣದಲ್ಲಿ ಅತಿಹೆಚ್ಚಿನ ಜನದಟ್ಟಣೆಯಾಗುತ್ತದೆ. ಈಗಿರುವ ಪೊಲೀಸರೇ ಇವೆಲ್ಲವನ್ನು ನೋಡಿ-ಕೊಂಡು ಹೋಗಬೇಕಾಗುತ್ತದೆ. ಠಾಣೆಯಲ್ಲೂ ಕರ್ತವ್ಯ ಮಾಡಿ ನಂತರ ಸಣ್ಣಪುಟ್ಟ ಅವಘಡ ನಡೆದರೂ ತೆರಳಬೇಕಾಗುತ್ತದೆ.





# ಮಹಾನಗರ ಪಾಲಿಕೆಯಿಂದ ಆಕ್ಷೇಪಣೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಮಹಾನಗರ ಪಾಲಿಕೆಯ ವಾರ್ಡ್ ನಂ.35 ನಿವೇಶನ ಮುನ್ಸಿಪಾಲ್ ನಂ.1–11–49/35/1 & 1–11–49/37/2ರಲ್ಲಿ ಡಾ.ನರಸಿಂಹಲು ನಂದಿನಿ ಮೆಮೊರೇಬಲ್ ಟ್ರಸ್ಟ್, ಶಿಕ್ಷಣ ಸಂಸ್ಥೆ, ಕಟ್ಟಡ ನಿರ್ಮಾಣ ಮಾಡಲು ಡಾ.ಶ್ರೀನರಸಿಂಹಲು ನಂದಿನಿ ಅವರು ಅರ್ಜಿ ಸಲ್ಲಿಸಿದ್ದು, ಅಕ್ಕ–ಪಕ್ಕದ ಹಾಗೂ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತವಾಗಿ ಸಲ್ಲಿಸಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ಈ ಜಮೀನು ಶೈಕ್ಷಣಿಕ ಉದ್ದೇಶಕ್ಕಾಗಿ ಏಕ ನಿವೇಶನ ಅನುಮೋದನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡಿರುತ್ತದೆ. ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮತ್ತು ನಗರಸಭೆಯಿಂದ ಅನುಮತಿ ಪಡೆದಿರುತ್ತಾರೆ. ಈ ಕಚೇರಿಯಿಂದ ಆಸ್ತಿತೆರಿಗೆ ವಿನಾಯಿತಿ ಪಡೆದುಕೊಂಡಿದ್ದು, ಈ ಸ್ಥಳದಲ್ಲಿ ನಕ್ಷೆ ಪ್ರಕಾರ ಕಟ್ಟಡ ಪರವಾನಿಗೆ ಕೋರಿ ಅರ್ಜಿಸಲ್ಲಿಸಿರುವುದರಿಂದ ಇದಕ್ಕೆ ಅಕ್ಕ–ಪಕ್ಕದ ಹಾಗೂ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ 15 ದಿನಗಳ ಒಳಗಾಗಿ ದಾಖಲೆಳೊಂದಿಗೆ ಈ ಕಾರ್ಯಾಲಯಕ್ಕೆ ದೂರು ಸಲ್ಲಿಸತಕ್ಕದ್ದು, ಅವಧಿ ಮುಗಿದ ನಂತರ ಬಂದ ಆಕ್ಷೇಪಣೆ, ತಕರಾರರನ್ನು ಪರಿಗಣಿಸಲಾಗುವುದಿಲ್ಲವೆಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಬಕಾರಿ ಇಲಾಖೆ: ಜನವರಿ 5ರಂದು ತರಬೇತಿ ಕಾರ್ಯಾಗಾರ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಅಬಕಾರಿ ಇಲಾಖೆಯಲ್ಲಿ ಇದೇ ಪ್ರಥಮವಾಗಿ ಇ–ಹರಾಜು ಮೂಲಕ ಸನ್ನದುಗಳ ವಿಲೇವಾರಿಗೆ ಕ್ರಮ ಕೈಗೊಂಡಿದ್ದು, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಸಾರ್ವಜನರಿಗೆ ನಗರದ ಕೃಷಿ ವಿಶ್ವವಿದ್ಯಾಲಯದ ಸಭಾಂಗಣ–2ರಲ್ಲಿ 2026ರ ಜನವರಿ 5ರ ಬೆಳಿಗ್ಗೆ 11ಗಂಟೆಗೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಬಕಾರಿ ಇಲಾಖೆಯ ಉಪ ಆಯುಕ್ತರಾದ ಮಹೇಂದ್ರ ಕುಮಾರ್ ಅವರು ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಗೆ ಹಂಚಿಕೆಯಾಗಿರುವ ಒಟ್ಟು 09 ಸನ್ನದುಗಳ ಇ–ಹರಾಜು ನಡೆಯಲಿದೆ. ಅಬಕಾರಿ ಆಯುಕ್ತರು ಹೊರಡಿಸಿರುವ ತರಬೇತಿ ವೇಳಾಪಟ್ಟಿಯನ್ನು ಅಬಕಾರಿ ಇಲಾಖೆಯ ವೆಬ್‌ಸೈಟ್: https://stateexcise.karnataka.gov.in ಮತ್ತು ಎಮ್‌ಎಸ್‌ಟಿಸಿ ಲಿಮಿಟೆಡ್ ಸಂಸ್ಥೆಯ ವೆಬ್‌ಸೈಟ್ ; https://www.mstcecommerce.com ನಲ್ಲಿ ಲಭ್ಯವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರು ವಿಭಾಗದ ಉಪ ಅಧೀಕ್ಷಕರಾದ ಮೋನಪ್ಪ ಮೊಬೈಲ್ ಸಂಖ್ಯೆ: 9606604154, ರಾಯಚೂರು ವಲಯ ಅಬಕಾರಿ ನಿರೀಕ್ಷಕರಾದ ಸತ್ಯನಾರಾಯಣ ಮೊಬೈಲ್ ಸಂಖ್ಯೆ: 9008036727, ಮಾನವಿ ವಲಯ ಅಬಕಾರಿ ನಿರೀಕ್ಷಕರಾದ ಯಮನೂರ್ ಸಾಬ್ ಮೊಬೈಲ್ ಸಂಖ್ಯೆ: 9481857923, ಸಿಂಧನೂರು ವಲಯ ಅಬಕಾರಿ ನಿರೀಕ್ಷಕರಾದ ಗಂಗಾಧರ್ ಬಡಿಗೇರ್ ಮೊಬೈಲ್ ಸಂಖ್ಯೆ: 9110452279, ಲಿಂಗಸುಗೂರು ವಲಯ ಅಬಕಾರಿ ನಿರೀಕ್ಷಕರಾದ ಲಕ್ಷ್ಮಿದೇವಿ ಮೊಬೈಲ್ ಸಂಖ್ಯೆ: 8317359297ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಬಕಾರಿ ಇಲಾಖೆಯ ಉಪ ಆಯುಕ್ತರಾದ ಮಹೇಂದ್ರ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ಪ್ರದೇಶದಲ್ಲಿ ಡಿಸೆಂಬರ್ 29ರಂದು ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಡಿಸೆಂಬರ್ 29ರ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 05 ಗಂಟೆವರೆಗೆ ಗ್ರಾಮೀಣ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಸೆಂಬರ್ 31ರಂದು ಡಾಕ್ ಅದಾಲತ್

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ವಿಭಾಗೀಯ ಡಾಕ್ ಅದಾಲತ್‌ನ್ನು ರಾಯಚೂರು ವಿಭಾಗದ ಅಂಚೆ ಕಚೇರಿಗಳ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 31ರ ಬೆಳಗ್ಗೆ 11 ಗಂಟೆಗೆ ನಗರದ ಕನಕದಾಸ ವೃತ್ತದ ಬಳಿಯಲ್ಲಿರುವ ಅಂಚೆ ಕಚೇರಿಗಳ ಅಧೀಕ್ಷಕರ ಕಚೇರಿಯಲ್ಲಿ ನಡೆಯಲಿದೆ.

ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ತಮ್ಮ ದೂರುಗಳನ್ನು ಡಿಸೆಂಬರ್ 30ರೊಳಗೆ, ಅಂಚೆ ಕಚೇರಿಗಳ ಅಧೀಕ್ಷಕರ ಕಾರ್ಯಾಲಯ, ರಾಯಚೂರು ವಿಭಾಗ–584102ಗೆ ಸಲ್ಲಿಸಬೇಕು ಎಂದು ಅಂಚೆ ಕಚೇರಿಯ ಅಧೀಕ್ಷಕರ ಕಚೇರಿಯ ಪ್ರಕಟಣೆ ತಿಳಿಸಿದೆ.

# ದ್ವೇಷಭಾಷಣ ಮಸೂದೆ ವಿರುದ್ಧ ಬಿಜೆಪಿ ಪ್ರತಿಭಟನೆ

ರಾಯಚೂರು,ಡಿ.26–ರಾಜ್ಯಕಾಂಗ್ರೆಸ್ ಸರಕಾರ ಜಾರಿಗೊಳಿಸುತ್ತಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ –2025 ಮಸೂದೆಯನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ನಗರದ ಡಾ.ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ನಡೆಸಿದರು. ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಮಸೂದೆಯ ಮೂಲಕ ವಾಕ್ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದರು. ಸಂವಿಧಾನದಲ್ಲಿ ಕಲಂ19ರ ಅಡಿಯಲ್ಲಿ ನಾಗರಿಕರಿಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ, ವಾಕ್ ಸಾತಂತ್ರ್ಯ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕುಗಳ ಮೇಲೆ ವಿಧೇಯಕ ನೇರ ದಾಳಿ ನಡೆಸುತ್ತದೆ. ದ್ವೇಷ ಭಾಷಣ ಎಂಬ ಪದಕ್ಕೆ ಸ್ಪಷ್ಟ ಹಾಗೂ ನಿಖರ ವ್ಯಾಖ್ಯಾನವಿಲ್ಲದೆ, ಅಸ್ಪಷ್ಟ ಮತ್ತು ಏಕಪಕ್ಷೀಯ ವ್ಯಾಖ್ಯಾನಗಳಿಗೆ ಅವಕಾಶ ಕಲ್ಪಿಸಿರುವುದು ಗಂಭೀರ ಆತಂಕಕ್ಕೆ ಕಾರಣವಾಗಿದೆ ಎಂದು ಬಿಜೆಪಿ ಆರೋಪಿಸಿದೆ.



ಶಾಸಕ ಡಾ ಶಿವರಾಜ ಪಾಟೀಲ್ ಮಾತನಾಡಿ, ರಾಜ್ಯ ಸರ್ಕಾರ ಬೆಳಗಾವಿ ಅಧಿವೇಶನದಲ್ಲಿ ದ್ವೇಷ ಭಾಷಣ ಮಸೂದೆ ಜಾರಿಗೆ ತರುವ ಮೂಲಕ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಮಾಡುವರನ್ನು ಜೈಲಿಗೆ ತಳ್ಳುವ ಮೂಲಕ ಧ್ವನಿ ಹತ್ತಿಕ್ಕುವ ಕುತಂತ್ರ ಇದಾಗಿದೆ ಎಂದರು. ರಾಜಕೀಯ ವಿರೋಧಿಗಳನ್ನು ಜೈಲಿಗೆ ತಳ್ಳುವ ಉದ್ದೇಶದಿಂದ ರಾಜ್ಯ ಸರ್ಕಾರ ಈ ಕರಾಳ ಕಾನೂನು ರೂಪಿಸಲು ಮುಂದಾಗಿದೆ. ಈ ಮಸೂದೆಗೆ ಒಪ್ಪಿಗೆ ನೀಡಬಾರದು ಎಂದು ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಮನವಿ ಮಾಡುತ್ತೇವೆ ಎಂದರು. ಅಂಕಿತ ಹಾಕಿದರೆ ಸರ್ವಾಧಿಕಾರಿ ಧೋರಣೆ ಮಾಡುತ್ತಿರುವ ಕಾಂಗ್ರೆಸ್ ಸರಕಾರಕ್ಕೆ ಕುಮ್ಮಕು ನೀಡಿದಂತೆ ಆಗುತ್ತದೆ ಎಂದರು. ಬಿಜೆಪಿ ರಾಜ್ಯಾಧ್ಯಕ್ಷರು ವಿರೋಧ ಪಕ್ಷದ ನಾಯಕರು ಬಿಜೆಪಿ ನಾಯಕರ ನೇತೃತ್ವದಲ್ಲಿ ರಾಜ್ಯಪಾಲರಿಗೆ ಮನವಿ ನೀಡಲಾಗಿದೆ.

**ಡಾ. ಬಿ ಆರ್ ಅಂಬೇಡ್ಕರ್ ನೀಡಿದ ಸಂವಿಧಾನದ ಕಲಂ1 ವಾಕ್ ಸ್ವಾತಂತ್ರ್ಯ ಕಸಿದುಕೊಳ್ಳುತ್ತದೆ ಎಂದರು.**

# ಬಿದ್ರಿ ಹಾಸ್ಯ ಕೃತಿ ಲೋಕಾರ್ಪಣೆ



• **ಮಲ್ಲಮ್ಮ ನುಡಿ ವಾರ್ತೆ, ರಾಯಚೂರು:**

ಡಿ.26–ರಾಯಚೂರಿನ ಸಾಹಿತಿ, ಕವಿ ಪಿ. ವೆಂಕಟೇಶ ಬಾಗಲವಾಡ ರಚಿಸಿದ ಹಾಸ್ಯ ಬರಹಗಳ ಸಂಕಲನ ನಿಮಗೆ ತಿಳಿಯುವುದಿಲ್ಲ ಬಿದ್ರಿ ಎಂಬ ಕೃತಿ ಡಿ.28 ರಂದು ನಗರದ ಕರ್ನಾಟಕ ಸಂಘದ ಸಭಾಂಗಣದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಶ್ರುತಿ ಸಾಹಿತ್ಯ ಮೇಳದ ಅಧ್ಯಕ್ಷ ಮುರಳಿದರ ಕುಲಕರ್ಣಿ ಅವರು ಹೇಳಿದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಕಾರ್ಯಕ್ರಮದ ಉದ್ಘಾಟನೆಯನ್ನು ಶಾಂತಪ್ಪ ಅವರು ನೆರವೇರಿಸಲಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಡಾ. ಜಯಲಕ್ಷ್ಮಿ ಮಂಗಳ ಮೂರ್ತಿ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ. ಲಕ್ಷ್ಮೀಕಾಂತ್ ವಿ. ಮೋಹರೀರ ಅವರು ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಅದೇ ರೀತಿ ಸಾಹಿತಿ ಪ್ರಸನ್ನ ಮಂಡಲಗಿರಿ ಅವರು ಕೃತಿ ಪರಿಚಯ ಮಾಡಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಾಹಿತಿ ಅಯ್ಯಪ್ಪಯ್ಯ ಹುಡಾ, ವೀರ ಹನುಮಾನ್, ಚಿದಾನಂದ ಸಾಲಿ, ವೆಂಕಟರಾವ ಕುಲಕರ್ಣಿ, ತಾಯಪ್ಪಬಿ ಹೊಸೂರ್, ಬೇವಿನಬೆಂಚಿ, ಶ್ರೀನಿವಾಸ ಗಟ್ಟು, ಅವರು ಆಗಮಿಸಲಿದ್ದಾರೆ. ಪಿ. ವೆಂಕಟೇಶ್ ಬಾಗಲವಾಡ ಅವರು

ರಚಿಸಿದ ನಿಮಗೆ ತಿಳಿಯೋದಿಲ್ಲ ಬಿದ್ರಿ' ಇದೊಂದು ವಿಶೇಷ ಹಾಸ್ಯ ಪ್ರಜ್ಞೆಯ ಸಂಕಲನ ವಾಗಿದೆ. ಇದರಲ್ಲಿ ಒಟ್ಟು ಸಣ್ಣ ಸಣ್ಣ ಘಟನೆಗಳನ್ನು ಆದರಿಸಿದ 35 ಹಾಸ್ಯ ಕೃತಿಗಳಿವೆ. ಈ ಸಂಕಲದಲ್ಲಿ ಮೂಡಿಬಂದ ಎಲ್ಲಾ 35 ಕೃತಿಗಳು ಓದುಗರನ್ನ ಹಾಸ್ಯಲೋಕಕ್ಕೆ ಕೊಂಡೊಯ್ಯುವುದರ ಜೊತೆಗೆ ಅಭಿರುಚಿ ಮೂಡಿಸುತ್ತದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ರಮೇಶ್ ಕುಲಕರ್ಣಿ, ವೆಂಕಟರಾವ್ ಕುಲಕರ್ಣಿ, ಕೃತಿ ರಚನೆಕರಾದ ವೆಂಕಟೇಶ್ ಪಿ. ಬಾಗಲವಾಡ,

# ಬಿಜೆಪಿ ಮಂಡಲ ವತಿಯಿಂದ ಪ್ರತಿಭಟನೆ

• **ಮಲ್ಲಮ್ಮ ನುಡಿ ವಾರ್ತೆ, ಕುಕನೂರು:**

ದ್ವೇಷ ಭಾಷಣದ ವಿಧೇಯಕದ ಮೂಲಕ ಜನತಂತ್ರದ ಮೌಲ್ಯಗಳಿಗೆ ಧಕ್ಕೆ ತರುವ ಸರ್ಕಾರದ ನಡೆ ಖಂಡಿಸಿ ಬಿಜೆಪಿ ಯಲಬುರ್ಗಾ ಮಂಡಲ ಹಾಗೂ ಕುಕನೂರು ತಾಲ್ಲೂಕು ಘಟಕದ ವತಿಯಿಂದ ಶುಕ್ರವಾರ ಪಟ್ಟಣದ ಅಂಬೇಡ್ಕರ್ ಸರ್ಕಲ್‌ನಿಂದ ಶಿರೂರು ವೀರಭದ್ರಪ್ಪ ಸರ್ಕಲ್‌ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.




ಶಿರೂರು ವೀರಭದ್ರಪ್ಪ ಸರ್ಕಲ್‌ನಲ್ಲಿ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ಮುಖಂಡ ವೀರಣ್ಣ ಹುಬ್ಬಳ್ಳಿ ಅವರು, ದ್ವೇಷ ಭಾಷಣದ ವಿಧೇಯಕವು ಸರ್ಕಾರದ ವಿಫಲತೆಗಳನ್ನು ಮರೆಮಾಚಲು ರೂಪಿಸಿದ ಜನ ವಿರೋಧಿ ಕಾನೂನಾಗಿದೆ. ಜನರ ಪ್ರಶ್ನಿಸುವ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಉದ್ದೇಶದಿಂದಲೇ ಈ ವಿಧೇಯಕ ತರಲಾಗಿದ್ದು, ಬಿಜೆಪಿ ಇದನ್ನು ಯಾವತ್ತೂ ಸಹಿಸುವುದಿಲ್ಲ ಎಂದು ಹೇಳಿದರು.

ಬಳಿಕ ಮಾತನಾಡಿದ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಕುಮಾರ್ ನಾಗಲಾಪುರ ಮಠ ಅವರು, ದ್ವೇಷ ಭಾಷಣದ ಹೆಸರಿನಲ್ಲಿ ಸರ್ಕಾರ ವಿರೋಧಿ ಧ್ವನಿಗಳನ್ನು ಕುಗ್ಗಿಸಲು ಯತ್ನಿಸಲಾಗುತ್ತಿದೆ. ಇದು ಸಂವಿಧಾನಾತ್ಮಕವಾಗಿ ನಾಗರಿಕರಿಗೆ ದೊರಕಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿದ್ದು, ಜನತಂತ್ರದ ಮೂಲಭೂತ ಮೌಲ್ಯಗಳಿಗೆ ಧಕ್ಕೆ ತರುವ ಕ್ರಮವಾಗಿದೆ ಎಂದು ಆರೋಪಿಸಿದರು.

ಸರ್ಕಾರ ಈ ವಿಧೇಯಕವನ್ನು ತಕ್ಷಣವೇ ಹಿಂಪಡೆದು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸಬೇಕು. ಇಲ್ಲವಾದಲ್ಲಿ ಬಿಜೆಪಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಿದೆ ಎಂದು ಎಚ್ಚರಿಸಿದರು.

ಈ ವೇಳೆ ತಾಲೂಕು ದಂಡಾಧಿಕಾರಿ ತಹಸಿಲ್ದಾರ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅನಿಲ್ ಆಚಾರ, ಶಂಭು ಜೋಳದ, ಕರಬಸಯ್ಯ ಬಿನ್ನಾಳ, ಲಕ್ಷಣ ಕಾಳಿ, ಮಂಗಳೇಶ್ ವಾಲ್ಮೀಕಿ, ಅಯ್ಯನಗೌಡ ಕೆಂಚಮ್ಮನವರ, ರಾಜಶೇಖರ್ ದ್ಯಾಂಪುರ, ಬಸವರಾಜ್ ಹಾಳಕೇರಿ, ಚಂದ್ರು ಬಗನಾಳ, ಅಂಬರೀಷ್ ಹುಬ್ಬಳ್ಳಿ ಪ್ರಕಾಶ ಹಿರೇಮನಿ, ರವಿ ಶಿಂದೆ ಬಿಜೆಪಿ ಯಲಬುರ್ಗಾ ಮಂಡಲದ ಪದಾಧಿಕಾರಿಗಳು, ಕುಕನೂರು ತಾಲ್ಲೂಕು ಘಟಕದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು ಪ್ರತಿಭಟನೆಯಲ್ಲಿ ಭಾಗವಹಿಸಿದರು.

# ಡಿ.28 ರಂದು ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ 110/11 ಕೆ.ವಿ ಸೋಮಸಮುದ್ರ ವಿದ್ಯುತ್ ಉಪ–ಕೇಂದ್ರದಿಂದ ವಿದ್ಯುತ್ ಲೈನ್ ನ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಡಿ.28 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*

ಎಫ್–6 ವ್ಯಾಪ್ತಿಯ ನಗರದ ತಾಳೂರು ರೋಡ್, ಸ್ನೇಹ ಕಾಲೋನಿ, ಶ್ರೀನಗರ, ರೇಣುಕಾ ನಗರ, ಭಗತ್‌ಸಿಂಗ್ ನಗರ, ಕನ್ನಡ ನಗರ, ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ಎಸ್.ಪಿ.ಸರ್ಕಲ್, ಶಾಸ್ತ್ರೀ ನಗರ, ಬ್ಯಾಂಕ್ ಕಾಲೋನಿ, ಬಸವನಕುಂಟೆ, ಸಿರುಗುಪ್ಪ ರೋಡ್, ರಾಮ ನಗರ, ಅವಂಬಾವಿ, ಜಿಲ್ಲಾ ಕೋರ್ಟ್ ಸಂಕೀರ್ಣ.

ಎಫ್–10 ವ್ಯಾಪ್ತಿಯ ಅಶೋಕ ನಗರ, ಅವಂಬಾವಿ, ಟಿ.ಎಂ.ಜಿ ಲೇಔಟ್, ರಾಮ ನಗರ, ಜಯನಗರ, ಗಾಯತ್ರಿ ನಗರ, ಭುವನಗಿರಿ ಕಾಲೋನಿ, ವೀರನಗೌಡ ಕಾಲೋನಿ, ಗಣೇಶ್ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಡಿಗೆ ಗೃಹ ರಕ್ಷಕರ ಸೇವೆ ಅತ್ಯಂತ ಶ್ಲಾಘನೀಯ : ಸೋಮನಗೌಡ ಎಂ ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆ, ಕುಕನೂರು:**

ಕರ್ನಾಟಕ ರಾಜ್ಯ ಗೃಹ ರಕ್ಷಕ ದಳದ 63ನೇ ವರ್ಷದ ದಿನಾಚರಣೆಯ ಅಂಗವಾಗಿ ಗೃಹ ರಕ್ಷಕ ದಳ ಕುಕನೂರು ಘಟಕದ 25ನೇ ವರ್ಷದ ರಜತ ಮಹೋತ್ಸವವನ್ನು ಶುಕ್ರವಾರ ಪಟ್ಟಣದ ವಿದ್ಯಾನಂದ ಗುರುಕುಲದ ಹುತಾತ್ಮ ಭವನದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಅಧಿಕೃತ ಚಾಲನೆ ನೀಡಲಾಯಿತು.




ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೊಪ್ಪಳದ ಮಾಜಿ ಜಿಲ್ಲಾ ಗೃಹ ರಕ್ಷಕ ದಳದ ಸಮಾದೇಷ್ಟರಾದ ಸೋಮಣ್ಣಗೌಡ ಎಂ. ಪಾಟೀಲ್ ಅವರು, ಗೃಹ ರಕ್ಷಕರು ಪೊಲೀಸ್ ಇಲಾಖೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ, ಚುನಾವಣಾ ಕರ್ತವ್ಯ, ವಿಪತ್ತು ನಿರ್ವಹಣೆ, ಸಂಚಾರ ನಿಯಂತ್ರಣ ಸೇರಿದಂತೆ ಅನೇಕ ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು. ಕಡಿಮೆ ವೇತನ, ಅನಿಶ್ಚಿತ ಸೇವಾ ಭದ್ರತೆ ಹಾಗೂ ಸೌಲಭ್ಯಗಳ ಕೊರತೆಯ ನಡುವೆಯೂ ನಾಡಿಗೆ ಸೇವೆ ಸಲ್ಲಿಸುತ್ತಿರುವ ಗೃಹ ರಕ್ಷಕರ ಸೇವೆ ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಪ್ರಸ್ತುತ ಕುಕನೂರು ಘಟಕದಲ್ಲಿ ಸುಮಾರು 150 ಗೃಹ ರಕ್ಷಕರು ಸೇವೆ ಸಲ್ಲಿಸುತ್ತಿದ್ದು, ಈ ಸಂಸ್ಥೆ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಒದಗಿಸುವ ಮಹತ್ವದ ವೇದಿಕೆಯಾಗಿದೆ ಎಂದು ಹೇಳಿದರು. ರಾಜ್ಯದಲ್ಲಿ 700ಕ್ಕೂ ಹೆಚ್ಚು ಗೃಹ ರಕ್ಷಕರಿಗೆ ವಿಮಾ ಸೌಲಭ್ಯ ಕಲ್ಪಿಸಲಾಗಿದ್ದು, ಇನ್ನೂ ಹೆಚ್ಚಿನ ಸರ್ಕಾರಿ ಸೌಲಭ್ಯಗಳು, ಗೌರವಯುತ ವೇತನ ವ್ಯವಸ್ಥೆ ಹಾಗೂ ಶಾಶ್ವತ ಉದ್ಯೋಗ ಭದ್ರತೆ ಒದಗಿಸಬೇಕಾಗಿದೆ. ಅರ್ಹತೆ ಆಧಾರದ ಮೇಲೆ ಗೃಹ ರಕ್ಷಕರಿಗೆ ರಾಜ್ಯ ಸರ್ಕಾರವು ಶೇ.5ರಷ್ಟು ಮೀಸಲಾತಿ ನೀಡಿ ನೇಮಕಾತಿಗೆ ಅವಕಾಶ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು. ಸಂದರ್ಭದಲ್ಲಿ ವಿದ್ಯಾನಂದ ಗುರುಕುಲ ಸಂಸ್ಥೆಯ ಉಪಾಧ್ಯಕ್ಷ ಶರಣಪ್ಪ ಹೊಸಮನಿ, ಸಾಮಾಜಿಕ ಕಾರ್ಯಕರ್ತ ಕಳಕಪ್ಪ ಕಂಬಳಿ, ಕೆ.ಆರ್. ಕುಲಕರ್ಣಿ ಸೇರಿದಂತೆ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್. ಹೇಮಂತ್ ಕುಮಾರ್, ಕೊಪ್ಪಳ ಗೃಹ ರಕ್ಷಕ ದಳದ ಜಿಲ್ಲಾ ಸಮಾದೇಷ್ಟ ಕೆ. ಲಕ್ಷ್ಮಣ್ ಕಡೆಮನಿ, ವಿದ್ಯಾನಂದ ಗುರುಕುಲ ಸಂಸ್ಥೆಯ ಕಾರ್ಯದರ್ಶಿ ಜಿ.ವಿ. ಜಾಗೀರ್ದಾರ್, ಡಾ. ಜಿ.ಎಸ್.ಎಂ.ಆರ್ ಪಾಲಿಟೆಕ್ ಕಾಲೇಜಿನ ಪ್ರಾಚಾರ್ಯ ಅಮರೇಶ್ ಮಡ್ಡೆಕರ್, ಪಟ್ಟಣ ಪಂಚಾಯತಿ ಸದಸ್ಯ ಗಗನ ನೋಟಗಾರ, ವೈದ್ಯಾಧಿಕಾರಿ , ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿದ್ದಯ್ಯ ಕಳ್ಳಿಮಠ, ಪಟ್ಟಣ ಪಂಚಾಯತಿ ಅಧ್ಯಕ್ಷೆ ಲಲಿತಮ್ಮ ಯಡಿಯಾಪುರ, ಕುಕನೂರು ಗೃಹ ರಕ್ಷಕ ದಳದ ಘಟಕಾಧಿಕಾರಿ ಬಾಳಪ್ಪ ಕೆ. ಯತ್ನಟ್ಟಿ, ಪ್ಲಟೂನ್ ಕಮಾಂಡರ್ ಅಮರೇಶ್ ಕೊಪ್ಪದ್,

ಕೊಪ್ಪಳ ದಳದ ಮಹಿಳಾ ಘಟಕಾಧಿಕಾರಿ ಗವಿಸಿದ್ದಮ್ಮ, ಜಿಲ್ಲಾ ವರದಿಗಾರ್ತಿ ಸರಸ್ವತಿ ನಾಗರಾಜ್ (ಗಂಗಾವತಿ), ಸ್ಥಳೀಯ ಜೆಸ್ಕಾಂ ಶಾಖಾಧಿಕಾರಿ ವೀರೇಶ್ ಕೆ. ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕಿನ ಗೃಹ ರಕ್ಷಕ ದಳದ ಘಟಕಾಧಿಕಾರಿಗಳು, ಪ್ಲಟೂನ್ ಕಮಾಂಡರ್‌ಗಳು, ಸೀನಿಯರ್ ಪ್ಲಟೂನ್ ಹಾಗೂ ಕಂಪನಿ ಕಮಾಂಡರ್‌ಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ನಗರದ ವಸತಿ ನಿಲಯಗಳು ಅವ್ಯವಸ್ಥೆಗಳ ಆಗರ ನಿವಾರಣೆಗೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ನಗರದ ಪ.ಜಾತಿ, ಪ.ಪಂ. ಸೇರಿದಂತೆ ಎಲ್ಲಾ ವಸತಿ ನಿಲಯಗಳು ಅವ್ಯವಸ್ಥೆಯ ಆಗರವಾಗಿದ್ದು, ಅಧಿಕಾರಿಗಳು, ವಾರ್ಡನ್‌ಗಳು ಮತ್ತು ಸಿಬ್ಬಂದಿ ವಿದ್ಯಾರ್ಥಿಗಳ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದು, ತಕ್ಷಣವೇ ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಮಹಿಳಾ ವಿಭಾಗದ ಜಿಲ್ಲಾಧ್ಯಕ್ಷೆ ಅರ್ಚನಾ ಸುಂಕಾರಿ ಒತ್ತಾಯಿಸಿದರು. ಅವರಿಂದು

ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ನಗರದ ಅನೇಕ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಬಹುತೇಕ ವಸತಿ ನಿಲಯಗಳು ಮೂಲಭೂತ ಸೌಕರ್ಯವಿಲ್ಲದೇ ಅವ್ಯವಸ್ಥೆಯ ಆಗರವಾಗಿದ್ದು ಕಂಡು ಬಂದಿದೆ. ಅಲ್ಲದೇ ವಿದ್ಯಾರ್ಥಿಗಳು ಸಹ ದೂರಿದ್ದಾರೆ.

ಸ್ವಚ್ಛತೆ ಕೊರತೆ ಇದ್ದು ಕಾಣುತ್ತದೆ. ಅಲ್ಲದೇ ಊಟಕ್ಕೆ ಬಳಸುವ ಪದಾರ್ಥಗಳನ್ನು ಅಡುಗೆ ಮಾಡುವವರು ಮನೆಗಳಿಗೆ ತೆಗೆದು–ಕೊಂಡು ಹೋಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಊಟ ಸಿಗುತ್ತಿಲ್ಲವೆಂದು ದೂರಿದರು. ಇದರ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಯಾವುದೇ ಕ್ರಮಕ್ಕೆ ಏಕೆ? ಮುಂದಾಗುತ್ತಿಲ್ಲವೆಂದು ಪ್ರಶ್ನಿಸಿದರು. ತಕ್ಷಣ ಜಿಲ್ಲಾಧಿಕಾರಿಗಳು ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಮೂಲಭೂತ ಸೌಕರ್ಯ ಮತ್ತು ಗುಣಮಟ್ಟದ ಊಟದ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮೀನಾಕ್ಷಿ, ಲಕ್ಷ್ಮೀ ಉಪಸ್ಥಿತರಿದ್ದರು.

# ಕೃಷಿ ವಿವಿ ನೇರ ನೇಮಕಾತಿ ಹುದ್ದೆ ಭರ್ತಿ ಪ್ರಕ್ರಿಯೆ ರದ್ದುಪಡಸದಿದ್ದರೆ ಕೃಷಿ ವಿವಿ ಮುತ್ತಿಗೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು,**

ಕೃಷಿ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ ಹುದ್ದೆಗಳ ಭರ್ತಿಯಲ್ಲಿ ಭಾರೀ ಅವ್ಯವಹಾರ ನಡೆಯುತ್ತಿದ್ದು, ನೇಮಕಾತಿ ಪಕ್ರಿಯೆ ಅಧಿಸೂಚನೆ ತಕ್ಷಣವೇ ರದ್ದು ಪಡಿಸುವ ಮೂಲಕ ಯುಜಿಸಿ ನಿಯಮನುಸಾರ ನಡೆಸಬೇಕು ಇಲ್ಲದಿದ್ದರೆ ಜನವರಿ ಮೊದಲ ವಾರದಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ದಲಿತ ಮುಖಂಡರಾದ ಅಂಬಣ್ಣ ಆರೋಲಿ ಅವರು ಎಚ್ಚರಿಸಿದ್ದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 2023ನೇ ಸಾಲಿನಿಂದ ಕೃಷಿ ವಿವಿ 75 ಸಹಾಯಕ ಪ್ರಾಧ್ಯಪಕ ನೇರ ನೇಮಕಾತಿ ಹುದ್ದೆಗಳ ಭರ್ತಿ ಪ್ರಕ್ರಿಯೆ ವಿಳಂಬಗೊಂಡಿದೆ.



ಆದರೆ ಕೃಷಿ ವಿವಿ ಕುಲಪತಿ ಹನುಮಂತಪ್ಪ ಅವರು ಇನ್ನು ಮೂರು ತಿಂಗಳಲ್ಲಿ ಅವಧಿಯಲ್ಲಿ ನಿವೃತ್ತಿಯಾಗಲಿದ್ದು, ಈಹಿನ್ನಲೆಯಲ್ಲಿ 75 ಸಹಾಯಕ ಪ್ರಾಧ್ಯಪಕ ಹುದ್ದೆಗಳ ನೇರ ನೇಮಕಾತಿಯನ್ನು ತರಾತುರಿಯಲ್ಲಿ ನಡೆಸುವ ಮೂಲಕ ಭ್ರಷ್ಟಾಚಾರ ನಡೆಸುವ ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿದರು. ನೇಮಕಾತಿಯಲ್ಲಿ ಕೋಟ್ಯಂತರ ಅನುದಾನವನ್ನು ದುರುಪಯೋಗ ಮಾಡುವ ಕುತಂತ್ರ ನಡೆದಿದೆ ಎಂದರು. ಕೃಷಿ ವಿಶ್ವವಿದ್ಯಾಲಯದ ನೇರ ನೇಮಕಾತಿ ಹುದ್ದೆಗಳ ಭರ್ತಿ ಪಾರದರ್ಶಕವಾಗಿ ನಡೆಸಬೇಕು ಈ ಹಿನ್ನಲೆ ರಾಜ್ಯಪಾಲರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ಜನಪ್ರತಿನಿದಿನಗಳು ಮುತುವರ್ಜಿ ವಹಿಸಿ ಇದನ್ನು ಸರಿಪಡಿಸಬೇಕು ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಮನವಿ ಮಾಡಿದರು

ರಾಯಚೂರು ಕೃಷಿ ವಿವಿಯಲ್ಲಿನ 75 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಜನವರಿ 17 ರಿಂದ 20 ರವರೆಗೆ ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ ದಲ್ಲಿ ನೆಡಯಲಿರುವ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಿ ನಡೆಸಬೇಕು ಎಂದು ಆಗ್ರಹಿಸಿದರು.

ಈ ಯುಜಿಸಿ ನಿಯಮಾವಳಿಗಳ ಪ್ರಕಾರ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವಂತೆ ಕೆಲ ನಿರುದ್ಯೋಗಿ ಯುವಕ ಯುವತಿಯರು ನ್ಯಾಯಾಲಯದ ಮೊರೆ ಹೋದ ಪರಿಣಾಮ ಈಗಾಗಲೇ ಮೂರು ಸಲ ನೇಮಕಾತಿ ಪ್ರಕ್ರಿಯೆ ಮುಂದೂಡಲ್ಪಟ್ಟಿದೆ. ಆದಾಗ್ಯೂ ಕೃಷಿ ವಿವಿಯ ಕುಲಪತಿ ಹನುಮಂತಪ್ಪ ಅವರು ನಿರುದ್ಯೋಗ ಯುವಕರಿಂದ ಕೋಟ್ಯಂತರ ಹಣದ ವ್ಯವಹಾರ ಕುದುರಿಸಿಕೊಂಡು ಕಾನುನು ಬಾಹೀರ ಕೃತ್ಯವನ್ನು ಪೂರ್ಣಗೊಳಿಸಲು ಶತಾಯ ಗತಾಯ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಕೃಷಿ ವಿಶ್ವವಿದ್ಯಾಲಯ ಕುಲಪತಿ ಅವರ ಮೇಲೆ 9 ದೋಷರೋಪ ಪಟ್ಟಿ ಸಿದ್ದಪಡಿಸಲಾಗಿದೆ. ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯ ಅನುದಾನ ಪ್ರತಿ ವರ್ಷವೂ 2 ಕೋಟಿ ಮಂಜೂರಿಯಾಗಲಿದ್ದು ಈ ಅನುದಾನ ಸಮಗ್ರವಾಗಿ ಬಳಕೆ ಆಗುತ್ತಿಲ್ಲ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಅನುದಾನವೂ ಘಟಕಗಳಿಗೆ ಪ್ರತಿ ವರ್ಷ ಒಂದು ಕೋಟಿ ಬಳಕೆ ಮಾಡಿದ ಲೆಕ್ಕ ಪತ್ರದ ದಾಖಲೆ ಇಲ್ಲ ಎಂದರು. ಪರಿಶಿಷ್ಟ ಜಾತಿಯ ಕೇವಲ ಒಬ್ಬ ವಿದ್ಯಾರ್ಥಿಗೆ ಅನೇಕ ಭಾರೀ ವಿದೇಶ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಕೃಷಿ ವಿವಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಅನಿಲ್ ಕುಮಾರ, ರಾಘವೇಂದ್ರ ಬೋ–ರೆಡ್ಡಿ, ಎಸ್ ರಾಜು, ಸೇರಿದಂತೆ ಉಪಸ್ಥಿತರಿದ್ದರು.

# ಗುರುವಿನ ಕೃಪೆ ಮಹತ್ವದು ಗುರುವಿನ ಆಶೀರ್ವಾದವೆ ನಮ್ಮಗೆ ಶಕ್ತಿ: ಡಾ. ಬಸವಲಿಂಗ ಪಟ್ಟದ್ದೇವರು



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಗುರುವಿನ ಕೃಪೆ ಮಹತ್ವದು, ಗುರುವಿನ ಆಶೀರ್ವಾದವೆ ನಮ್ಮಗೆ ಶಕ್ತಿ, ಇಂದು ನಾವು ಸಮಾಜ ಮುಖಿಯಾಗಿ ಸೇವೆ ನೀಡಲು ನಮ್ಮ ಗುರುಗಳಾದ ಡಾ.ಚನ್ನಬಸವ ಪಟ್ಟದ್ದೇವರ ಮಾರ್ಗದರ್ಶನ ಅವರ ಆದರ್ಶ ಗುಣಗಳು ನಮ್ಮಗೆ ಶಕ್ತಿ ಎಂದು ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ನುಡಿದರು. ಕಮಲನಗರ ಪಟ್ಟಣದಲ್ಲಿ ಪೂಜ್ಯಶ್ರೀ ಡಾ. ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯತ್ಸವ ಮತ್ತು ರಥೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಪೂಜ್ಯರ ಹುಟ್ಟೂರಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬಹಳ ಅದ್ಭುತ ಜಾತ್ರಾ ಮಹೋತ್ಸವ ನಡಿತಾ ಇದ್ದು, ಗಡಿಯಲ್ಲಿ ಕನ್ನಡ ಬೆಳೆಸಿದ ಗುರುಗಳ ಜನ್ಮದಿನದ ಪ್ರಯುಕ್ತ ಕನ್ನಡ ರಾಥೋತ್ಸವ ಕಾರ್ಯಕ್ರಮ ಬಹಳ ಹೆಮ್ಮೆಯ ಕಾರ್ಯವಾಗಿದೆ.

ಶಾಸಕರಾದ ಪ್ರಭು ಚವ್ಹಾಣ ಅವರು ಮಾತನಾಡಿ, ಸನಾತನ ಧರ್ಮದ ಯಾವುದೇ ಕಾರ್ಯಕ್ಕೆ ನಾನು ಸದಾ ಸಿದ್ದನಾಗಿರುತ್ತೇನೆ, ನಮ್ಮ ಭಾಗದ ನಡೆದಾಡುವ ದೇವರು, ಡಾ.ಚನ್ನಬಸವ ಪಟ್ಟದ್ದೇವರ ಈ ಭಾಗ ಜನಕ್ಕಾಗಿ ತಮ್ಮ ಜೀವನನ್ನು ಸಮರ್ಪಣೆ ಮಾಡಿದ್ದಾರೆ. ಹಿರೇಮಠ ವಿದ್ಯಾಪೀಠ ಸಂಸ್ಥೆಯಲ್ಲಿ ಅನಾಥ ಮಕ್ಕಳಿಗೆ ಮರುಜನ್ಮ ನೀಡುವ ಪೂಜ್ಯ ಬಸವಲಿಂಗಪಟ್ಟದ್ದೇವರ ಕಾರ್ಯ ಹೃದಯ ಮಿಡಿಯುವಂಥದ್ದು ಎಂದು ಹೇಳಿದರು.

ಅನುಭಾವ ನೀಡಿದ ಶರಣಬಸವ ಮಹಾಸ್ವಾಮಿಗಳು, 12ನೇ ಶತಮಾನದ ಶರಣರ ಆಚಾರ ವಿಚಾರಗಳನ್ನು ಚನ್ನಬಸವ ಪಟ್ಟದೇವರು 19ನೇ ಶತಮಾನದಲ್ಲಿ ಜೀವ ತುಂಬಿದರು, ಬಸವಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪನೆಗೆ ಡಾ.ಡಾ. ಚನ್ನಬಸವ ಪಟ್ಟದ್ದೇವರ ಕನಸನ್ನು ಅತಿ ದೊಡ್ಡ ರೀತಿ ಯಲ್ಲಿ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರ ಸಾಕಾರಗೊಳ್ಳಿಸುವ ಕಾರ್ಯ ಮಾಡಿದ್ದಾರೆ. ಎಂದು ಹೇಳಿದರು.

ಗುರುಬಸವ ಪಟ್ಟದ್ದೇವರು ಪ್ರಾಸ್ತವಿಕ ಮಾತನಾಡಿ, ಪೂಜ್ಯರು ಈ ಭಾಗದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಹುಟ್ಟು ಹಾಕಿ ಕನ್ನಡವನ್ನು ಲಾಲಾಣೆ ಪೋಷಣೆ ಮಾಡಿ ಬೆಳೆಸಿದ್ದರು, ಗುರುವಿನ ಹೆಸರು ಉಳಿಸಿದ ಕೀರ್ತಿ ಬಸವಲಿಂಗ ಪಟ್ಟದ್ದೇವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಭವ್ಯ ಮೆರವಣಿಗೆ: ಮುಂಜಾನೆ ಭವ್ಯ ಮೆರವಣಿಗೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ವಿವಿಧ ಶಾಲೆ ಮಕ್ಕಳ ನ್ರತ್ಯ ಮೂಲಕ ಅದ್ದೂರಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ವಿವಿಧ ಮಠಾಧಿಶರು, ಗ್ರಾಮದ ಯುವಕರು, ಸುತ್ತ ಮುತ್ತಲಿನ ಭಕ್ತರು ಸೇರಿದರು.



ಕಮಲನಗರ: ಪೂಜ್ಯ. ಶ್ರೀ ಡಾ. ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯತ್ಸವ ಪ್ರಯುಕ್ತ ಮಲ್ಲಮ್ಮ ನುಡಿ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ ಡಾ. ಚನ್ನಬಸವ ಪಟ್ಟದ್ದೇವರ ಕೂರಿತು

ವಿಶೇಷ ಲೇಖನವನ್ನು ನಾಡೊಜ ಡಾ. ಬಸವಲಿಂಗ ಪಟ್ಟದ್ದೇವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥೆನ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಮಲನಗರ ಸಿ.ಪಿ.ಐ. ಶ್ರೀಕಾಂತ ಅಲ್ಲಾಪುರೆ, ಜಾತ್ರಾ ಸಮಿತಿ ಅಧ್ಯಕ್ಷ ಶಿವಕುಮಾರ ಜೂಲ್ವೆ, ಲೇಖನ ಬರೆದ ಪರಮೇಶ ರಾಂಪುರೆ ಸೇರಿದಂತೆ ಇನ್ನಿತರ ಇದ್ದರು.






ಕಮಲನಗರ: ಪೂಜ್ಯ. ಶ್ರೀ ಡಾ. ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯತ್ಸವ ಹಾಗೂ ಕನ್ನಡ ರಾಥೋತ್ಸವ ಕಾರ್ಯಕ್ರಮ ಪ್ರಯುಕ್ತ ಆಯೋಜಿಸಿದ ಕನ್ನಡ ರಾಥೋತ್ಸವಕ್ಕೆ ಬೀದರ ಲೋಕಸಭಾ ಸದಸ್ಯರಾದ ಮಾನ್ಯಶ್ರೀ ಸಾಗರ ಖಂಡ್ರೆ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿ, ಪೂಜ್ಯ ಶ್ರೀಗಳು ಈ ಭಾಗದಲ್ಲಿ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ ಹುಟ್ಟು ಹಾಕಿ ಕನ್ನಡ ಬೆಳೆಸಿದ್ದರು. ಶಿಕ್ಷಣ ಪ್ರೇಮಿ, ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಶ್ರೀಗಳ ಕೊಡಗೆ ಅಪಾರವಾಗಿದೆ. ಕಾಯಕ ಪರಿಣಾಮಗಳಾದ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಜಯಂತ್ಯತ್ಸವ ಕಾರ್ಯಕ್ರಮಕ್ಕೆ ಎಲ್ಲರೂ ಒಗ್ಗೂಡಿ ಕನ್ನಡ ರಥೋತ್ಸವ ಮಾಡಿದು ಹೆಮ್ಮೆ ಯ ವಿಚಾರ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾಡೊಜ ಡಾ. ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥೆನ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಮುಖಂಡರಾದ ಪ್ರವೀಣ ಪಾಟೀಲ, ಸಂತೋಷ ಬಿರಾದಾರ, ಸೇರಿದಂತೆ ನೂರಾರು ಭಕ್ತರು ಇದ್ದರು.

# ಕರ್ನಾಟಕ ಮಾನವ ಹಕ್ಕುಗಳ ಕಾವಲು ಸಮಿತಿ (ರಿ) ಜಿಲ್ಲಾಧಿಕಾರಿಗೆ ಮನವಿ...



ಬಳ್ಳಾರಿ : ಸರ್ಕಾರಿ ಜಮೀನು ಒತ್ತುವರಿ ಮಾಡುತ್ತಿರುವವರ ಮೇಲೆ ಕ್ರಮ ಜರುಗಿಸಿ, ಅಂತಹ ಜಮೀನನ್ನು ನಿರಾಶ್ರಿತ ಬಡವರಿಗೆ ನೀಡಲು ಮನವಿ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ಮಾನವ ಹಕ್ಕುಗಳ ಕಾವಲು ಸಮಿತಿ ಡಾ. ಯು. ಉರುಕುಂದ-ರೆಡ್ಡಿ ರಾಜ್ಯ ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಸಲ್ಲಿಸಿದ್ದಾರೆ. ಈ ಸಂದರ್ಭವಾಗಿ ಅವರ ಮಾತನಾಡುತ್ತಾ

ಬಳ್ಳಾರಿಯಲ್ಲಿ ಸರ್ಕಾರಿ ಜಮೀನು ಕಬಳಿಸುವ ಮಾಫಿಯಾ ಅಲ್ಲಲ್ಲಿ ಸರ್ಕಾರಿ ಜಮೀನು ಕಬಳಿಸುವುದು, ಒತ್ತುವರಿ ಮಾಡುವುದು, ತಮ್ಮ ಹಿಂಬಾಲಕರ ಹೆಸರಿಗೆ ಕಾಗದ ನಕಲಿ ಪತ್ರಗಳನ್ನು ಸೃಷ್ಟಿಸಿ ನಂತರ ಮಾರಾಟ ಮಾಡುವುದು ಅಂತಹ ಮಾಫಿಯಾಗಳು, ಪುಡಾರಿಗಳು, ರಾಜಕೀಯ ಮುಖಂಡರ ನೆರಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆದ್ದರಿಂದ ಅಂತಹವರನ್ನು ಗುರುತಿಸಿ ಅವರ ಮೇಲೆ ಕ್ರಮ ಜರುಗಿಸಿ, ಸರ್ಕಾರಿ ಜಾಗಗಳನ್ನು ಗುರುತಿಸಿ, ಅವುಗಳನ್ನು ಕಬಳಿಸುವ ಜಾಲ ಮತ್ತು ತಂತ್ರಗಳನ್ನು ವಿಫಲಗೊಳಿಸಿ ಬಳ್ಳಾರಿಯಲ್ಲಿ ಮನೆಗಳಿಲ್ಲದೆ ಮಳೆ, ಚಳಿ, ಗಾಳಿಗೆ ಸೂರು ಮಾಡಿಕೊಂಡು ಇವರ ನಿಜವಾದ ನಿರ್ಗತಿಕರನ್ನು ಗುರುತಿಸಿ ಅಂತಹವರಿಗೆ ನಿವೇಶನ ನೀಡಬೇಕೆಂದು ಈ ಮೂಲಕ ಕೋರುತ್ತೇನೆ.

# ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ನಾರಾ ಭರತ್ ರೆಡ್ಡಿ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ ಅಡಿ ಶುಕ್ರವಾರ ನಗರ ಶಾಸಕ ನಾರಾ ಭರತ್ ರೆಡ್ಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

ನಗರದ ವಾರ್ಡ್ ಸಂಖ್ಯೆ 20ರ ಗಣೇಶ್ ಕಾಲೋನಿ ಹಾಗೂ ಹುಸೇನ್ ನಗರದಲ್ಲಿ 7.30 ಕೋಟಿ ರೂ.ಗಳ ಅನುದಾನದ ಅಡಿ ಮೂಲಭೂತ ಸೌಕರ್ಯ ಒದಗಿಸುವ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಶಾಸಕ ನಾರಾ ಭರತ್ ರೆಡ್ಡಿ ಚಾಲನೆ ನೀಡಿದರು.

ಈ ಸಂದರ್ಭ ಮಹಾನಗರಪಾಲಿಕೆಯ ಮೇಯರ್ ಪಿ.ಗಾದೆಪ್ಪ, ವಾರ್ಡಿನ ಸದಸ್ಯ ಪೇರಂ ವಿವೇಕ್, ಮಾಜಿ ಮೇಯರ್ ನಾಗಮ್ಮ, ಸದಸ್ಯರಾದ ಕುಬೇರಾ, ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು, ಹಾವಂಭಾವಿ ಲೋಕೇಶ್, ದುಬ್ಬರಾಜು, ರಘು, ಥಿಯೇಟರ್ ಶಿವು, ಗೌಸಿಯಾಬೀ, ಶ್ರೀನಿವಾಸ್ ರಾವ್ ಸೇರಿದಂತೆ ಹಲವರು ಹಾಜರಿದ್ದರು.

ಅದೇ ರೀತಿ ವಾರ್ಡ್ ಸಂಖ್ಯೆ 18ರ ವ್ಯಾಪ್ತಿಯ ರಾಘವೇಂದ್ರ ಕಾಲೋನಿ ಹಾಗೂ ಎಂ.ಜಿ. ಪೆಟ್ರೋಲ್ ಬಂಕ್ ಸಮೀಪ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ ಅಡಿ 8.90 ಕೋಟಿ ರೂ.ಗಳ ಮೂಲಭೂತ ಸೌಕರ್ಯ ಒದಗಿಸುವ ವಿವಿಧ ಕಾಮಗಾರಿಗಳಿಗೆ ಶಾಸಕ ನಾರಾ ಭರತ್ ರೆಡ್ಡಿ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭ ಮಾಜಿ ಮೇಯರ್ ಹಾಗೂ ವಾರ್ಡಿನ ಸದಸ್ಯ ಮುಲ್ಲಂಗಿ ನಂದೀಶ್, ಕಾಂಗ್ರೆಸ್ ಮುಖಂಡ ಬಿಸಲಹಳ್ಳಿ ಮಂಜು, ಆಟೋನಗರ ನಾಗರಾಜ, ಪಾಲಿಕೆಯ ಅಧಿಕಾರಿ ಸಿಬ್ಬಂದಿಗಳು ಮತ್ತಿತರರು ಹಾಜರಿದ್ದರು.

# ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಬೆಂಬಲ ಯೋಜನೆಯಡಿ 2025-26 ನೇ ಸಾಲಿನ ಮುಂಗಾರು ಹಂಗಾಮಿನ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಖರೀದಿಸಲಾಗುವುದು ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ನಿಗಧಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್ ಗೆ ರೂ.8000 ರಂತೆ ಖರೀದಿಸಲಾಗುತ್ತಿದ್ದು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತವು ಖರೀದಿ ಏಜೆನ್ಸಿಯಾಗಿದೆ.

**ಖರೀದಿ ಕೇಂದ್ರಗಳ ವಿವರ:**

ಬಳ್ಳಾರಿ ನಗರದ ಎಸ್.ಪಿ ವೃತ್ತದ ಬಳಿಯ ಮಾರುತಿ ನಗರದ 2ನೇ ಕ್ರಾಸ್ ನ ರೈತರ ಸೇವಾ ಸಹಕಾರ ಸಂಘ ನಿಯಮಿತ (ದೂ.08392266489, ಮೊ.9035829283).

ಬಳ್ಳಾರಿ ನಗರದ ಹರಿಶ್ಚಂದ್ರ ಘಾಟ್ ರಸ್ತೆಯ ಮಿಲ್ಲರ್ ಪೇಟೆಯ ನಂ:124 ರ ಟಿಎಪಿಸಿಎಂಎಸ್ (ಮೊ.9535151619, 6361665722).

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು, ಬಳ್ಳಾರಿ (ಮೊ.9449664453).

**ಬೇಕಾದ ದಾಖಲೆ:**

2025-26ನೇ ಸಾಲಿನ ಪಹಣಿ ಪತ್ರ, ರೈತರು ತಮ್ಮ ಹೆಸರನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿರಬೇಕು ಹಾಗೂ ಎಫ್ಐಡಿ ಪಡೆಯುವುದು ಕಡ್ಡಾಯ, ರೈತರಲ್ಲಿ ಫ್ರೂಟ್ಸ್ ಐಡಿ ಇಲ್ಲದೇ ಇದ್ದಲ್ಲಿ ಅಥವಾ ಫ್ರೂಟ್ಸ್ ನಲ್ಲಿ ಯಾವುದಾದರು ತಾಂತ್ರಿಕ ದೋಷವಿದ್ದಲ್ಲಿ ರೈತರು ಕೃಷಿ ಇಲಾಖೆಗೆ ಸಂಪರ್ಕಿಸಿ ಅವಶ್ಯಕ ಮಾಹಿತಿ ಪಡೆಯಬಹುದು.

ಆಧಾರ್ ಕಾರ್ಡ್ (ಮೂಲ), ಬ್ಯಾಂಕ್ ಖಾತೆ (ಆಧಾರ್ ಕಾರ್ಡ್ ನೊಂದಿಗೆ ಜೋಡಣೆಗೊಂಡ) ಪುಸ್ತಕದ ನಕಲು ಪ್ರತಿ, ಒಣಗಿದ ಹಾಗೂ ಸ್ವಚ್ಛ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಮಾರಾಟಕ್ಕಾಗಿ ಖರೀದಿ ಕೇಂದ್ರಕ್ಕೆ ತರುವುದು. ತೆ-ೂಗರಿ ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು ಪ್ರಕಟಣೆಗೊಂಡ 80 ದಿನಗಳೊಳಗೆ ನೋಂದಣಿ ಮಾಡಿಸಬೇಕು ಹಾಗೂ ನೋಂದಣಿ ಚೀಟಿ ಪಡೆದುಕೊಳ್ಳಬೇಕು.

ನಿಗಧಿತ ಅವಧಿಯೊಳಗೆ ನೋಂದಣಿಗೊಂಡ ರೈತ-ರಿಂದ ಪ್ರತಿ ಎಕರೆಗೆ 04 (ನಾಲ್ಕು) ಕ್ವಿಂಟಾಲ್ ನಂತೆ ಹಾಗೂ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಾಗುವ ತೊಗರಿ ಬೆಳೆದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾದ ಪ್ರಮಾಣದಷ್ಟು ತೊಗರಿ ಉತ್ಪನ್ನವನ್ನು 2026 ರ ಜನವರಿ 01 ರಿಂದ 90 ದಿನಗಳವರೆಗೆ ಬೆಳಿಗ್ಗೆ 09 ರಿಂದ ಸಂಜೆ 05 ಗಂಟೆಯವರೆಗೆ ಮಾತ್ರ ಖರೀದಿಸಲಾಗುವುದು. ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಖರೀದಿಸಲಾಗುವುದು. ಯಾವುದೇ ಸಂದರ್ಭದಲ್ಲಿ ರೈತರು ಮಧ್ಯವರ್ತಿಗಳ ಮೊರೆ ಹೋಗಬಾರದು. ಇದರ ಸದುಪಯೋಗ ರೈತರೇ ನೇರವಾಗಿ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ.ಜಾತಿಯ ಪತ್ರಿಕೋದ್ಯಮ ಪದವೀಧರರಿಗೆ ಅಪ್ರೆಂಟಿಸ್ ತರಬೇತಿ: ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ, ವಿಶೇಷ ಘಟಕ ಯೋಜನೆಯಡಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಪರಿಶಿಷ್ಟ ಜಾತಿಯ ಅರ್ಹ ಅಭ್ಯರ್ಥಿಗಳಿಂದ 12 ತಿಂಗಳ ಅವಧಿಗೆ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಡಿಸೆಂಬರ್ 30 ರ ವರೆಗೆ ಅವಧಿ ವಿಸ್ತರಿಸಲಾಗಿದೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪದವಿ/ಸ್ನಾತಕೋತ್ತರ ಪದವಿ ಪಡೆದಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಹೊಂದಿರುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಅಪ್ರೆಂಟಿಸ್ ತರಬೇತಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಇಬ್ಬರು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು, ತರಬೇತಿ ಅವಧಿಯಲ್ಲಿ ರೂ. 15,000 ಸ್ಟೈಪಂಡ್ ನೀಡಲಾಗುವುದು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಾರವಾರ ಉತ್ತರ ಕನ್ನಡ ಜಿಲ್ಲೆ ದೂರವಾಣಿ ಸಂಖ್ಯೆ: 9480841234 ನ್ನು ಸಂಪರ್ಕಿಸಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವಮಾನವ ದಿನಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವಮಾನವ ದಿನಾಚರಣೆಯನ್ನು ಡಿ.29 ರಂದು ಬೆಳಗ್ಗೆ 10 ಗಂಟೆಗೆ ಕಾರವಾರದ ದಿವೇಕರ್ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ ದೇಶಪಾಂಡೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

# ಅಂಚೆ ಮೂಲಕ ಕನ್ನಡ ಶಿಕ್ಷಣ.

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಮೈಸೂರಿನ ಭಾರತೀಯ ಕೇಂದ್ರ ಸಂಸ್ಥೆ, ಈ ಎರಡೂ ಸಂಸ್ಥೆಗಳು ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲ ಸರ್ಕಾರಿ ನೌಕರರಿಗಾಗಿ ಹನ್ನೆರಡು ತಿಂಗಳುಗಳ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯೊಂದನ್ನು ನಡೆಸುತ್ತಿವೆ. ಇದಕ್ಕೆ ಕರ್ನಾಟಕದಲ್ಲಿರುವ ಎಲ್ಲ ನಗರಸಭೆ, ಕ.ವಿ.ಪ್ರ.ನಿ.ನಿ, ಕೆ.ಎಸ್. ಆರ್.ಟಿ.ಸಿ, ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು ಮತ್ತಿತರ ಸರ್ಕಾರಿ ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಸಹ ನೋಂದಾಯಿಸಿಕೊಳ್ಳಬಹುದು, ನೋಂದಣಿಗಾಗಿ ಶುಲ್ಕವನ್ನು ಕೊಡಬೇಕಾಗಿಲ್ಲ.

ಕರ್ನಾಟಕದ ಸರ್ಕಾರಿ ನೌಕರರು ಸಂಪರ್ಕ ಶಿಬಿರ ಹಾಗೂ ಪರೀಕ್ಷೆಗಳಿಗೆ ಹಾಜರಾಗುವಾಗಿನ ಅವರ ಕಚೇರಿ ಗೈರುಹಾಜರಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಲಾಗುವುದು, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ನೋಂದಾಯಿಸಿಕೊಂಡು ಉತ್ತೀರ್ಣರಾದವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ಕರ್ನಾಟಕ ಸರ್ಕಾರದ ಅಧಿಸೂಚನೆಯಂತೆ ವಿನಾಯಿತಿ ಇದೆ.

ಈ ಯೋಜನೆಯನ್ನು ಈಗ ಸಾರ್ವಜನಿಕರಿಗೂ ವಿಸ್ತರಿಸಲಾಗಿದೆ. ಇವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹೂಗೂ ವಯೋಮಿತಿ 18ರಿಂದ 50 ವಯಸ್ಸಿನ ಒಳಗಿರಬೇಕು, ಆಸಕ್ತರು ಭರ್ತಿ ಮಾಡಿದ ಅರ್ಜಿಯ ಜೊತೆಯಲ್ಲಿ ರೂ. 250/- ಡಿಮ್ಯಾಂಡ್ ಡ್ರಾಫ್ಟನ್ನು ಕಳುಹಿಸಿ ಕೊಡಬೇಕು. ನೋಂದಣಿತರಿಗೆ ಇಪ್ಪತ್ತು ಪಾಠಾವಳಿಗಳನ್ನು ಕಳುಹಿಸಿಕೊಡಲಾಗುವುದು, ತರಬೇತಿ ಮತ್ತು ಸಂಪರ್ಕ ಶಿಬಿರದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು.

ಮೂತ್ತೊಂಭತ್ತನೆಯ ತಂಡದ ತರಬೇತಿಯು ಜನವರಿ 2025 ರಿಂದ ಆರಂಭವಾಗುತ್ತದೆ. ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಪ್ರಭಾರಿ ಅಧಿಕಾರಿ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-570006, ದೂ. ಸಂ. 0821-2345128 ಇವರಿಗೆ ಐದು ರೂಪಾಯಿಯ ಅಂಚೆ ಚೀಟಿಯನ್ನು ಹಚ್ಚಿದ ಸ್ವವಿಳಾಸಿತ ಲಕೋಟೆಯನ್ನು ಕಳುಹಿಸಿ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳು ಪ್ರಭಾರಿ ಅಧಿಕಾರಿಯವರಿಗೆ ಜನವರಿ 10 ರವರೆಗೆ ತಲುಪಬೇಕೆಂದು ಸಂಸ್ಥೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಕುಮಾರ ನಂದಿಕೋಲಮಠ ಒಂದು ಲಕ್ಷ ಚೆಕ್ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು :**

ಹಿರಿಯ ಪತ್ರಕರ್ತ ದಿ. ಬಿಎ ನಂದಿಕೋಲಮಠರ ಸ್ಮರಣಾರ್ಥ ಪತ್ರಕರ್ತರ ಸಂಘದಲ್ಲಿ ದತ್ತಿ ಪ್ರಶಸ್ತಿ ಆರಂಭಿಸಲು ದಿವಂಗತರ ಸಹೋದರ ಶಿವಕುಮಾರ ನಂದಿಕೋಲಮಠ, ರಾಯಚೂರಲ್ಲಿ ಗುರುವಾರ ಸಂಜೆ ನಡೆದ ಪತ್ರಕರ್ತರ ಸಂಘದ ಜಿಲ್ಲಾ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಒಂದು ಲಕ್ಷ ರೂಪಾಯಿ ಚೆಕ್‌ಅನ್ನು ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಹಸ್ತಾಂತರಿಸಿದರು. ಸಂಘದ ರಾಜ್ಯ ಕಾರ್ಯದರ್ಶಿ ಲೋಕೇಶ್, ಜಿಲ್ಲಾಧ್ಯಕ್ಷ ಆರ್.ಗುರುನಾಥ, ಪ್ರಧಾನ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ ಸೇರಿ ಇತರರಿದ್ದರು.

# ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಶೀತ ಗಾಳಿ



**ಥಂಡಿಗೆ ಥಂಡಾ ಹೊಡೆದ ಜನಜೀವನ**

ಮಲ್ಲಮ್ಮ ನುಡಿ ವಾರ್ತೆ

ಇತ್ತೀಚೆಗೆ ವಿಪರೀತ ಶೀತಗಾಳಿ ಮಿಶ್ರಿತ ಚಳಿಗೆ ಎಲ್ಲೆಡೆ ಜನಜೀವನ ಅಸ್ತವೆಸ್ತಗೊಳಿಸಿದೆ. ವಲಯದಲ್ಲಿ ವೀಪರಿತ ಚಳಿಯೋ ಚಳಿ. ದಿನ ಬೆಳಗಿನ ಜಾವ ಹಾಗೂ ಸಾಯಂಕಾಲ ಸಮಯ ಮೈನಡುಗಿಸುವ ಚಳಿ ಹೇಳ ತೀರದು. ತೀವ್ರವಾಗಿ ಬೀಸುವ ಶೀತ ಗಾಳಿಗೆ ಜನರು ನಲುಗಿ ಹೋಗಿದ್ದಾರೆ. ಬೆಳಿಗ್ಗೆ ಸಾಯಂಕಾಲವಷ್ಟೆ ಅಲ್ಲದೆಯೂ ಇಡಿ ದಿನ ಮದ್ಯಾಹ್ನ ಸಹ ಬಿಸಿಲಿಗೆ ಮೈ ಒಡ್ಡಿ ನಿಲ್ಲವಂತಾಗಿದೆ. ಸೂರ್ಯೋದಯಲ್ಲಿರುವ ಶೀತ ಗಾಳಿ, ಬಿಸಿಲು ಹೆಚ್ಚಾದಂತೆಲ್ಲಾ, ಶೀತಗಾಳಿಯ ಚಳಿ ಹೆಚ್ಚಾಗುತ್ತಿದ್ದು. ಜನತೆಯನ್ನು ಆತಂಕಕ್ಕೆ ದೂಡಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಶೀತ ಗಾಳಿಗೆ, ಮಹಿಳೆಯರು, ಮಕ್ಕಳು , ಯುವಕರು ಮತ್ತು ವಯಸ್ಸಾದವರಲ್ಲಿ ಜ್ವರ, ಕೆಮ್ಮು, ನೆಗಡಿ, ಮೈ, ಕೈ, ನೋವು, ಮತ್ತು ಚರ್ಮದಲ್ಲಿ ತುರಿಕೆ ಹೆಚ್ಚಾಗಿ ಅನೇಕ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ. ಪಾರ್ಕಿಂಗನಲ್ಲಿ ವಾಕಿಂಗ್ ಮಾಡುತ್ತಿದ್ದ ಹಿರಿಯ ನಾಗರಿಕರು, ಕೊರೆಯುವ ಶೀತ ಗಾಳಿಗೆ (ಚಳಿಗೆ) ಕಂಗಾಲಾಗಿ, ಬೆಚ್ಚಗಿನ ಬಟ್ಟೆ ಧರಿಸಿ, ಬೆಂಕಿಯ ಮೊರೆ ಹೋಗಿ ಮನೆಯ ಹಾದಿ ಹಿಡಿದಿದ್ದಾರೆ. ನಸುಕಿನ ಜಾವ ಕೆಲಸಕ್ಕೆ ತೆರಳುವ, ಕೃಷಿ ಕಾರ್ಮಿಕರು, ಬೀದಿ ಬದಿಯ ವ್ಯಾಪಾರಿಗಳ ಬದುಕಿನೊಂದಿಗೆ ಚೆಲ್ಲಾಟವಾಡುವ ಶೀತಗಾಳಿಗೆ ಹಿಡಿ ಶಾಪ ಹಾಕುತ್ತಿರುವ ಜನತೆ, ಶಾಲಾ, ಕಾಲೇಜುಗಳ ಸಮಯ ಬದಲಾವಣೆಯಾದರೂ, ಮೈಕೊರೆಯುವ ಚಳಿ ಇಡೀ ಮಾನವ ದೇಹವನ್ನೇ ಗಡಗಡ ನಡುಗಿಸುವ ಈ ಬಾರಿ ಚಳಿಗಾಲ ರಕ್ತ ಸಂಚಾರಕ್ಕೆ ಸಂಚಕಾರ ತಂದೊಡ್ಡಿದೆ ಎನ್ನುತ್ತಾರೆ ಜನಸಾಮಾನ್ಯರು. ಚಳಿಗಾಲ ಎಂದರೆ ವರ್ಷದ ನಾಲ್ಕು ತಿಂಗಳು ಅತ್ಯಂತ ತಂಪಾದ ಋತು, ಇದು ಶರತ್ಕಾಲ ಮತ್ತು ವಸಂತ ಕಾಲದ ನಡುವೆ ಬರುತ್ತದೆ, ಭೂಮಿಯ ಅಕ್ಷದ ಓರೆಗೊಂಡು ಸೂರ್ಯನಿಂದ ದೂರವಿರುವಾಗ ಸಂಭವಿಸುತ್ತದೆ, ಈ ಸಮಯದಲ್ಲಿ ಹಗಲು ಕಡಿಮೆಯಾಗಿ ರಾತ್ರಿಗಳು ದೀರ್ಘವಾಗಿ ಇರುವುದು, ನಿಸರ್ಗದ ಬದಲಾವಣೆಯ ಜೊತೆಗೆ ನಮ್ಮ ಜೀವನಶೈಲಿ ಮತ್ತು ಆಹಾರ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ತರುವ ಋತುವಾಗಿರುವುದು ನಿಜ. ಆದರೆ ಈ ಬಾರಿ ವಾಯುಭಾರ ಕುಸಿತ ಹಾಗೂ ಮೇಲ್ಮೈ ಸುಳಿಗಾಳಿ, ಶೀತಗಾಳಿ, ಮಾಗಿ ಚಳಿಯ ಥಂಡಿಗೆ ಥಂಡಾ ಹೊಡೆದ ಜನಜೀವನ. ಶೀತಗಾಳಿಯಿಂದ ಸುಧಾರಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ. ಮೈನಡುಗಿಸುವ ಕೊರೆಯುವ ಶೀತ ಗಾಳಿಯಿಂದ ಕಾಪಾಡಿಕೊಳ್ಳಲು ದೇಹಕ್ಕೆ ಹೆಚ್ಚು ಬೆಚ್ಚನೆಯ ಆಹಾರ (ಶುಂಠಿ, ಚಕ್ಕೆ, ಲವಂಗ), ವ್ಯಾಯಾಮ (ಧ್ಯಾನ, ಯೋಗ) ಮತ್ತು ಬೆಚ್ಚಗಿನ ಬಟ್ಟೆಗಳ ಅಗತ್ಯವಿರುತ್ತದೆ, ಆದರೆ ಸೌತೆಕಾಯಿ, ಎಳನೀರು ಮತ್ತು ಮೊಸರಿನಂತಹ ತಂಪಾಗಿಸುವ ಆಹಾರಗಳನ್ನು ಮಿತಗೊಳಿಸಿ, ದಪ್ಪನೆಯ ಮತ್ತು ಬೆಚ್ಚಗಿನ ಬಟ್ಟೆಗಳನ್ನು ಧರಿಸಿ. ಆದಷ್ಟು ಮನೆಯಲ್ಲಿಯೇ ಇರಲು ಪ್ರಯತ್ನಿಸಿ. ಮನೆಯ ಒಳಗೂ ಬೆಚ್ಚಗಿನ ವಾತಾವರಣ ಇರಲಿ ಎನ್ನುತ್ತಾರೆ ವೈದ್ಯರು.

◇◇◇◇◇◇◇◇◇◇◇◇◇◇◇◇◇◇◇◇

**ಡಾ ಯಂಕನಗೌಡ ಎಸ್ ಪಾಟೀಲ ಕೆಂಭಾವಿ:**

# ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕಲಾಪ್ರತಿಭೋತ್ಸವ ಪ್ರತಿಭೆ ಬೆಳಗಲು ಪ್ರೋತ್ಸಾಹ ಅಗತ್ಯ : ಶಾಸಕ ಪೂಜಾರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮಕ್ಕಳಲ್ಲಿರುವ ವಿವಿಧ ಕಲೆಗಳನ್ನು ಬೆಳಗಿಸಲು ಪಾಲಕರು ಪ್ರೋತ್ಸಾಹಿಸುವ ಅಗತ್ಯವಿದ್ದು, ಸಾಂಸ್ಕೃತಿಕ ಚಟುವಟಿಕೆಗಳು ಸೃಜನ ಶೀಲತೆ, ಕೌಶಲ್ಯ, ಮಾನಸಿಕ ಸ್ಥೈರ್ಯವನ್ನುನೀಡುತ್ತವೆ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡ ಕಲಾಪ್ರತಿಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಪಠ್ಯೇತರ ಚಟುವಟಿಕೆಗಳೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಇಲಾಖೆಯಿಂದ ಆಯೋಜಿಸಿರುವ ಜಿಲ್ಲಾ ಮಟ್ಟದ ಕಲಾಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸುವ ಎಲ್ಲಾ ಸ್ಪರ್ಧಿಗಳಿಗೆ ಶುಭಕೋರಿ ಪ್ರೋತ್ಸಾಹಿಸಿದರು.

ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ ಸದಸ್ಯ ಬಸಪ್ಪ ಎಚ್. ಭಜಂತ್ರಿ, ಶಿಕ್ಷಣ ಇಲಾಖೆಯ ವಾಯ್.ಬಿ. ಸಾಲಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸೇರಿದಂತೆ ಜಿಲ್ಲೆಯ ಹಿರಿಯ ಕಲಾವಿದರು ಭಾಗವಹಿಸಿದ್ದರು.

ಎರಡು ದಿನಗಳ ಕಾಲ ನಡೆದ ಜಿಲ್ಲಾ ಮಟ್ಟದ ಕಲಾಪ್ರತಿಭೋತ್ಸವದ ವಿವಿಧ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ವಲಯ ಮಟ್ಟಕ್ಕೆ ಆಯ್ಕೆಯಾದವರು ಇಂತಿದ್ದಾರೆ.

ಬಾಲ ಪ್ರತಿಭೆ ವಿಭಾಗದ ಶಾಸ್ತ್ರೀಯ ನೃತ್ಯದಲ್ಲಿ ರಶ್ಮಿ ರೊಟ್ಟಿ, ಸುಗಮ ಸಂಗೀತದಲ್ಲಿ ಈಶ್ವರಿ ನಾಶಿಮಠ, ಚಿತ್ರಕಲೆಯಲ್ಲಿ ಮಹೇಶ ಎಚ್. ಕರಡಿ, ಜನಪದ ಗೀತೆಯಲ್ಲಿ ಸುದರ್ಶನ ಮಾದರ, ಹಿಂದೂಸ್ಥಾನಿ, ಕರ್ನಾಟಕ ವಾದ್ಯ ಸಂಗೀತದಲ್ಲಿ ಅನ್ವಿತ ಮಾಗುರಿ, ಹಿಂದೂಸ್ಥಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಯಬಾಗಿ ಪ್ರಥಮ ಸ್ಥಾನ ಪಡೆದುಕೊಂಡು ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಿಶೋರ ಪ್ರತಿಭೆ ವಿಭಾಗದ ಶಾಸ್ತ್ರೀಯ ನೃತ್ಯದಲ್ಲಿ ಶ್ರೇಯಾ ಕುಲಕರ್ಣಿ, ಸುಗಮ ಸಂಗೀತದಲ್ಲಿ ಸುಶ್ಮಿತಾ ಮಠದ, ಚಿತ್ರಕಲೆಯಲ್ಲಿ ಜಮುನಾ ಕಾಟವಾ, ಹಿಂದೂಸ್ಥಾನಿ, ಕರ್ನಾಟಕ ವಾದ್ಯ ಸಂಗೀತದಲ್ಲಿ ಪ್ರಜ್ವಲ್ ಕೋಲಾರ, ಹಿಂದೂಸ್ಥಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ವೇಣುಗೋಪಾಲ ಯರಗೇರಿ ಪ್ರಥಮ ಸ್ಥಾನ ಪಡೆದರು.

ಯುವ ಪ್ರತಿಭೆ ವಿಭಾಗದ ಶಾಸ್ತ್ರೀಯ ನೃತ್ಯದಲ್ಲಿ ಮೇಘಾ ಅನಗವಾಡಿ, ಸುಗಮ ಸಂಗೀತದಲ್ಲಿ ಬಸವರಾಜ ನಾಯ್ಕರ, ಹಿಂದೂಸ್ಥಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಶ್ರೀನಿವಾಸ ಚವ್ಹಾಣ ಪ್ರಥಮ ಸ್ಥಾನ ಪಡೆದು ವಲಯಮಟ್ಟಕ್ಕೆ ಆಯ್ಕೆಯಾದರು.

# ಮರ್ಯಾದಾ ಹತ್ಯೆ: ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಹುಬ್ಬಳ್ಳಿ ತಾಲೂಕಿನಲ್ಲಿ ನಡೆದ ತುಂಬು ಗರ್ಭಿಣಿಯ ಮರ್ಯಾದಾ ಹತ್ಯೆ ಘಟನೆಯನ್ನು ಖಂಡಿಸಿರುವ ಕರ್ನಾಟಕ ರಾಜ್ಯ ದಲಿತ ಸಂಘರ್ಷಸ ಸಮಿತಿ, ಕೊಲೆ ಮಾಡಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದೆ.

ಈ ಸಂಬಂಧ ನವನಗರದ ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ನಡೆಸಿದ ಸಮಿತಿಯ ಕಾರ್ಯಕರ್ತರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವೊಂದನ್ನು ಸಲ್ಲಿಸಿದ್ದಾರೆ.

ದಲಿತಯುವಕನನ್ನು ಮದುವೆಯಾಗಿದ್ದ ಮಾನ್ಯಾಳನ್ನು ಅವರ ತಂದೆಯೇ ಉದ್ದೇಶಪೂರ್ವಕವಾಗಿ ಕೊಲೆ ಮಾಡಿದ್ದಾರೆ. ಇದರಿಂದ ರಾಜ್ಯದಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ ಎಂಬುದುಕ್ಕೆ ಈ ಮರ್ಯಾದೆ ಹತ್ಯೆ ಕಾರಣವಾಗಿದೆ ಎಂದು ಮನವಿ ತಿಳಿಸಿದ್ದಾರೆ.

ಈ ಘೋರ ಕೃತ್ಯದಿಂದ ದಲಿತ ಯುವಕನ ಕುಟುಂಬ ನಲುಗಿಹೋಗಿದೆ. ಘಟನೆಗೆ ಕಾರಣ-ರಾದ ಎಲ್ಲ ಆರೋಪಿಗಳಿಗೆ ಕಾನೂನು ರೀತಿಯಲ್ಲಿ ಶಿಕ್ಷೆಯಾಗಬೇಕು ಎಂದು ಆಗ್ರಹಿಸಲಾಗಿದೆ.

ರಾಜ್ಯದಲ್ಲಿ ಮರ್ಯಾದೆ ಹತ್ಯೆಯನ್ನು ತಡೆಗಟ್ಟಲು ಸರ್ಕಾರ ಹೊಸ ಕಾನೂನು ಜಾರಿಗೆ ತರಬೇಕು. ಯುವಕನ ಕುಟುಂಬಕ್ಕೆ ಸರ್ಕಾರ ಪರಿಹಾರಧನ ನೀಡಬೇಕು ಮತ್ತು ಪ್ರಕರಣದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆಯ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಅಲ್ಲದೇ ಸೂಕ್ತ ಪೊಲೀಸ್ ಬಂದೋಬಸ್ತ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಸಮಿತಿಯ ರಾಜ್ಯ ಸಂಚಾಲಕ ಪ್ರಭು ಮೇಗಲಮನಿ, ಬೆಳಗಾವಿ ವಿಭಾಗ ಸಂಚಾಲಕ ಹಣಮಂತ ಚಿಮ್ಮಲಗಿ, ಜಿಲ್ಲಾ ಸಂಚಾಲಕ ಮುತ್ತಣ್ಣ ಮೇತ್ರಿ, ಆನಂದ ದೊಡಮನಿ, ಸಂಗಣ್ಣ ಮಡ್ಡಿ, ಕೃಷ್ಣಮೂರ್ತಿ ನಾಯ್ಕರ್, ಅರ್ಜುನ ದೊಡಮನಿ, ಲಕ್ಷ್ಮಣ ಹರಿಜನ, ನಾಗೇಶ ಗಸ್ತಿ, ಮಾರುತಿ ಮರೇಗುದ್ದಿ, ಪ್ರಭು ದೊಡಮನಿ ಸೇರಿದಂತೆ ಅನೇಕರು ಇದ್ದರು.

# ಅಂಗವಿಕಲರ ದಿನಾಚರಣೆ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಸುರಪುರ:**

ಕರ್ನಾಟಕ ವಿಕಲಚೇತನರ ಒಕ್ಕೂಟ (ರಿ) ಹಾಗೂ ಗ್ರಾಮೀಣನಗರ ಹಾಗೂ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ ಒಕ್ಕೂಟ (ರಿ) ಇವರ ಸಂಯುಕ್ತ ಆಶ್ರಯದಲ್ಲಿ ಇಂದು ಸುರಪುರ ಪಟ್ಟಣದ ಗರುಡಾದ್ರಿ ಕಲಾ ಮಂದಿರದಲ್ಲಿ "ವಿಶ್ವ ಅಂಗವಿಕಲರ ದಿನಾಚರಣೆ" ಅಂಗವಾಗಿ ಸುರಪುರ ಹಾಗೂ ಹುಣಸಗಿ ತಾಲೂಕಿನ ತಾಲೂಕು ಮಟ್ಟದ ಅಂಗವಿಕಲರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ 100 ಜನ ವಿಕಲಚೇತನರಿಗೆ ಸಾಧನಾ ಸಲಕರಣೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕರು, ವಿಕಲಚೇತನರು ಕೂಡ ನಮ್ಮಂತೆಯೇ ಮನುಷ್ಯರೇ. ಅವರಿಗೆ ಜಗತ್ತಿನ ಆಗುಹೋಗುಗಳಿಗೆ ಸ್ಪಂದಿಸುವ ಬೌದ್ಧಿಕ ಸಾಮರ್ಥ್ಯ ವಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಅವರನ್ನು ಪ್ರತ್ಯೇಕವಾಗಿ ಪರಿಗಣಿಸುವುದು ಅಥವಾ ಅತಿಯಾದ ಅನುಕಂಪ ತೋರಿಸುವ ಪ್ರವೃತ್ತಿ ಸಮಾಜದಲ್ಲಿ ಕಂಡುಬರುತ್ತಿದೆ. ಇದು ಸರಿಯಲ್ಲ.

ವಿಕಲಚೇತನರಿಗೂ ಸ್ವಾಭಿಮಾನದಿಂದ ಬದುಕುವ ಹಕ್ಕಿದೆ ಎಂದು ಹೇಳಿದರು.

ವಿಕಲಚೇತನರು ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಮಾಹಿತಿತಂತ್ರಜ್ಞಾನ, ಮನೋರಂಜನೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಬಲ್ಲರು.

ಇವರು ವಿಶೇಷ ಸಾಧನೆ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅವರ ಮಹತ್ವ ಸಮಾಜಕ್ಕೆ ಅರಿವಾಗಬೇಕು ಎಂಬ ಉದ್ದೇಶದಿಂದಲೇ ವರ್ಷದಲ್ಲಿ ಒಂದು ದಿನವನ್ನು "ವಿಶ್ವ ಅಂಗವಿಕಲರ ದಿನ"ವಾಗಿ ಆಚರಿಸಲಾಗುತ್ತಿದೆ ಎಂದರು.

ವಿಕಲಚೇತನರು ದೇವರ ಮಕ್ಕಳು, ಕರುಣಾಮಯಿಗಳು. ಅವರ ಉಜ್ವಲ ಭವಿಷ್ಯಕ್ಕಾಗಿ ನಮ್ಮ ಸರ್ಕಾರ ಕಂಕಣಬದ್ಧವಾಗಿದೆ. ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರ ಈಗಾಗಲೇ ಹಲವು ಜನಹಿತಕಾರಿ ಯೋಜನೆಗಳನ್ನು ರೂಪಿಸಿದೆ. ಯಾವುದೇ ವಿಷಯದಲ್ಲೂ ವಿಕಲಚೇತನರು ಹಿಂದೆ ಉಳಿಯಬಾರದು ಎಂಬುದು ಸರ್ಕಾರದ ಸ್ಪಷ್ಟ ನಿಲುವಾಗಿದೆ ಎಂದು ಶಾಸಕರು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಅಧಿಕಾರಿಗಳು,

ಪುನರ್ವಸತಿ ಕಾರ್ಯಕರ್ತರು, ವಿಕಲಚೇತನರು ಹಾಗೂ ಸಾವ ರ್ಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಅಯ್ಯಪ್ಪಸ್ವಾಮಿ ಮಹಾಪೂಜೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ತಾಲೂಕಿನ ಶಿರೂರ ಪಟ್ಟಣದಲ್ಲಿ ಡಿ.28 ರಂದು ಅಯ್ಯಪ್ಪಸ್ವಾಮಿ ಮಹಾಪೂಜೆ ನಡೆಯಲಿದೆ. ಕರುಣಾಮೂರ್ತಿ ಅಯ್ಯಪ್ಪಸ್ವಾಮಿ ಸನ್ನಿಧಾನದ ಮಾಲಾಧಾರಿಗಳು ಈ ಮಹಾಪೂಜೆ ಹಮ್ಮಿಕೊಂಡಿದ್ದು, ರವಿವಾರ ಬೆಳಿಗ್ಗೆ 8 ಗಂಟೆಯಿಂದ ಪಟ್ಟಣದಲ್ಲಿ ಅಯ್ಯಪ್ಪಸ್ವಾಮಿ ಭಾವಚಿತ್ರದ ಮೆರವಣಿಗೆ ವಿವಿಧ ವಾದ್ಯ ವೈಭವ ಹಾಗೂ ಭಜನೆಯ ಮೂಲಕ ಪ್ರಮುಖ ಬೀದಿಗಳಲ್ಲಿ ಜರುಗಲಿದೆ.

ಸಂಜೆ ಸ್ಥಳೀಯ ಸಿದ್ದೇಶ್ವರ ಪ್ರೌಢಶಾಲೆಯ ಮೈದಾನದಲ್ಲಿ ಹುಬ್ಬಳ್ಳಿಯ ಗುರುಸ್ವಾಮಿ ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಅಯ್ಯಪ್ಪಸ್ವಾಮಿ ಮಹಾಪೂಜೆ ನಡೆಯಲಿದ್ದು, ವಿವಿಧ ಗ್ರಾಮಗಳ ಅಯ್ಯಪ್ಪ ಮಾಲಾಧಾರಿಗಳಿಂದ ವಿಶೇಷ ಭಜನೆ, ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ನಂತರ ಅನ್ನ ಸಂತರ್ಪಣೆ ಜರುಗುವುದು ಎಂದು ಕರುಣಾಮೂರ್ತಿ ಅಯ್ಯಪ್ಪಸ್ವಾಮಿ ಸನ್ನಿಧಾನ ಪ್ರಕಟಣೆಯಲ್ಲಿ ತಿಳಿಸಿದೆ.

# ತಾಲ್ಲೂಕಿನಲ್ಲಿ ಗ್ರಾಮ ಸಂಚಾರ

• **ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ) :**

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಡಿ.27 ಮತ್ತು 29ರಂದು ಕಮಲನಗರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಗ್ರಾಮ ಸಂಚಾರ ನಡೆಸುವರು.

ಡಿ.27ರ ಬೆಳಗ್ಗೆ 9ಕ್ಕೆ ಡೋಣಗಾಂವ ವಾಡಿ, 9.30ಕ್ಕೆ ಡೋಣಗಾಂವ(ಎಂ), 10.30ಕ್ಕೆ ರಂಡ್ಯಾಳ, 11.15ಕ್ಕೆ ಹಕ್ಯಾಳ, 12.15ಕ್ಕೆ ಖತಗಾಂವ, 1ಕ್ಕೆ ಮದನೂರ, 2ಕ್ಕೆ ಕಮಲನಗರ, 4ಕ್ಕೆ ಮುರುಗ(ಕೆ), 4.30ಕ್ಕೆ ಬಾಳೂರ ಹಾಗೂ ಡಿ.29ರಂದು ಬೆಳಗ್ಗೆ 9ಕ್ಕೆ ಕೊಟಗ್ಯಾಳ, 10ಕ್ಕೆ ರಾಂಪೂರ, 11ಕ್ಕೆ ಚಾಂಡೇಶ್ವರ, 12ಕ್ಕೆ ಹುಲಸೂರ, ಮಧ್ಯಾಹ್ನ 1ಕ್ಕೆ ಕಾಳಗಾಪೂರ, 2ಕ್ಕೆ ಸೋನಾಳವಾಡಿ, 3.15ಕ್ಕೆ ಸೋನಾಳ, 4ಕ್ಕೆ ಹೊರಂಡಿ ಹಾಗೂ 4.30ಕ್ಕೆ ಡಿಗ್ಗಿ ಗ್ರಾಮದಲ್ಲಿ ಸಂಚರಿಸುವರು.

ಈ ವೇಳೆ ಶಾಸಕರು ಶಾಲೆ, ಅಂಗನವಾಡಿ, ಸರ್ಕಾರಿ ಆಸ್ಪತ್ರೆ, ಪಶು ಚಿಕಿತ್ಸಾಲಯ, ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಿಗೆ ಭೇಟಿ, ರಸ್ತೆ, ಚರಂಡಿ, ಕುಡಿಯುವ ನೀರು, ವಿದ್ಯುತ್, ಸ್ವಚ್ಛತೆ, ಶಾಲೆಗಳಲ್ಲಿ ಬಿಸಿಯೂಟ, ಅಂಗನವಾಡಿಯಲ್ಲಿ ಊಟದ ವ್ಯವಸ್ಥೆ ಹಾಗೂ ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸುವರು. ವಿವಿಧ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ಮತ್ತು ಪರಿಶೀಲನೆ ನಡೆಸಲಾಗುತ್ತದೆ.

ಶಾಸಕರೊಂದಿಗೆ ತಾಲ್ಲೂಕು ಮಟ್ಟದ ವಿವಿಧ ಅಧಿಕಾರಿಗಳು, ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿ ಆಗಮಿಸಲಿದ್ದು, ವೃದ್ಧಾಪ್ಯ ವೇತನ, ವಿಧವಾ ವೇತನ, ಪಡಿತರ ಸಮಸ್ಯೆ, ವಿದ್ಯುತ್, ನೀರು ಸರಬರಾಜು, ರೈತರ ಪಹಣಿ ತಿದ್ದುಪಡಿ, ಸರ್ವೆ ಸಮಸ್ಯೆ, ರೈತರ ಬೆಳೆ ಹಾನಿ ಪರಿಹಾರ, ಫಸಲ್ ವಿಮೆ ಪರಿಹಾರ, ವಿಕಲಚೇತನರ ದೂರುಗಳು ಸೇರಿದಂತೆ ಸಾರ್ವಜನಿಕರ ವಿವಿಧ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕ್ರಮಗಳನ್ನು ಸೂಚಿಸಲಾಗುತ್ತದೆ. ಗ್ರಾಮದಲ್ಲಿ ಆಗಬೇಕಿರುವ ಅಭಿವೃದ್ಧಿ ಕೆಲಸಗಳನ್ನು ಪಟ್ಟಿ ಮಾಡಿ ಲಿಖಿತವಾಗಿ ನೀಡಬೇಕು. ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಗ್ರಾಮ ಸಂಚಾರ ಕಾರ್ಯಕ್ರಮದ ಸದುಪಯೋಗ ಪಡೆಯಬೇಕೆಂದು ಶಾಸಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಅರ್ಹತೆಯಿಲ್ಲದವರ ಮತದಾರರ ಪಟ್ಟಿ ಸೇರ್ಪಡೆ
# ಕಾಂಗ್ರೆಸ್ ಕಾರ್ಯಕರ್ತರಿಂದ ಗೋಲಮಾಲ್ ಆರೋಪ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಇಳಕಲ್ಲ ತಾಲೂಕಿನ ಮುರಡಿ ಗ್ರಾಮದ ಚುನಾವಣೆ ಮತದಾರರ ಪಟ್ಟಿಯಲ್ಲಿ ಮತದಾನ ಮಾಡಲು ಅರ್ಹತೆಯಿಲ್ಲದವರ ಹೆಸರು ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ ಎಂದು ತಾಪಂ ಮಾಜಿ ಸದಸ್ಯ, ಬಿಜೆಪಿ ಮುಖಂಡ ಮಂಜುನಾಥ ಗೌಡರ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಈ ಗೋಲಮಾಲ್‌ನಲ್ಲಿ ಭಾಗಿಯಾಗಿದ್ದಾರೆ. ಇದರಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಪುತ್ರನ ಪಾತ್ರ ಪ್ರಮುಖವಾಗಿದೆ. 18 ವರ್ಷ ವಯಸ್ಸು ಪೂರ್ಣಗೊಳ್ಳದ ಯುವಕರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸುವ ಮೂಲಕ ವಂಚನೆ ಮಾಡುತ್ತಿದ್ದಾರೆ ಎಂದರು.

ಮುಂಬರುವ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತಿದೆ. ಈ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಈ ರೀತಿ ಅಕ್ರಮ ಎಸಗುತ್ತಿದ್ದಾರೆ. ದೆಹಲಿಯಲ್ಲಿ ರಾಹುಲ್‌ಗಾಂಧಿ ವೋಟ್ ಚೋರಿ ಅಂತ ಆರೋಪ ಮಾಡುತ್ತಿದ್ದರೆ, ಇಲ್ಲಿ ಕಾಂಗ್ರೆಸ್ ಕಾರ್ಯಕರ್ತರೇ ವೋಟ್ ಚೋರಿ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು. ಈಗಾಗಲೇ ಜಿಲ್ಲಾಧಿಕಾರಿ, ತಾಲೂಕು ದಂಡಾಧಿಕಾರಿಗಳು ಹಾಗೂ ಚುನಾವಣೆ ಆಯೋಗಕ್ಕೆ ದೂರು ನೀಡಿದ್ದು, ದೂರು ನೀಡಿ ತಿಂಗಳಾದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದ ಮಂಜುನಾಥ ಗೌಡರ, ಈ ಅಕ್ರಮದ ಕೆಲಸಕ್ಕೆ ಸಾಥ್ ನೀಡುತ್ತಿರುವ ಅಧಿಕಾರಿಗಳ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು. ನ್ಯಾಯ ಸಮ್ಮತ ಚುನಾವಣೆ ನಡೆಸಲು ಮುಂದಾಗಬೇಕು. ಇಲ್ಲವಾದಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು. ಗಣೇಶ ಕೋಮನೂರ, ಮುತ್ತಣ್ಣಗೌಡ ಗೌಡರ, ದುರ್ಗಪ್ಪ ವಡ್ಡರ, ಹುಲ್ಲಪ್ಪ ತೇಲಗರ ಇದ್ದರು.




ಭಾಲ್ಕಿ :ಪಟ್ಟಣದ ಲೆಕ್ಚರರ್ ಕಾಲೋನಿಯಲ್ಲಿರುವ ಓಂಲಕ್ಷ್ಮಿ ಸೌಹಾರ್ದ ಬ್ಯಾಂಕ್‌ನಲ್ಲಿ 2026ನೇ ಸಾಲಿನ ಕ್ಯಾಲೆಂಡರ್ ಹಿರಿಯ ಪತ್ರಕರ್ತ ಅಶೋಕ ರಾಜೋಳೆ ಬಿಡುಗಡೆಗೊಳಿಸಿದರು. ಓಂಲಕ್ಷ್ಮಿ ಬ್ಯಾಂಕ್ ಅಧ್ಯಕ್ಷ ಲಕ್ಷ್ಮಿ ಕನಶೆಟ್ಟೆ ,ಉಪಾಧ್ಯಕ್ಷ ಓಂಕಾರ ಕನಶೆಟ್ಟೆ ಇದ್ದರು.

# ಶಹೀನಶಾವಲಿ ದರ್ಗಾ ಶರೀಫ ಉರುಸು



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟ:**

ಹಳೇ ನಗರದ ಹಜರತ ಶಹೀನಶಾವಲಿ ದರ್ಗಾ ಶರೀಫ, ಇವರ 244ನೇ ಉರುಸು ಶರೀಫ ಕಾರ್ಯಕ್ರಮಗಳು ದಿ.3 ರಿಂದ ಮೂರು ದಿನಗಳ ಕಾಲ ನಡೆಯಲಿವೆ.ಗಂಧವು 03 ರಂದು (13 ರಜ್ಜಬ 1447 ಹಿಜರಿ) ದಿವಸ ರಾತ್ರಿ 8.00 ಘಂಟೆಗೆ ಲೋಕಪ್ರಿಯಾ ಬ್ಯಾಂಡ್ ಆರ್ಕೆಸ್ಟ್ರಾ, ಬೆಳಗಾವಿ ಇವರಿಂದ ಅತಿ ವಿಜೃಂಭಣೆಯಿಂದ ಮೆರವಣಿಗೆಯನ್ನು ಸೆಕ್ಟರ

ನಂ.33, ಪ್ಲಾಟ ನಂ.36, ಮುಜಾವರ ಕಾಂಪ್ಲೆಕ್ಸ್ ದಿಂದ ಹೊರಡುವ ರಸ್ತೆ RTO ಮತ್ತು ಪೊಲೀಸ್ ಪ್ಯಾಲೇಸ್ ರಸ್ತೆಯ ಮಾರ್ಗದಿಂದ ಬಾಗಲಕೋಟ ಹಳೇ ಪೋಸ್ಟ್ ಹಾಗೂ ಪಂಖಾ ಮಸಜಿದ್ ರಸ್ತೆಯ ಮೂಲಕ ಹಾಯ್ದು ಹಜರತ ಶಹೀನಶಾವಲಿ ದರ್ಗಾ ಶರೀಫ ಆವರಣ ತಲುಪಲಿದೆ.

ದಿ.04 ರಂದು (14 ರಜ್ಜಬ 1447 ಹಿಜರಿ)ದಿವಸ ಉರುಸು ಜರಗುವದು. ಅದೇ ದಿವಸ ಮುಂಜಾನೆ 11-00 ಅನ್ನ ಸಂತರ್ಪಣೆ ನಡೆಯಲಿದೆ.

ದಿ. 05 ರಂದು (15 ರಜ್ಜಬ 1447 ಹಿಜರಿ) ಜಿಯಾರತ ಜರಗುವದು.

ಕಾರಣ ಭಕ್ತರು ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಿಗೆ ಭಾಗವಹಿಸಿ ವಲಿ ಅಲ್ಲಾರವರ ಆಶೀರ್ವಾದ ಪಡೆಯಬೇಕೆಂದು ವ್ಯವಸ್ಥಾಪಕರಾದ ರಸೂಲಸಾಬ ಇ. ಮುಜಾವರ, ಸೈಯ್ಯದ ಎ. ಮುಜಾವರ, ಇಮಾಮಸಾಬ ಎ. ಮುಜಾವರ,ದಾದಾಭಾಯಿ ಎಸ್. ಮುಜಾವರ,ಮಹಮ್ಮದ ಎಚ್. ಮುಜಾವರ,

ಸೈಯ್ಯದರಸೂಲ ಎನ್. ಮುಜಾವರ,ಸಲೀಮ ಮುಜಾವರ ಅವರುಗಳು ಪ್ರಕಟನೆಯೊಂದರಲ್ಲಿ ಕೋರಿದ್ದಾರೆ.

# ಹೆಚ್.ಎಂ.ರೇವಣ್ಣ ಅವರ ಬೀದರ ಜಿಲ್ಲಾ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ ಅವರು ಡಿಸೆಂಬರ್.29 ಮತ್ತು 30 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಅವರು ಡಿಸೆಂಬರ್.29 ರಂದು ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಬೀದರ್ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಬೀದರ್ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯಾಗಾರದ ಸಿದ್ಧತೆ ಬಗ್ಗೆ ಸ್ಥಳ ವೀಕ್ಷಣೆ ಮತ್ತು ಚರ್ಚೆ ನಡೆಸಲಿದ್ದಾರೆ. ನಂತರ ಬೀದರ ಸರ್ಕಾರಿ ವಸತಿ ಗೃಹದಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಡಿಸೆಂಬರ್.30 ರಂದು ಬೆಳಿಗ್ಗೆ 11 ಗಂಟೆಗೆ ಬೀದರ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಬೀದರ್ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಾರ್ಯಾಗಾರ ಮತ್ತು ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ನಂತರ ಸಂಜೆ 4 ಗಂಟೆಗೆ ಬಿದರನಿಂದ ನಿರ್ಗಮಿಸಲಿದ್ದಾರೆಂದು ಸರ್ಕಾರದ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾರದ ಮಲ್ಲಪ್ಪ ಉಚಿತ ಪ್ರಸಾದ ನಿಲಯದ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಿವಿವಿ ಸಂಘದಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಹಿಂದಿನಿಂದಲೂ ವಾರದ ಮಲ್ಲಪ್ಪ ವಸತಿ ನಿಲಯದಲ್ಲಿ ಉಚಿತ ಪ್ರಸಾದ ವ್ಯವಸ್ಥೆ ನಡೆ-ಯುತ್ತಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಹೇಳಿದರು

ಬಿವಿವಿ ಸಂಘದ ಆವರಣದಲ್ಲಿರುವ ರಾಣಿಚೆನ್ನಮ್ಮ ವಸತಿ ನಿಲಯದ ಪಕ್ಕದಲ್ಲಿ ನೂತನವಾಗಿ ನಿರ್ಮಿಸಿರುವ ವಿದ್ಯಾರ್ಥಿನಿಯರ ವಸತಿ ನಿಲಯ ಹಾಗೂ ವಾರದ ಮಲ್ಲಪ್ಪ ಉಚಿತ ಪ್ರಸಾದ ನಿಲಯದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಿವಿವಿ ಸಂಘ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಉತ್ತಮ ಅಹಾರ, ವಸತಿ ಜೊತೆ ಭದ್ರತೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು.5 ಮಹಡಿಯ 151 ಕೊಠಡಿಗಳುಳ್ಳ ಅತ್ಯಾಧುನಿಕ ಸೌಲಭ್ಯವುಳ್ಳ ವಸತಿ ನಿಲಯ ಇದಾಗಿದ್ದು ವಿದ್ಯಾರ್ಥಿನಿಯರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದ ಅವರು, ಮೊದಲಿನಿಂದಲೂ ವಾರದ ಮಲ್ಲಪ್ಪ ವಸತಿ ನಿಲಯದಲ್ಲಿ ಬಡ ಮಕ್ಕಳಿಗಾಗಿಯೇ ಉಚಿತ ಪ್ರಸಾದ ವ್ಯವಸ್ಥೆಯನ್ನು ನಡೆಸುತ್ತಾ ಬಂದಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಿರುವುದರಿಂದ ಆಧುನಿಕವಾಗಿ ಅಚ್ಚುಕಟ್ಟಾದ 3 ಮಹಡಿಯ ಪ್ರಸಾದ ನಿಲಯವನ್ನು ನಿರ್ಮಿಸಲಾಗಿದೆ. ಇದರಿಂದ ಬಡಮಕ್ಕಳಿಗೆ ಅನುಕೂಲವಾಗಲಿದೆ ಎಂದರು. ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಹಾಸ್ಟೆಲ್ ಕಮೀಟಿ ಕಾರ್ಯಾಧ್ಯಕ್ಷ ಕುಮಾರಸ್ವಾಮಿ ಹಿರೇಮಠ ಚಿತ್ತರಗಿ, ಉಚಿತ ಪ್ರಸಾದ ನಿಲಯದ ಕಾರ್ಯಾಧ್ಯಕ್ಷ ಸಂತೋಷ ಜಕಾತಿ, ಬಿಲ್ಡಿಂಗ್ ಕಮೀಟಿ ಕಾರ್ಯಾಧ್ಯಕ್ಷ ಮಹೇಶ ಕಕರಡ್ಡಿ ಸೇರಿದಂತೆ ಸಂಘದ ಎಲ್ಲ ಸದಸ್ಯರು, ಆಡಳಿತಾಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಔಷಧ ಪೂರೈಕೆ ಸರಪಳಿ: ದಕ್ಷತೆ ಹೆಚ್ಚಳ

TATA MOTORS COMMERCIAL VEHICLES | Better Always

**ಬೆಂಗಳೂರು:** ನಾಲ್ಕು ದಶಕಗಳಿಗೂ ಹೆಚ್ಚು ಕಾಲ, ರೀಮಾ ಟ್ರಾನ್ಸ್‌ಪೋರ್ಟ್ ಪ್ರೈ. ಲಿಮಿಟೆಡ್ (ಖಖಿಕಐ) ರಸ್ತೆ ಲಾಜಿಸ್ಟಿಕ್ಸ್‌ನಲ್ಲಿ ವಿಶ್ವಾಸಾರ್ಹ ಹೆಸರಾಗಿದೆ ಮತ್ತು ಇದು ಭಾರತದ ತಾಪಮಾನ–ನಿಯಂತ್ರಿತ ಲಾಜಿಸ್ಟಿಕ್ಸ್ ಪರಿಸರ ವ್ಯವಸ್ಥೆಯಲ್ಲಿ ಪ್ರಮುಖ ಪಾಲುದಾರನಾಗಿ ಸೇವೆ ಸಲ್ಲಿಸಿದೆ, ಇದು ಔಷಧೀಯ ವಲಯವನ್ನು ವಿಶ್ವಾಸಾರ್ಹ, ಅನುಸರಣೆ ಮತ್ತು ತಂತ್ರಜ್ಞಾನ–ಚಾಲಿತ ಸೇವೆಗಳೊಂದಿಗೆ ಬೆಂಬಲಿಸುತ್ತದೆ. 175 ವಾಹನಗಳ ಸಮೂಹದೊಂದಿಗೆ, ಖಖಿಕಐ ಪಶ್ಚಿಮ, ಮಧ್ಯ ಮತ್ತು ದಕ್ಷಿಣ ಭಾರತದಾದ್ಯಂತ ಕಾರ್ಯನಿರ್ವಹಿಸುತ್ತದೆ, ಪ್ರಮುಖ ದೇಶೀಯ ಮತ್ತು ಬಹುರಾಷ್ಟ್ರೀಯ ಔಷಧೀಯ ಕಂಪನಿಗಳು ಹಾಗೂ ಈಒಅಉ, ಮಿಠಾಯಿ ಮತ್ತು ಎಂಜಿನಿಯರಿಂಗ್ ಸರಕುಗಳ ಗ್ರಾಹಕರಿಗೆ ಸೇವೆ ಸಲ್ಲಿಸುತ್ತದೆ.

## ಪ್ರಥಮ ಸ್ಥಾನ, ಚಿನ್ನದ ಪದಕ

**ಕಾರಟಗಿ:** ಕಡು ಬಡತನದ ನಡುವೆಯೂ ಓದುವ ಛಲವನ್ನು ಮುನ್ನಡೆಸಿದ ಕಾರ್ಮಿಕನ ಮಗಳು ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಗಳಿಸುವ ಮೂಲಕ ಚಿನ್ನದ ಪದಕದ ತನ್ನ ಮುಡಿಗೇರಿಸಿಕೊಂಡಿದ್ದಾಳೆ.

ಪಟ್ಟಣದ ಕಸ್ತೂರಿ ಬಾ ಮಹಿಳಾ ಪದವಿ ಮಹಾವಿದ್ಯಾಲಯದ ಬಿಕಾಂ ವಿದ್ಯಾರ್ಥಿನಿ ಕೆ.ರೇಖಾ ಪರಶುರಾಮ, ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಿಂದ ನಡೆಸಿದ 2024–25ನೇ ಸಾಲಿನ ಅಂತಿಮ ಬಿಕಾಂ ಪರೀಕ್ಷೆಯಲ್ಲಿ ಒಟ್ಟು ಶೇ. 95.06ರಷ್ಟು ಅಂಕ ಗಳಿಸುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಗಳಿಸಿ ತಾಲೂಕಿಗೆ ಕೀರ್ತಿ ತಂದಿದ್ದಾಳೆ.

ವಿದ್ಯಾರ್ಥಿನಿಯ ತಂದೆ ಪರಶುರಾಮ ಕೂಲಿಕಾರ್ಮಿಕನಾಗಿದ್ದು, ಬಡ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮೂವರು ಹೆಣ್ಣುಮಕ್ಕಳನ್ನು ಓದಿಸುತ್ತ ದೈನಂದಿನ ಬದುಕು ಕಟ್ಟಿಕೊಳ್ಳುವ ಸಂಕಷ್ಟದಲ್ಲಿದ್ದಾರೆ. ಇತ್ತ ವಿದ್ಯಾರ್ಥಿನಿ, ಬಡತನದ ಸವಾಲುಗಳ ನಡುವೆಯೇ ನಿರಂತರ ಅಧ್ಯಯನ, ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಕಾಲೇಜ್‌ನಲ್ಲಿ ಮೆಚ್ಚಿನ ವಿದ್ಯಾರ್ಥಿಯಾಗಿದ್ದುಕೊಂಡು, ಪರಿಶ್ರಮದ ಗುರಿಯನ್ನು ತಲುಪಿದ್ದಾಳೆ.



ಬಡತನದ ಮಧ್ಯೆ ನಿರಂತರ ಅಧ್ಯಯನ, ಉಪನ್ಯಾಸಕರ ಹಾಗೂ ಮನೆಯವರ ಮಾರ್ಗದರ್ಶನದಿಂದ ಗುರಿ ಸಾಧಿಸಲು ಸಾಧ್ಯವಾಗಿದೆ.
–ಕೆ.ರೇಖಾ ಪರಶುರಾಮ

## ಭಕ್ತಿ ಗೀತೆ: ಜಿಲ್ಲಾಮಟ್ಟಕ್ಕೆ ಆಯ್ಕೆ



**ಕೊಪ್ಪಳ:** ಇಲ್ಲಿನ ಭಾಗ್ಯನಗರದ ಪಯೋನಿಯರ್ ಪಬ್ಲಿಕ್ ಸ್ಕೂಲ್ 6 ನೇ ತರಗತಿಯ ವಿದ್ಯಾರ್ಥಿನಿ ಅಕ್ಷರ ಎಂ. ಗೊಂಡಬಾಳ ಅವರು ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದ ತಾಲೂಕ ಮಟ್ಟದ 5 ರಿಂದ 7 ನೇ ತರಗತಿಯ ಭಕ್ತಿ ಗೀತೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ನಗರದ ಬಾಲಿಕೆಯರ ಸರಕಾರಿ ಪ್ರೌಢ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಬಾಲಿಕೆಯರ ಸರಕಾರಿ ಪ್ರೌಢ ಶಾಕೆ ಆಶ್ರಯದಲ್ಲಿ ಇಂದು ಜರುಗಿದ ತಾಲೂಕ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಸೇರಿ ಅನೇಕ ಅಧಿಕಾರಿಗಳು, ಶಿಕ್ಷಕರು ಬಹುಮಾನವನ್ನು ವಿತರಿಸಿದರು. ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ವಿಜೇತ ಶಾಲೆಯ ವಿದ್ಯಾರ್ಥಿನಿ ಅಕ್ಷರ ಳನ್ನು ಶಾಲಾ ಆಡಳಿತ ಮಂಡಳಿ, ಆಡಳಿತಾಧಿಕಾರಿ ಉಮೇಶ ಕಿಲಾರಿ, ಮುಖ್ಯೋಪಾಧ್ಯಾಯ ಅಶ್ವಥ್, ಶಿಕ್ಷಕರು, ಸಂಗೀತ ಗುರು ಶ್ರೀಶೈಲ ಬಡಿಗೇರ ಅಭಿನಂದಿಸಿದ್ದಾರೆ.

## ಪೋಲಿಯೊ ಲಸಿಕೆ ಅಭಿಯಾನ



**ಕುಕನೂರು:** ಡಿಸೆಂಬರ್ 21ರಂದು ಅಂಗನವಾಡಿ ಕೇಂದ್ರ, ಬಸ್ ನಿಲ್ದಾಣ, ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಹಾಕಲಾಯಿತು. ಇಂದು ಪೋಲಿಯೋ ಲಸಿಕೆ ಅಭಿಯಾನಕ್ಕೆ ಕೊನೆಯ ದಿನವಾಗಿದ್ದರಿಂದ ಅಂಗನವಾಡಿ ಬೂತ್‌ಗಳಿಗೆ ಬಂದು ಲಸಿಕೆ ಪಡೆಯದೆ ಇರುವ ಮಕ್ಕಳಿಗೆ ಇಂದು 15ನೇ ವಾರ್ಡ್ ಇಂದಿರಾ ನಗರದಲ್ಲಿ ಮನೆ ಮನೆಗೆ ಬಂದು ಅಂಗನವಾಡಿ ಶಿಕ್ಷಕಿ ಮತ್ತು ಆಶಾ ಕಾರ್ಯಕರ್ತೆ ಲಸಿಕೆಯನ್ನು ಹಾಕಿದರು. ಲಸಿಕೆ ಹಾಕಿ ಮಾತನಾಡಿದ ಅಂಗನವಾಡಿ ಶಿಕ್ಷಕಿಂ–ಯಾದ ಗಿರಿಜಾ ಪೋಷಕರು ಐದು ವರ್ಷದ ಒಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆನ್ನು ಹಾಕಿಸುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ ಎಂದರು. ತದನಂತರ ಮಾತನಾಡಿದ ಆಶಾ ಕಾರ್ಯಕರ್ತೆ ನೇತ್ರಾವತಿ ಪೋಲಿಯೋ ಎಂಬುದು ಒಂದು ಅಪಾಯಕಾರಿ ವೈರಸ್ ಇದು ಅಶುದ್ಧವಾದ ಗಾಳಿ ,ನೀರು, ಕಲುಷಿತವಾದ ಆಹಾರದಿಂದ ಬರುವ ಸಾಧ್ಯತೆ ಹೆಚ್ಚು ಆದ್ದರಿಂದ 5 ವರ್ಷ ಒಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಿ ಹಾಗೆ ಅಕ್ಕ ಪಕ್ಕದ ಮನೆಗಳಲ್ಲಿ ಮಕ್ಕಳಿದ್ದರೆ ತಿಳಿಸಿ ಮಕ್ಕಳ ಎಡ ಕಿರು ಬೆರಳಿಗೆ ಶಾಯಿಯನ್ನು ಹಾಕಿಸಿಕೊಳ್ಳಿರಿ ಎಂದರು.

# ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ







ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ತಿನ ವತಿಯಿಂದ ಡಿಸೆಂಬರ್ 28, 29 ಮತ್ತು 30 ರಂದು ಮೂರು ದಿನಗಳ ಕಾಲ ಶರಣ ಸಾಹಿತಿ, ಚಿಂತಕ ವಿಶ್ವಾರಾಧ್ಯ ಸತ್ಯಂಪೇಟೆ ಅವರ ಸಮ್ಮೇಳನದ ಸರ್ವಾಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನವನ್ನು ಗಿರಿಗಳ ನಾಡು ಯಾದಗಿರಿಯ ಜಿಲ್ಲಾ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ರವೀಂದ್ರ ಶಾಬಾದಿ ಹಾಗೂ ಪ್ರಧಾನ ಕಾರ್ಯದರ್ಶಿ ಡಾ. ಶಿವರಂಜನ ಸತ್ಯಂಪೇಟೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ಜಿಲ್ಲಾಡಳಿತ ಯಾದಗಿರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇಸ್ರೋ, ಭಾರತ ಸರ್ಕಾರ ಬೆಂಗಳೂರು ಜವಾಹರಲಾಲ್ ನೆಹರೂ ತಾರಾಲಯ, ಭಾರತ ವಾಯುಪಡೆ. ಕರ್ನಾಟಕ ವಿಶ್ವೇಶ್ವರಯ್ಯ ಕೈಗಾರಿಕೆ ಹಾಗೂ ತಾಂತ್ರಿಕ ಮ್ಯೂಸಿಯಂ, ಮೊಬೈಲ್ ಪ್ಲಾನಿಟೋರಿಯಂ, ಕೆಸ್ಟೆಪ್ಸ್, ನ್ಯಾಷನಲ್ ಏರೋನಾಟಿಕ್ಸ್ ಲ್ಯಾಬೋರೋಟರಿ, ಡಿ.ಆರ್.ಡಿ.ಓ, ಬೆಂಗಳೂರು ಮಾನವ ಬಂಧುತ್ವ ವೇದಿಕೆ, ಕರ್ನಾಟಕ ರಾಜ್ಯ, ಯಾದಗಿರಿ ಜಿಲ್ಲಾ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಸಮ್ಮೇಳನವನ್ನು ಆಯೋಜಿಸಲಾಗಿದೆ.

ಹೆಸರಾಂತ ವಿಜ್ಞಾನಿ ಇಸ್ರೋದ ಮಾಜಿ ಅಧ್ಯಕ್ಷರಾದ ಡಾ.ಎ.ಎಸ್.ಕಿರಣ್ ಕುಮಾರ್ ಹಾಗೂ ಜಸ್ಟೀಸ್ ನಾಗಮೋಹನ್ ದಾಸ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಪರಿಷತ್ತು ಆರಂಭವಾಗಿ ಐದು ವರ್ಷಗಳು ತುಂಬಿದ್ದು ಈಗಾಗಲೇ ಐವತ್ತು ಸಾವಿರಕ್ಕೂ ಹೆಚ್ಚಿನ ಸದಸ್ಯರನ್ನು ಹೊಂದಿರುವ ಸಂಸ್ಥೆ ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸತ್ತ ಬಂದಿದೆ. ನಾಯಕತ್ವ ಕಾರ್ಯಾಗಾರ, ನಾನೂ ವಿಜ್ಞಾನಿ ಶಿಬಿರ, ವೃತ್ತಿ ನಿರತ ನೌಕರರಿಗೆ ವೃತ್ತಿ ಮಾರ್ಗದರ್ಶನ, ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಶ್ರಮಿಕ ವರ್ಗದವರಿಗೆ ಮೇ 1ರಂದು ಕಾಯಕರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಪ್ರತಿ ವರ್ಷ ಡಿಸೆಂಬರ್ ನಲ್ಲಿ ಬರುವ ಕುವೆಂಪು ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದ ವೈಜ್ಞಾನಿಕ ಸಮ್ಮೇಳನವನ್ನು ಆಯೋಜಿಸಲಾಗುತ್ತಿದ್ದು ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿ ಸಾಧಕರನ್ನು ಅಭಿನಂದಿಸಲಾಗುತ್ತಿದೆ. ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಇಸ್ರೊ, ಡಿ.ಆರ್.ಡಿ.ಓ., ನೆಹರೂ ತಾರಾಲಯ ಹಾಗೂ ವಿವಿಧ ವಿಜ್ಞಾನ ಸಂಸ್ಥೆಗಳು ವಿಜ್ಞಾನ ವಸ್ತು ಪ್ರದರ್ಶನ, ವಿವಿಧ ವಿಷಯಗಳ ಕುರಿತು ವಿಚಾರಗೋಷ್ಠಿಗಳು, ಸಾಂಸ್ಕೃತಿಕ ವೈವಿಧ್ಯ, ನಾಟಕ ಪ್ರದರ್ಶನ ಆಯೋಜಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು, ಸಾರ್ವಜನಿಕರು ಭಾಗವಹಿಸುವ ಈ ಸಮ್ಮೇಳನದಲ್ಲಿ ಅನೇಕ ಸಚಿವರು, ಶಾಸಕರು, ವಿಜ್ಞಾನಿಗಳು ಅನೇಕ ಗಣ್ಯ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ.

**ಜೀವಮಾನ ಸಾಧಾನ ಪ್ರಶಸ್ತಿ ಪುರಸ್ಕೃತರು:** ಅಂಕೇಗೌಡ ಪುಸ್ತಕಮನೆ ಪಾಂಡವಪುರ, ರಾಜಣ್ಣನವರ್ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ಡಾ.ನಂದೀಶ್ ರಾಷ್ಟ್ರ ಪ್ರಶಸ್ತಿ ಪುರಸ್ಕೃತರು, ಎಸ್.ಸಿ.ಪಾಟೀಲ್.

**2025– ವಿಶಿಷ್ಠ ಸೇವಾ ಪ್ರಶಸ್ತಿ ಪುರಸ್ಕೃತರು:** ದಾನಿ ಬಾಬುರಾವ್ ಸಂಘಟನೆ, ವಿ.ಟಿ.ಸ್ವಾಮಿ ಸಾಗರ ಸಾಹಿತ್ಯ, ಸಿ.ಶಿವಲಿಂಗಯ್ಯ ಸಂಘಟನೆ, ಪುಷ್ಪಲತಾ ಪುಟ್ಟಸ್ವಾಮಿ ಸಂಘಟನೆ, ಮಹಾದೇವ್ ಎನ್ ಸಂಘಟನೆ, ಗೋಪಾಲಕೃಷ್ಣ ವೈಜ್ಞಾನಿಕತೆ, ಶಾಂತಗೌಡ ಹೆಚ್.ಬಿ ಸಂಘಟನೆ, ಆರ್. ಹೆಚ್.ಎಂ.ಚನ್ನಬಸವಸ್ವಾಮಿ ಶೈಕ್ಷಣಿಕ ಕ್ಷೇತ್ರ.

## ಬದ್ರಿ'ಸ್ ಅಕಾಡೆಮಿ: ಎಜುಕೇಶನ್ ಎಕ್ಸ್ಪೋ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಾಗಲಗುಂಟೆಯ ಎಂಇ ಐ ಆಟದ ಮೈದಾನದಲ್ಲಿ ಬದ್ರಿ'ಸ್ ಅಕಾಡೆಮಿ ವತಿಯಿಂದ ಜನವರಿ 3 ಮತ್ತು 4ರಂದು ಎರಡು ದಿನಗಳ ಎಜುಕೇಶನ್ ಎಕ್ಸ್ಪೋ ಹಮ್ಮಿಕೊಳ್ಳಲಾಗಿದೆ'ಎಂದು ಬದ್ರಿ'ಸ್ ಅಕಾಡೆಮಿಯ ಅಧ್ಯಕ್ಷ ಬದ್ರಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜನವರಿ ಮೂರರಂದು ಪರ್ವ ಪ್ರವರ್ತನಂ ಮತ್ತು ನಾಲ್ಕರಂದು ಪರ್ವ ಭವಿಷ್ಯದಾರ ಎಂಬ ಹೆಸರಿನಲ್ಲಿ ಎರಡು ದಿನಗಳು ನಡೆಯಲಿದೆ.

ನಮ್ಮ ಉದ್ದೇಶ ಪ್ರತಿ ಮಗುವಿಗೂ ಕೂಡ ಶಿಕ್ಷಣ ಸರಿಯಾಗಿ ಸಿಗಬೇಕು. ಏಕೆಂದರೆ ಪ್ರತಿ ಮಗುವಿನ ಜ್ಞಾನ ಮತ್ತು ಬುದ್ಧಿಶಕ್ತಿ ಬೇರೆ ಬೇರೆಯಾಗಿರುತ್ತದೆ. ಅಂತಹ ಮಕ್ಕಳಿಗೆ ಪಾಠ ಕಲಿಸುವುದನ್ನು ಹೇಗೆ ಎಂಬುದನ್ನು ಹೇಳಿಕೊಡಲಾಗುತ್ತದೆ. ಪೋಷಕರಿಗೆ ತಮ್ಮ ಮಕ್ಕಳು ಯಾವ ಶಾಲೆ, ಕಾಲೇಜು ಚೆನ್ನಾಗಿದೆ, ಹತ್ತನೇ ತರಗತಿ



ಮತ್ತು ಪಿಯುಸಿ ಮುಗಿದ ಮೇಲೆ ಏನು ಮಾಡಬೇಕು? ಇನ್ನು ಬೇರೆ ಚಟುವಟಿಕೆ ಏನಿದೆ? ಎಂಬ ಪ್ರಶ್ನೆಗೆ ಈ ಎಕ್ಸ್ಪೋದಲ್ಲಿ ಉತ್ತರ ಸಿಗಲಿದೆ ಎಂದರು.

ಎಕ್ಸ್ಪೋದಲ್ಲಿ 30ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಭಾಗವಹಿಸಲಿದ್ದು ಇದರ ಉದ್ಘಾಟನೆಯನ್ನು ನ್ಯಾಯಾಧೀಶರು, ಸೈನಿಕರು, ರೈತರು, ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳು ಹಾಗೂ ಶಾಸಕರು ಉದ್ಘಾಟಿಸಲಿದ್ದಾರೆ. ಹೈಕೋರ್ಟಿನ ನ್ಯಾಯಾಧೀಶರಾದ ಎಚ್.ಪಿ. ಸಂದೇಶ್, ನಿವೃತ್ತ ನ್ಯಾಯಾಧೀಶ ಬಿ.ಎ. ಪಾಟೀಲ್ ಮತ್ತು ಶಾಸಕ ಎಸ್. ಮುನಿರಾಜು ಭಾಗವಹಿಸಲಿದ್ದಾರೆ.

## ಸಾಮೂಹಿಕ ಸತ್ಯನಾರಾಯಣ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲೂಕಿನ ಬೆಟಗೇರಿ ವಲಯದಲ್ಲಿ ಇಂದು ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧರ್ಮಿಕ ಸಭಾ ಕರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ಶ್ರೀ ಷ.ಬ್ರ. 108 ಸಿದ್ದೇಶ್ವರ ಶಿವಾಚರ್ಯ ಮಹಾಸ್ವಾಮಿಗಳು ಅಳವಂಡಿ ಹಾಗೂ ಶ್ರೀ ಅಭಿನವ ಶ್ರೀಕಂಠ ಮಹಾಸ್ವಾಮಿಗಳು ಗಿಣಿಗೇರ ಇವರುಗಳ ದಿವ್ಯ ಸಾನಿಧ್ಯದಲ್ಲಿ ಕರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದ ರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಪ್ಪಳ ಜಿಲ್ಲೆಯ ಜಿಲ್ಲಾ ನರ್ದೇಶಕ ಪ್ರಕಾಶ್ ರಾವ ಉದ್ಘಾಟಿಸಿದರು. ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ಸಾಮೂಹಿಕವಾಗಿ ಮಾಡುವುದು ಹಳ್ಳಿ ಹಳ್ಳಿಗಳಲ್ಲಿನ ಜನಗಳಿಗೆ ಮತ್ತು ಜಾನುವಾರುಗಳಿಗೆ ಪ್ರಾಣಿಪಕ್ಷಿಗಳಿಗೆ ಒಳ್ಳೆಯದಾಗಲಿ ಎಂದು ಮಾಡುತ್ತಾರೆ.

ಪೂಜ್ಯರು ಅಮ್ಮನವರ ಆಶಯದಂತೆ ಇಂತಹ



ಧರ್ಮಿಕ ಕರ್ಯಕ್ರಮಗಳು ಹಳ್ಳಿ ಹಳ್ಳಿಗಳಲ್ಲಿ ದೇವರು ಪಠನೆ ಧ್ಯಾನ ಪೂಜೆ ಇಂತಹ ಕರ್ಯಗಳನ್ನು ಮಾಡುವುದರಿಂದ ಉತ್ತಮವಾಗಿದೆ ಎಂದು ತಿಳಿಸಿದರು. ಕರ್ಯಕ್ರಮದಲ್ಲಿ ಜಗದೀಶ್ ಕೆ ಹೆಚ್ ಯೋಜನಾಧಿಕಾರಿಗಳು ಶ್ರೀ ಕ್ಷೇತ್ರ ರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಸಜ್ಜನ್ ಮಾಜಿ ತಾಲ್ಲೂಕ್ ಪಂಚಾಯತಿ ಸದಸ್ಯರು. ಚಂದ್ರಶೇಖರ್ ನಿವೃತ್ತ ಸೈನಿಕರು. ಲಲಿತಮ್ಮ ಶರಣಪ್ಪ ಗ್ರಾಮ ಪಂಚಾಯತಿ ಉಪಾಧ್ಯಕ್ಷರು. ಅನ್ನದಾನ ಸ್ವಾಮಿ ಸಾಲಿಮಠ. ಲಿಂಗರಾಜ್ ಬಿ ಎಂ ಊರಿನ ಗಣ್ಯರು. ಮುಖಂಡರು ಹಾಗೂ ಪ್ರಗತಿ ಬಂದು ಸ್ವಸಹಾಯ ಸಂಘಗಳ ಸದಸ್ಯರು ಸೇವಾ ಪ್ರತಿನಿಧಿಗಳು ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿದ್ದರು.

## ಅಭಿವೃದ್ಧಿಗಾಗಿ ಸಚಿವರಲ್ಲಿ ಮನವಿ, ಸಹ ಮತದ ಭರವಸೆ: ಮಾಜಿ ಶಾಸಕ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲೂಕಿನ ಅಭಿವೃದ್ಧಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. ಹೆಚ್ಚು ಅನುದಾನ ನೀಡಬೇಕೆಂದು ಮಾಜಿ ಶಾಸಕ ಎಚ್ ಪಿ ಮಂಜುನಾಥ್ ರವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಬಿ. ಝೆಡ್ ಝಮೀರ್ ಅಹ್ಮದ್ ಖಾನ್ ಮನವಿ. ಸಲ್ಲಿಸಿದ್ದಾರೆ

ನಂತರ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸುದ್ದಿಗಾರರೊಂದಿಗೆ ಮಾತನಾಡಿ ತಾಲೂಕಿನ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಸಚಿವರಲ್ಲಿ ಗಮನಕ್ಕೆ ತಂದಿದ್ದೇನೆ ಶಬ್ಬೀರ್ ನಗರದ ಹಾಗೂ ರತ್ನಪುರಿ ರಸ್ತೆ ಅಭಿವೃದ್ಧಿ ಹಾಗೂ ತಾಲೂಕಿನ ಬಿಳಿಕೆರೆ ಕೆರೆ ಹತ್ತಿರ ನೂತನವಾಗಿ ನಿರ್ಮಿಸುತ್ತಿರುವ ಶಾದಿ ಮಹಲ್ ಕಟ್ಟಡಕ್ಕೆ ಅನುದಾನ ನೀಡಬೇಕೆಂದು ಒತ್ತಾಯಿಸಿದ್ದೇನೆ

ನಾನು ಶಾಸಕನಾಗಿದ್ದ ಅವಧಿಯಲ್ಲಿ . ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವಧಿಯಲ್ಲಿ ನಾನು



ಮನವಿ ಮುಖಾಂತರ. ನಗರದಲ್ಲಿ ಉತ್ತಮವಾದ ಶಾದಿ ಮಾಲ್ ಕಟ್ಟಡ ಆಗಬೇಕೆಂದು ಮನವಿ ಸಲ್ಲಿಸಿದ್ದೆ ಮನವಿ ಮೇರೆಗೆ ಮುಖ್ಯಮಂತ್ರಿಗಳು ಸಿದ್ದರಾಮಯ್ಯ ಸಾಹೇಬರು ಒಂದು ಕೋಟಿ ಅನುದಾನವನ್ನು ಶಾದಿ ಮಾಲ್ ಕಟ್ಟಡಕ್ಕೆ ನೀಡಿದರು ಉತ್ತಮವಾದ ಶಾದಿ ಮಾಲ್ ಕಟ್ಟಡಕ್ಕೆ ನಿರ್ಮಿಸಲು ಬಿಳಿಕೆರೆ ಭಾಗದಲ್ಲಿ ಒಂದು ನೂತನವಾಗಿ ಶಾದಿ ಮಾಲ್ ಉತ್ತಮಕಟ್ಟಡಕ್ಕೆ ಸಂಪೂರ್ಣ ಆಗಬೇಕು ನನ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ತಿಳಿಸಿದರು ಸಚಿವರು ಜಮೀರ್ ಅಹ್ಮದ್ ಖಾನ್. ರವರಿಂದ ಅನಾರೋಗ್ಯಕ್ಕೆ ಪಿಡಿತರಾಗಿದ್ದ ರೋಗಿಗೆ. ವೈಯಕ್ತಿಕವಾಗಿ ಸಹಾಯಧನ ನೀಡಿ . ಹಾಗೂ ಸರ್ಕಾರಿ ಸೌಲತ್ತು ಕೊಡಿಸುವುದರಲ್ಲಿ ನಾನು ಸಂಪೂರ್ಣವಾಗಿ ಸಹಕರಿಸುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರು ಎಚ್ ಪಿ .ಮಂಜುನಾಥ. ವಸ್ತು ಪ್ರದರ್ಶನದ ಅಧ್ಯಕ್ಷರಾದ ಅಯುಬ್ ಖಾನ್ ಮೈಸೂರು ಜಿಲ್ಲಾ ವಕ್ಫ ಬೋರ್ಡ್ ಸಲಾ ಸಮಿತಿ ಅಧ್ಯಕ್ಷ ಅಜೀಜ್ ಉಲ್ಲಾ ಅಜ್ಜು ಮತ್ತು ಮೈಸೂರು ಮಹಾನಗರ ಪಾಲಿಕಾ ಸದಸ್ಯರು ಸದಸ್ಯ ಸಮಿವುಲ್ ಅಜ್ಜು ರೆಜ್ವಾನ್ ಅಜ್ಜು ಬಿ ಝಡ್ ಗ್ರೂಪ್ ಹುಣಸೂರು ಅಧ್ಯಕ್ಷ ಯಾಸಿರ್ ಖಾನ್. ಯೂಥ್ ಕಾಂಗ್ರೆಸ್ ಅಧ್ಯಕ್ಷರಾದ ಮೊಹಮ್ಮದ್ ಶಾಹ್ ಫೈಸೆಲ್ ರಕ್ಷಾ ಸಮಿತಿ ಸದಸ್ಯರಾದ. ಹಾಗೂ ಇನ್ನಿತರ ಹಾಜರಿದ್ದರು.

# ಹೈಸ್ಕೂಲ್ ಗೆಳೆತನ ಮರುಕಳಿಸಿದ ಕ್ಷಣ

### ಬಾಲ್ಯದ ನೆನಪುಗಳನ್ನು ಜೀವಂತಗೊಳಿಸಿದ ಇಂದಿನ ಔತಣ ಕೂಟ...

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕಾಲವು ಎಷ್ಟೇ ದೂರ ಕರೆದೊಯ್ದರೂ, ಹೃದಯದ ಅಂಗಳದಲ್ಲಿ ಉಳಿಯುವ ಕೆಲವು ಸಂಬಂಧಗಳಿಗೆ ವಯಸ್ಸು, ದೂರ, ಹೊಣೆಗಾರಿಕೆಗಳು ಎಂದಿಗೂ ಅಡ್ಡಿಯಾಗುವುದಿಲ್ಲ ಎಂಬುದನ್ನು ಇಂದಿನ ಹೈಸ್ಕೂಲ್ ಗೆಳೆಯರ ಔತಣ ಕೂಟ ಸಾಬೀತುಪಡಿಸಿತು. ವರ್ಷಗಳ ಅಂತರ, ಉದ್ಯೋಗ ಕುಟುಂಬದ ಜವಾಬ್ದಾರಿಗಳ ನಡುವೆ ಕಳೆದುಹೋದಂತೆ ಕಂಡಿ–ದ್ದ ಗೆಳೆತನ, ಒಂದೇ ದಿನದಲ್ಲಿ ಮತ್ತೆ ಬಾಲ್ಯದ ದಿನಗಳಿಗೆ ಹಿಂದಿರುಗಿಸಿದ ಅನುಭವ ಈ ಕೂಟ ಎಲ್ಲರಿಗೂ ನೀಡಿತು.

ಹೈಸ್ಕೂಲ್ ದಿನಗಳು ಎಂದರೆ ಕೇವಲ ಪಾಠಶಾಲೆಯ ನಾಲ್ಕು ಗೋಡೆಗಳಲ್ಲ. ಅದು ಮುಗ್ಧತೆ, ನಿಸ್ವಾರ್ಥ ಸ್ನೇಹ, ಶಿಕ್ಷಕರ ಭಯ, ಪರೀಕ್ಷೆಗಳ ತಣಿವು, ಮಧ್ಯಾಹ್ನದ ಊಟದ ಡಬ್ಬಿ ಹಂಚಿಕೊಂಡ ಕ್ಷಣಗಳು, ಶಾಲೆಯ ಮೈದಾನದಲ್ಲಿ ಆಡಿದ ಆಟಗಳು, ಗುಪ್ತ ನಗು ತಮಾಷೆಗಳು ಒಂದಾಗಿ ಬದುಕಿನ ಅಮೂಲ್ಯ ಸಂಪತ್ತು. ಇಂದಿನ ಔತಣ ಕೂಟದಲ್ಲಿ ಗೆಳೆಯರು ಮುಖಾಮುಖಿಯಾದಾಗ, ಮೊದಲಿಗೆ ಕಣ್ಣುಗಳು ಗುರುತಿಸದಿದ್ದರೂ, ನಗು ಮಾತುಗಳು ಆರಂಭವಾದ ಕ್ಷಣದಲ್ಲೇ ಹಳೆಯ ಗೆಳೆತನ ಕ್ಷಣಾರ್ಧದಲ್ಲಿ ಜೀವಂತಗೊಂಡಿತು.




ನೀನು ಇನ್ನೂ ಹಾಗೇ ಇದ್ದೀಯಾ? ಅಂದು ನೀನು ಮಾಡಿದ ತಪ್ಪುತಪ್ಪಿನ ಕ್ಲಾಸ್ ವರ್ಕ್ ಕಿತಾಪತಿ ಇನ್ನೂ ನೆನಪಿದೆ, ಎಂಬ ಮಾತುಗಳ ನಡುವೆ ನಗು ಉಕ್ಕಿಬಂದಿತು. ಕೆಲವರು ಶಿಕ್ಷಕರಿಂದ ಪಡೆದ ಬೈಸುಗಳನ್ನು ನೆನಪಿಸಿಕೊಂಡರೆ, ಇನ್ನೂ ಕೆಲವರು ಶಾಲೆಯಿಂದ ತಪ್ಪಿಸಿಕೊಂಡ ದಿನಗಳ ಕಥೆಗಳನ್ನು ಹಂಚಿಕೊಂಡರು. ಕೆಲವರ ಮಾತಿನಲ್ಲಿ ಮೊದಲ ಗೆಳೆತನದ ಮೌನ ಪ್ರೀತಿಯ ನೆನಪುಗಳು ಹೊರಬಂದವು. ಈ ಎಲ್ಲ ಮಾತುಗಳು ಹಳೆಯ ದಿನಗಳ ಸನ್ನಿವೇಶಗಳನ್ನು ಮತ್ತೆ ಕಣ್ಣಮುಂದೆ ತಂದು ನಿಲ್ಲಿಸಿದವು.

ಕೂಟದಲ್ಲಿ ಭಾಗವಹಿಸಿದ್ದ ಅಶ್ವಿನ್ ಆಣದೂರೆ, ರಮೇಶ್ ಸಜ್ಜಶೆಟ್ಟಿ, ಮಹೇಶ ಕೋಲಿ, ದೀಪಾ ಪಾಟೀಲ್, ಯೋಗೀತಾ, ಸಂಗೀತಾ, ಮಾಲಾಶ್ರೀ, ಸಪ್ನಾ, ಮಂಜುಳಾ, ಅನುಸೂಯ, ಚಂದ್ರಕಾಂತ ಹಳ್ಳಿಖೇಡಕರ್, ಲಾಲಪ್ಪಾ, ಅಫಖಾನ ಸಾಬ್, ಹುಲ್ಲೆಪ್ಪಾ ಡೋಣೆ, ಮಾರುತಿ ಡೋಣೆ, ರಾಚಮ್ಮ, ವಿಠಲ್ ರಾಜನಾಳ, ದಶರಥ, ಬಸವರಾಜ್ ಡೋಣೆ, ಸಚಿನ ರಿಕ್ಕೆ, ರಾಜಕುಮಾರ ವಗ್ಗೆ, ಅಂಬಾದಾಸ್, ಲಕ್ಷ್ಮಣ್, ನಾಗನಾಥ್ ಮಚಕುರಿ, ಮಹಾಂತೇಶ್ ಗಂಜೆ ಸೇರಿದಂತೆ ಇತರೆ ಗೆಳೆಯರು ತಮ್ಮ ತಮ್ಮ ಬಾಲ್ಯದ ಅನಿಸಿಕೆಗಳನ್ನು ಹಂಚಿಕೊಂಡರು.

ಕೆಲವರು ಶಾಲೆಯ ಕೊನೆಯ ಬೆಂಚಿನ ಕುಳಿತ ನೆನಪುಗಳನ್ನು ಹೇಳಿಕೊಂಡರೆ, ಇನ್ನೂ ಕೆಲವರು ಮೈದಾನದಲ್ಲಿ ಆಡಿದ ಆಟಗಳು, ಶಿಕ್ಷಕರ ಕಣ್ಣು ತಪ್ಪಿಸಿ ಮಾಡಿದ ಶರಾರತ್ತುಗಳನ್ನು ನೆನಪಿಸಿಕೊಂಡರು. ಕೆಲವರ ಮಾತಿನಲ್ಲಿ ಅಂದು ಇದ್ದ ನಿರಾಳ ಜೀವನದ ಸೊಗಡು, ಇನ್ನೂ ಕೆಲವರ ಕಣ್ಣಲ್ಲಿ ಆ ದಿನಗಳ ನೆನಪಿನಿಂದ ಭಾವುಕತೆ ಕಾಣಿಸಿಕೊಂಡಿತು.

ಮೊಬೈಲ್‌ಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬಂಧಿತವಾಗಿರುವ ಇಂದಿನ ಬದುಕಿನಲ್ಲಿ, ಮುಖಾಮುಖಿಯಾಗಿ ಕುಳಿತು ಮನಬಿಚ್ಚಿ ಮಾತನಾಡಿದ ಈ ಕ್ಷಣಗಳು ಎಲ್ಲರ ಮನಸ್ಸಿಗೆ ಅಪಾರ ಸಂತೋಷ ನೀಡಿದವು. ಈ ಔತಣ ಕೂಟ ಕೇವಲ ಊಟದ ಕಾರ್ಯಕ್ರಮವಾಗಿರಲಿಲ್ಲ, ಅದು ಆತ್ಮೀಯತೆಯ ಮರುಸಂಪರ್ಕ, ಹಳೆಯ ಬಾಂಧವ್ಯದ ನೆನಪಾಯಿತ್ತು.

ಅಂದು ಒಂದೇ ಯುನಿಫಾರ್ಮ್ ಧರಿಸಿ, ಒಂದೇ ಬೆಂಚಿನಲ್ಲಿ ಕುಳಿತವರು ಇಂದು ವಿಭಿನ್ನ ವೃತ್ತಿ, ವಿಭಿನ್ನ ಸ್ಥಾನಗಳಲ್ಲಿ ಇದ್ದರೂ, ಹೃದಯದ ಬಾಂಧವ್ಯದಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಕೆಲವರ ಕಣ್ಣಲ್ಲಿ ಭಾವುಕತೆ, ಕೆಲವರ ಮಾತಿನಲ್ಲಿ ನಿರಂತರ ನಗು, ಕೆಲವರ ಮನಸ್ಸಿನಲ್ಲಿ ಕಳೆದುಹೋದ ಬಾಲ್ಯದ ಹುಡುಕಾಟ ಈ ಎಲ್ಲ ಭಾವನೆಗಳು ಕೂಟವನ್ನು ಇನ್ನಷ್ಟು ವಿಶೇಷವಾಗಿಸಿತು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)